ಜನಶಕ್ತಿ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 4 ಜನವರಿ 20-26, 1997 ಬೆಲೆ ರೂ. 2.00

ರಾವ್ ಸರಕಾರದ ನೀತಿಗಳ ಮುಂದುವರಿಕೆ ಬೇಡ

ಸಂಯುಕ್ತ ರಂಗದ ಸಕಾರಾತ್ಮಕ ಕಾರ್ಯಕ್ರಮ ಜ್ಯಾರಿಯಾಗಲಿ

ಸಿ.ಪಿ.ಐ(ಎಂ) ಪೊಲಿಟ್‌ಬ್ಯೂರೋ

ಫೆಬ್ರವರಿ 1ರಿಂದ 7ರವರೆಗೆ ಬೆಲೆಯೇರಿಕೆಯ ವಿರುದ್ಧ 'ಪ್ರತಿಭಟನಾ ವಾರ' ಆಚರಿಸಬೇಕೆಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ತನ್ನ ಎರಡು ದಿನಗಳ ಸಭೆಯ ನಂತರ ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ. ಇದರಲ್ಲಿ ಆಹಾರ ಧಾನ್ಯಗಳ, ಮುಖ್ಯವಾಗಿ ಗೋಧಿ ಮತ್ತು ಹಿಟ್ಟಿನ ಬೆಲೆ ಗಗನಕ್ಕೇರುತ್ತಿರುವುದರತ್ತ ಸರಕಾರದ ಗಮನ ಸೆಳೆದು ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಲೆವಿ ಸಕ್ಕರೆಯ ಬೆಲೆಯೇರಿಸುವುದರ ವಿರುದ್ಧ ಎಚ್ಚರಿಸಲಾಗುವುದು ಅಲ್ಲದೆ ಸಾರ್ವಜನಿಕ ವಿತರಣಾ ವ್ಯವಸ್ಥೆ ಅಥವಾ ರೇಶನ್ ವ್ಯವಸ್ಥೆಗೆ ಸಂಬಂಧಪಟ್ಟಂತೆ ಸಿಪಿಐ(ಎಂ)ನ ನಿಲುವನ್ನು ಪುನರುಚ್ಚರಿಸಲಾಗುವುದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿಕೆ ತಿಳಿಸಿದೆ.

ಬೆಲೆಯೇರಿಕೆಯಷ್ಟೇ ಅಲ್ಲ ಸಾರ್ವಜನಿಕ ವಲಯವನ್ನು ಕಳಚಿ ಹಾಕುವುದು, ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳ ಮಾರಾಟ, ವಿದೇಶೀ ಕಂಪನಿಗಳಿಗೆ ಮನಬಂದಂತೆ ಪ್ರವೇಶಿಸಲು ಅವಕಾಶ, ವಿಮಾ ವಲಯವನ್ನು ಖಾಸಗಿಯವರಿಗೆ ತೆರೆಯುವುದು ಮುಂತಾದ ರಾವ್ ಆಡಳಿತದ ನೀತಿಗಳನ್ನೆಲ್ಲಾ ಸಂಯುಕ್ತ ರಂಗ ಸರಕಾರ ಮುಂದುವರಿಸುತ್ತಿರುವುದರ ಬಗ್ಗೆ ಸಿಪಿಐ(ಎಂ) ತೀವ್ರ ಆತಂಕ ವ್ಯಕ್ತಪಡಿಸಿತು. ಇಂತಹ ಕ್ರಮಗಳನ್ನು ವಿರೋಧಿಸಿ ಕಾರ್ಮಿಕ ಸಂಘಗಳು ಮತ್ತು ಇತರ ಸಾಮೂಹಿಕ ಸಂಘಟನೆಗಳು ಹಮ್ಮಿಕೊಂಡಿರುವ ಪ್ರತಿಭಟನಾ ಕಾರ್ಯಾಚರಣೆಗಳಿಗೆ ಸಿಪಿಐ(ಎಂ) ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿತು.

'ಸಮಾನ ಕನಿಷ್ಠ ಕಾರ್ಯಕ್ರಮ'ದ ಸಕಾರಾತ್ಮಕ ಅಂಶಗಳನ್ನು ಉದಾಹರಣೆಗೆ ಆಹಾರ ಧಾನ್ಯಗಳನ್ನು ರೇಶನ್‌ನಲ್ಲಿ ಅರ್ಧ ಬೆಲೆಯಲ್ಲಿ ಮಾರುವುದು, ಕೃಷಿ ಕೂಲಿಕಾರರಿಗೆ ಸಮಗ್ರ ಶಾಸನ, ಮಹಿಳೆಯರಿಗೆ ಶೇ. 33 ಮೀಸಲಾತಿ, ಆರೋಗ್ಯ, ಶಿಕ್ಷಣ ಇತ್ಯಾದಿಗಳಿಗೆ ಹೆಚ್ಚಿನ ಹಣ ಮುಂತಾದ ಅಂಶಗಳನ್ನು ಅನುಷ್ಠಾನಕ್ಕೆ ತರಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸಂಯುಕ್ತ ರಂಗ ಸರಕಾರವನ್ನು ಆಗ್ರಹಪಡಿಸಿದೆ.

ಜನತೆಯ ಪರವಾದ ಪಾತ್ರ ವಹಿಸಲಿಕ್ಕಾಗಿ

ಪೊಲಿಟ್‌ಬ್ಯೂರೋ ಸಭೆಯ ನಂತರ ಪತ್ರಿಕಾ ಗೋಷ್ಠಿಯೊಂದರಲ್ಲಿ ಮಾತನಾಡುತ್ತಾ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಪಕ್ಷ ಸಂಯುಕ್ತ ರಂಗ ಸರಕಾರದ ಕೆಲವು ಧೋರಣೆಗಳನ್ನು ಬಲವಾಗಿ ಟೀಕಿಸಿದೆ ಎಂದರೆ ಅದು ಈ ಸರಕಾರದಿಂದ ದೂರವಿರಬಯಸುತ್ತದೆ ಎಂದೇನೂ ಅರ್ಥವಲ್ಲ ಎಂದು ಸ್ಪಷ್ಟಪಡಿಸಿದರು. "ಖಂಡಿತಾ ಇಲ್ಲ. ಸರಕಾರದಿಂದ ದೂರನಿಲ್ಲುವ ಪ್ರಶ್ನೆ ಚರ್ಚೆಗೇ ಬರಲಿಲ್ಲ. ಬದಲಿಗೆ ನಾವು ಸಂಯುಕ್ತ ರಂಗ ಸರಕಾರವನ್ನು ಎಡ, ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸುವ ಮೂಲಕ ಬಲಿಷ್ಟಗೊಳಿಸಬಯಸುತ್ತೇವೆ" ಎಂದು ಅವರು ಹೇಳಿದರು.

ಸರಕಾರವನ್ನು ಬಲಪಡಿಸಲು ಸಿಪಿಐ(ಎಂ) ಅದರೊಳಗೆ ಸೇರಿಕೊಳ್ಳುವುದಿಲ್ಲವೇಕೆ ಎಂದು ಪ್ರಶ್ನಿಸಿದಾಗ ಸುರ್ಜಿತ್ "ನಾವು ಹೊರಗಿದ್ದು ಹೆಚ್ಚು ಪ್ರಯೋಜನಕಾರೀ ಎಂದು ನಮ್ಮ ಭಾವನೆ. ನಾವು ಜನಗಳ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಬಹುದು. ಹೆಚ್ಚು ಎಚ್ಚರಿಕೆಯಿಂದ ಇರಬಹುದು. ನಾವು ಜನತೆಯ ಪರವಾದ ಪಾತ್ರವನ್ನು ಹೊರಗಿದ್ದುಕೊಂಡು ಹೆಚ್ಚು ಉತ್ತಮ ರೀತಿಯಲ್ಲಿ ವಹಿಸುತ್ತಿದ್ದೇವೆ" ಎಂದು ಉತ್ತರಿಸಿದರು.

ಸಾಧನೆಗಳ ಬಗ್ಗೆ ಕುರುಡಾಗಿಲ್ಲ

ಸಿಪಿಐ(ಎಂ) ಕೇವಲ ಸಂಯುಕ್ತ ರಂಗ ಸರಕಾರದ ನಕಾರಾತ್ಮಕ ಅಂಶಗಳನ್ನು ಮಾತ್ರ ನೋಡುತ್ತಿದೆ ಎಂಬುದೂ ಸರಿಯಲ್ಲ ಎಂದು ಸುರ್ಜಿತ್ ಸ್ಪಷ್ಟಪಡಿಸಿದರು. ಈ ಸರಕಾರ ಹಲವು ಪ್ರಮುಖ ಸಾಧನೆಗಳನ್ನು ಮಾಡಿದೆ-ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ತೀವ್ರ ಬದಲಾವಣೆಯಾಗಿದೆ, ಯಾವುದೇ ರಾಜ್ಯದ ವಿರುದ್ಧಪಕ್ಷಪಾತ ಅಥವಾ ಮಧ್ಯಪ್ರವೇಶ ನಡೆಯುತ್ತಿಲ್ಲ. ಇದು ಹಿಂದಿನ ನೀತಿಗಳಿಗಿಂತ ಸಂಪೂರ್ಣ ಬೇರೆಯಾದದ್ದು. ಕಾಶ್ಮೀರ ಸಮಸ್ಯೆಯ ಪರಿಹಾರ ಇನ್ನೊಂದು ದೊಡ್ಡ ಸಾಧನೆ. ಹಿಂದಿನ ಕಾಂಗ್ರೆಸ್ ಆಳ್ವಿಕೆಯಲ್ಲಿ ಇದನ್ನು ಸಾಧಿಸುವುದು ಎಂದೂ ಸಾಧ್ಯವಾಗಿರಲಿಲ್ಲ. ಏಕೆಂದರೆ ಆ ಪಕ್ಷ ರಾಷ್ಟ್ರೀಯ ಹಿತಾಸಕ್ತಿಗಳನ್ನು ಗಮನಿಸುವ ಬದಲು ಸಂಕುಚಿತ ದೃಷ್ಟಿಯಿಂದಲೇ ಈ ಸಮಸ್ಯೆಯನ್ನು ನೋಡುತ್ತಿತ್ತು. ಬಾಂಗ್ಲಾದೇಶದೊಂದಿಗೆ ಚಾರಿತ್ರಿಕ ಸಂಧಿ ಇನ್ನೊಂದು ದೊಡ್ಡ ಸಾಧನೆ. ಜನಗಳ ಹಿತಾಸಕ್ತಿಗಳಿಗೆ ವಿರುದ್ಧ ಹೋಗುವ ಸರಕಾರದ ಧೋರಣೆಗಳನ್ನಷ್ಟೇ ಸಿಪಿಐ(ಎಂ) ಟೀಕಿಸುತ್ತಿದೆ, ಹಾಗೆ ಟೀಕಿಸುವಾಗ ಈ ಸರಕಾರದ ಹಲವು ಸಾಧನೆಗಳ ಬಗ್ಗೆ ಅದು ಕುರುಡಾಗಿಲ್ಲ ಎಂದು ಸುರ್ಜಿತ್ ಒತ್ತಿ ಹೇಳಿದರು.

ನಮ್ಮ ಆತಂಕ ಬೇರೆ

ಸೀತಾರಾಂ ಕೇಸರಿ ನೇತೃತ್ವದಲ್ಲಿ ಕಾಂಗ್ರೆಸ್ ಬೆಂಬಲ ಹಿಂತೆಗೆದುಕೊಳ್ಳುವುದಾಗಿ ಆಗಾಗ ನೀಡುತ್ತಿರುವ ಬೆದರಿಕೆಗಳ ಬಗ್ಗೆ ಕೇಳಿದಾಗ ಸುರ್ಜಿತ್ "ಸೀತಾರಾಂ ಕೇಸರಿ ಏನು ಹೇಳಿದರೂ ಈ ಸರಕಾರ ಉಳಿಯುತ್ತದೆ. ನೀವು ಅವರನ್ನೇ ಕೇಳುವುದಿಲ್ಲವೇಕೆ? ಅವರು ಚುನಾವಣೆ ಎದುರಿಸಲು ಸಿದ್ಧರಿದ್ದಾರೆಯೇ? ಈ ಸರಕಾರ ಮುಂದುವರೆಯುತ್ತದೆ ಎಂಬ ಬಗ್ಗೆ ನನಗೆ ಸಂದೇಹವಿಲ್ಲ. ನನ್ನ ಆತಂಕ ಇದಲ್ಲ-ಬೇರೆ. ಜನಸಾಮಾನ್ಯರಿಗಾಗಿ ಎಷ್ಟು ಸಾಧ್ಯವೋ ಅಷ್ಟನ್ನೂ ಮಾಡಬೇಕೆಂಬುದೇ ನಮಗೆ ಬೇಕಾದ್ದು. ಈ ಮೂಲಕ ಈ ಸರಕಾರಕ್ಕೆ, ಅದನ್ನು ಬಲಗೊಳಿಸಲು ನಮ್ಮ ಬೆಂಬಲ ಸಾರ್ಥಕವಾಗಬೇಕು, ಎಡ, ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳು ಬಲಗೊಳ್ಳಬೇಕು" ಎಂದರು.

ಬಿಜೆಪಿ ಆಳವಾದ ಬಿಕ್ಕಟ್ಟಿನಲ್ಲಿ

ಸಂಯುಕ್ತ ರಂಗ ಸರಕಾರದ ಪ್ರಶ್ನೆಯಲ್ಲದೆ, ಮುಂಬರುವ ಪಂಜಾಬ್ ಚುನಾವಣೆ ಬಗ್ಗೆಯೂ ಸುರ್ಜಿತ್ ಮಾತನಾಡಿದರು. ಸಿಪಿಐ(ಎಂ) ಪಕ್ಷ ಸಿಪಿಐ, ಜನತಾದಳ ಹಾಗೂ ಸಮಾಜವಾದ ಪಕ್ಷದೊಡಗೂಡಿ ಕಾಂಗ್ರೆಸ್(ಐ) ಮತ್ತು ಅಕಾಲಿದಳ-ಬಿಜೆಪಿ ಕೂಟ ಇವರೆಡರ ವಿರುದ್ಧವೂ ಹೋರಾಡುವುದಾಗಿ ಅವರು ಹೇಳಿದರು. ಬಿಜೆಪಿ ಒಂದಾದ ಮೇಲೆ ಒಂದರಂತೆ ಹಲವಾರು ರಾಜ್ಯಗಳಲ್ಲಿ ಮತ್ತೆ-ಮತ್ತೆ ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ಪ್ರಸ್ತಾಪಿಸುತ್ತಾ ಆ ಪಕ್ಷಕ್ಕೆ ಯಾವುದೇ ನೀತಿಗಳಿಲ್ಲ, ಹೇಗಾದರೂ ಅಧಿಕಾರದಲ್ಲಿ ಉಳಿಯುವುದಷ್ಟೇ ಅದರ ನೀತಿ ಎಂಬುದು ಈಗ ಸುಸ್ಪಷ್ಟವಾಗುತ್ತಿದೆ ಎಂದರು. ಮೇಲ್ಜಾತಿಗಳ 'ಹಿಂದುತ್ವ' ದೃಷ್ಟಿಕೋಣ ಹಾಗೂ ಪಕ್ಷದೊಳಗಿರುವ ಹಿಂದುಳಿದ ಮತ್ತು ಪರಿಶಿಷ್ಟ ಜಾತಿಗಳ ಆಕಾಂಕ್ಷೆಗಳ ನಡುವಿನ ವೈರುಧ್ಯ ಬಿಜೆಪಿಯ ಆಳವಾದ ಬಿಕ್ಕಟ್ಟಿನ ಒಂದು ಪ್ರಮುಖ ಕಾರಣ ಎಂದು ಸುರ್ಜಿತ್ ಅಭಿಪ್ರಾಯಪಟ್ಟರು.

(ಐಎನ್‌ಎಸ್)

ರಾಷ್ಟ್ರೀಯ ನೀತಿಗಳನ್ನು ರೂಪಿಸಿ ಕಾವೇರಿ ಜಲ ವಿವಾದಕ್ಕೆ ಇತ್ಯರ್ಥ

ಸರ್ವ ಪಕ್ಷ ಸಭೆ ನಿರ್ಧಾರ

ಜನವರಿ 17ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಜೆ.ಹೆಚ್.ಪಟೇಲರು ಕರೆದ ಸರ್ವ ಪಕ್ಷ ಸಭೆ ಕಾವೇರಿ ಜಲ ವಿವಾದ ಕುರಿತಂತೆ ಚರ್ಚಿಸಿ ಮಾತುಕತೆಗಳ ಮೂಲಕವೇ ಇತ್ಯರ್ಥ ಸಾಧ್ಯ ಎಂಬ ತೀರ್ಮಾನಕ್ಕೆ ಬಂದಿದೆ. ಇದಕ್ಕೆ ಅಂತರರಾಜ್ಯ ನದಿ ನೀರು ವಿವಾದಗಳ ಪರಿಹಾರ ಕುರಿತಂತೆ ರಾಷ್ಟ್ರೀಯ ನಿರ್ದೇಶನ ಸೂತ್ರಗಳನ್ನು ತಕ್ಷಣವೇ ಕೇಂದ್ರ ಸರಕಾರ ರೂಪಿಸಬೇಕು ಎಂದು ಒತ್ತಾಯಿಸಿದೆ.

ಈ ಸರ್ವ ಪಕ್ಷ ಸಭೆ ಕೈಗೊಂಡ ತೀರ್ಮಾನಗಳು ಹೀಗಿವೆ:

೧. ಟ್ರಿಬ್ಯೂನಲ್‌ನ್ನು ಬಹಿಷ್ಕರಿಸುವುದು ಸೂಕ್ತವಲ್ಲ. ಆದ್ದರಿಂದ ಟ್ರಿಬ್ಯೂನಲ್‌ನ ಕಾರ್ಯ ಕಲಾಪಗಳಲ್ಲಿ ಭಾಗವಹಿಸುವುದು.

೨. ಆದರೆ ಅಂತರ್‌ಜಲ ವಿವಾದವನ್ನು ಇತ್ಯರ್ಥ ಮಾಡುವ ನಿರ್ದೇಶನ ಸೂತ್ರಗಳನ್ನು ಕೇಂದ್ರ ಸರಕಾರವು ಎಲ್ಲಾ ಮುಖ್ಯಮಂತ್ರಿಗಳ ಸಲಹೆ ಪಡೆದು ಕೂಡಲೇ (ಫೆಬ್ರವರಿ 1996) ಪ್ರಕಟಿಸುವುದು ಎಂದು ಹಿಂದಿನ ಪ್ರಧಾನಿಗಳು 1995ರ ಡಿಸೆಂಬರ್‌ನಲ್ಲೇ ಕರ್ನಾಟಕಕ್ಕೆ ಆಶ್ವಾಸನೆ ಕೊಟ್ಟಿದ್ದರು. ಆ ಆಶ್ವಾಸನೆಯನ್ನು ನೆನಪಿಸಿ, ಈಗಿನ ಪ್ರಧಾನಿ ದೇವೇಗೌಡರಿಗೆ ಅಂತಹಸೂತ್ರಗಳನ್ನುನಿರ್ಧರಿಸಲು ಮುಂದಾಗಬೇಕೆಂದು ಸರ್ವ ಪಕ್ಷಗಳು ಪ್ರಧಾನಿ ದೇವೇಗೌಡರಿಗೆ ಮನವಿ ಕೊಡುವುದು.

೩. ಸುಪ್ರೀಂಕೋರ್ಟ್‌ಗೆ ಅರಿಕೆ ಮಾಡಿ ಅಂತಹ ಜಲ ವಿವಾದ ಇತ್ಯರ್ಥ ಮಾಡುವ ಸೂತ್ರಗಳನ್ನು ಕೇಂದ್ರ ಸರಕಾರವು ಕಾನೂನಿನ ಪ್ರಕಾರ ತೀರ್ಮಾನ ಮಾಡುವ ತನಕ ಟ್ರಿಬ್ಯೂನಲ್ ಕಾವೇರಿ ಜಲ ವಿವಾದದ ವಿಷಯದಲ್ಲಿ ಅವಸರವಾಗಿ ತೀರ್ಪು ಕೊಡಲು ಮುಂದಾಗಬಾರದು ಎಂದು ನಿರ್ದೇಶನ ನೀಡುವಂತೆ ಪ್ರಯತ್ನಿಸಬೇಕು.

ಒಟ್ಟಿನಲ್ಲಿ ಈ ಸರ್ವ ಪಕ್ಷಗಳ ಸಭೆಯಲ್ಲಿ "ಕಾವೇರಿ ಜಲ ವಿವಾದವು ಮಾತುಕತೆಗಳ ಮೂಲಕವೇ ಇತ್ಯರ್ಥವಾಗಲು ಸಾಧ್ಯ" ಎಂಬ ಅಭಿಪ್ರಾಯಗಳನ್ನು ಸರ್ವ ಸಮ್ಮತ ಅಭಿಪ್ರಾಯದಿಂದ ಅಂಗೀಕರಿಸಲಾಯಿತು.

ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಜೆ.ಹೆಚ್.ಪಟೇಲರೂ, ತಮಿಳುನಾಡಿನ ಮುಖ್ಯಮಂತ್ರಿಗಳಾದ ಶ್ರೀ ಕರುಣಾ ನಿಧಿಯವರೂ ಕಾವೇರಿ ಜಲ ವಿವಾದವನ್ನು ಮಾತುಕತೆಗಳ ಮೂಲಕ ಇತ್ಯರ್ಥ ಮಾಡಬೇಕೆಂದು ೫ ಸುತ್ತುಗಳಲ್ಲಿ ಮಾತುಕತೆ ಮಾಡಿದರು. ನಾಲ್ಕು ಸುತ್ತುಗಳ ಮಾತುಕತೆ ಗಳಲ್ಲಿ ಇತ್ಯರ್ಥದ ಕುರಿತು ಆಶಾದಾಯಕ ವಾತಾವರಣವು ಹುಟ್ಟಿತ್ತಾದರೂ, ೫ನೇ ಸುತ್ತಿನಲ್ಲಿ ಇದೀಗ ಮಾತುಕತೆಗಳು ಮುರಿದು ಬಿದ್ದ ಹಿನ್ನೆಲೆಯಲ್ಲಿ ಈ ಸರ್ವ ಪಕ್ಷ ಸಭೆಯನ್ನು ಕರ್ನಾಟಕದ ಮುಖ್ಯಮಂತ್ರಿಗಳು ಕರೆದಿದ್ದರು.

ಟ್ರಿಬ್ಯೂನಲ್‌ನ ಮಧ್ಯವರ್ತಿ ತೀರ್ಪಿನ ಆಧಾರದ ಚೌಕಟ್ಟನ್ನು ಬಿಟ್ಟು ಮಾತುಕತೆ ಗಳು ಇಲ್ಲವೆಂದು ಕರುಣಾನಿಧಿಯವರು ಕೊನೆಗಳಿಗೆಯಲ್ಲಿ ಹಠ ಹಿಡಿದುದೇ ಈ ವಿಫಲತೆಗೆ ಕಾರಣವೆಂದು ಹೇಳಲಾಗುತ್ತಿದೆ.

ಸಿಪಿಐ(ಎಂ) ಪಕ್ಷದ ಪರವಾಗಿ ಪಿ.ರಾಮಚಂದ್ರರಾವ್, ಎಸ್.ಸೂರ್ಯನಾರಾಯಣರಾವ್, ಎನ್.ಕೆ. ಉಪಾಧ್ಯಾಯ ಮತ್ತು ಶಾಸಕರಾದ ಶ್ರೀರಾಮರೆಡ್ಡಿ ಭಾಗವಹಿಸಿದ್ದರು.

ಸಭೆ ಆರಂಭವಾದಾಗ ಶ್ರೀ ವಾಟಾಳ್ ನಾಗರಾಜ್‌ರವರು ಹೊರ ನಡೆದು "ತಮಿಳುನಾಡಿಗೆ ಧಿಕ್ಕಾರ, ಕಾವೇರಿ ಟ್ರಿಬ್ಯೂನಲ್‌ನ್ನು ಬಹಿಷ್ಕರಿಸಿ" ಎಂದು ಕೂಗುತ್ತಾ ಹೊರನಡೆದರು.

ಆನಂತರ, ಬಿಜೆಪಿಯ ತಂಗಾ ಇವರು "ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದು ಕೊಳ್ಳದೆ ಮಾತುಕತೆ ನಡೆಸಿದುದನ್ನು ನಾವು ತೀವ್ರವಾಗಿ ವಿರೋಧಿಸುತ್ತೇವೆ. ನಮಗೆ ಮಾತುಕತೆ ಮುರಿದು ಬೀಳುತ್ತದೆ ಎಂದು ಮೊದಲೇ ಗೊತ್ತಿತ್ತು. ಟ್ರಿಬ್ಯೂನಲ್‌ನ್ನು ಬಹಿಷ್ಕರಿಸಬೇಕಿತ್ತು ಎಂದು ಮೊದಲೇ ಶಾಸನ ಸಭೆ ತೀರ್ಮಾನ ಮಾಡಿತು. ಆದ್ದರಿಂದ, ಸರಕಾರವು ಟ್ರಿಬ್ಯೂನಲ್‌ನಲ್ಲಿ ಭಾಗವಹಿಸುತ್ತಿರುವುದರಿಂದ ನಾವು ಈ ಸಭೆಯಲ್ಲಿ ಯಾವುದೊಂದು ಅಭಿಪ್ರಾಯ ಕೊಡಲು ತಯಾರಿಲ್ಲ" ಎಂದು ಹೇಳಿ ಅವರೂ ಅವರ ಇತರ ಅನುಯಾಯಿಗಳೂ ಬಹಿಷ್ಕರಿಸಿದರು.

ಆಮೇಲೆ ಕಾಂಗ್ರೆಸ್(ಐ) ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು 'ಕಾವೇರಿ ವಿವಾದವನ್ನೇ ವಿಷಯವನ್ನಾಗಿಟ್ಟು ವಿಧಾನಸಭೆಯನ್ನು ಕರೆಯಿರಿ. ಕರೆಯುತ್ತೇವೆ ಎಂದು ಹೇಳಿದಾಗ ಮಾತ್ರ ನಾವು ಇಲ್ಲಿ ಕುಳಿತುಕೊಳ್ಳುತ್ತೇವೆ ಇಲ್ಲವಾದರೆ ನಾವೂ ಹೊರಗೆ ನಡೆಯಬೇಕಾಗುವುದು ಎಂದು ಹೇಳಿ ಅವರೂ ಅವರ ಇತರ ಕಾಂಗ್ರೆಸ್(ಐ) ಅನುಯಾಯಿಗಳು ಹೊರನಡೆದರು.

ಆಗ ಸಭೆಯಲ್ಲಿ ಉಳಿದ ರಾಜ್ಯ ರೈತ ಸಂಘ, ಸಿಪಿಐ, ಸಿಪಿಐ(ಎಂ) ಮತ್ತು ಜನತಾದಳ ಮತ್ತಿತರ ಪಕ್ಷಗಳ ಪ್ರತಿನಿಧಿಗಳು ಚರ್ಚಿಸಿ ಈ ತೀರ್ಮಾನಗಳಿಗೆ ಬಂದಿದ್ದಾರೆ.


ಸಿಪಿಐ(ಎಂ) ಮುಖಂಡರು ಸಭೆಯಲ್ಲಿ "ಈ ವಿಷಯದಲ್ಲಿ ಯಾವುದೇ ರೀತಿಯ ಭಾವಾವೇಶಕ್ಕೆ ಎಡೆಗೊಡದಂತೆ ಪಕ್ಷ ರಾಜಕೀಯ ಮಾಡದೆ ಎರಡೂ ರಾಜ್ಯಗಳ ರೈತರಿಗೆ ಅನುಕೂಲವಾಗುವಂತೆ ಕಾವೇರಿ ನೀರಿನ ವಿವಾದವನ್ನು ಇತ್ಯರ್ಥ ಮಾಡಲು ಮುಂದಾಗಬೇಕು" ಎಂದು ಪಕ್ಷದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಕೇಂದ್ರ ಸರಕಾರದ ಸಿರಿವಂತ ಪರ ನೀತಿಗಳನ್ನು ಸಹಿಸಲು ಸಾಧ್ಯವಿಲ್ಲ - ಜ್ಯೋತಿ ಬಸು ▷ ಪುಟ 2


ಕೊಜೆಂಟ್ರಿಕ್ಸ್ ವಿದ್ಯುತ್ ಯೋಜನೆ
"ಜನಗಳನ್ನು ಸುಲಿದು ವಿದೇಶಿ ಕಂಪನಿಗಳನ್ನು ಕೊಬ್ಬಿಸುವ ವಿದ್ಯುತ್ ನೀತಿಯ ಮತ್ತೊಂದು ಉದಾಹರಣೆ" ▷ ಪುಟ 4

"ನನ್ನ ರಾಜ್ಯ ಈಶಾನ್ಯ ಭಾರತದ ಕೆಂಪು ತಾರೆ"
ತ್ರಿಪುರಾ ಸಚಿವರೊಂದಿಗೆ ಆತ್ಮೀಯ ಸಂದರ್ಶನ ▷ ಪುಟ 6

ದುಡಿಯುವ ಜನರ ದೈನಿಕ "ಗಣಶಕ್ತಿ"ಗೆ ಹೊಸ ಶಕ್ತಿ ▷ ಪುಟ 6


ಮಹಿಳಾ ಸಮಾನತೆಯ ಹಾದಿಯಲ್ಲಿ ಮೀಸಲಾತಿ ▷ ಪುಟ 8

ಭಗತ್‌ಸಿಂಗ್, ಚಂದ್ರಶೇಖರ್ ಆಜಾದ್‌ರಂತಹ ಕ್ರಾಂತಿಕಾರಿ ದೇಶಪ್ರೇಮಿಗಳ ಪರಂಪರೆಯಲ್ಲಿ ಕೊನೆಯ ಕೊಂಡಿಯಾಗಿದ್ದ ಕಾಂ. ಶಿವವರ್ಮ ಜನವರಿ 10ರಂದು ನಿಧನರಾದರು. ಇವರ ಸ್ಫೂರ್ತಿದಾಯಕ ಜೀವನದ ಒಂದು ಕಿರು ಚಿತ್ರ - ಮುಂದಿನ ವಾರ. ▷



ಕೇಂದ್ರ ಸರಕಾರದ ಸಿರಿವಂತ ಪರ ನೀತಿಗಳನ್ನು ದುಡಿಯುವ ಜನ ಸಹಿಸುವುದಿಲ್ಲ - ಜ್ಯೋತಿ ಬಸು

ಕೇಂದ್ರ ಸರಕಾರದ ಸಿರಿವಂತರ ಪರ ಹಾಗೂ ಕಾರ್ಮಿಕ ವರ್ಗ-ವಿರೋಧಿ ಧೋರಣೆಗಳ ವಿರುದ್ಧ ಒಂದು ಅವಿಶ್ರಾಂತ ಹೋರಾಟ ನಡೆಸಬೇಕು ಎಂದು ಸಿಐಟಿಯು ಉಪಾಧ್ಯಕ್ಷರೂ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳೂ ಆದ ಜ್ಯೋತಿ ಬಸು ಜನವರಿ 5ರಂದು ವಿಶಾಖಪಟ್ಟಣದಲ್ಲಿ 50 ಸಾವಿರ ಮಂದಿ ಭಾಗವಹಿಸಿದ್ದ ಒಂದು ಬೃಹತ್ ರ‍್ಯಾಲಿಯನ್ನುದ್ದೇಶಿಸಿ ಮಾತನಾಡುತ್ತಾ ಕರೆ ನೀಡಿದರು. ಸಿಐಟಿಯುನ ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆಯ ಸಂದರ್ಭದಲ್ಲಿ ಸಿಐಟಿಯುವಿನ ವಿಶಾಖಪಟ್ಟಣ ಜಿಲ್ಲಾ ಸಮಿತಿ ಈ ರ‍್ಯಾಲಿಯನ್ನು ಏರ್ಪಡಿಸಿತ್ತು.

ಸರಕಾರದ ಸಿರಿವಂತ ಪರ ಹಾಗೂ ದುಡಿಯುವ ಜನ ವಿರೋಧಿ ನೀತಿಗ್ಗಳನ್ನು ಸಹಿಸಿಕೊಳ್ಳುವುದು ಸಿಐಟಿಯು ಮತ್ತು ಸಿಪಿಐ(ಎಂ)ಗೆ ಸಾಧ್ಯವೇ ಇಲ್ಲ, ಅದನ್ನು ನಾವು ಖಡಾಖಂಡಿತವಾಗಿ ವಿರೋಧಿಸುತ್ತೇವೆ ಎಂದು ಜ್ಯೋತಿ ಬಸು ಹೇಳಿದರು. ದೇವೇಗೌಡರ ಸರಕಾರ ಸಂಯುಕ್ತರಂಗದ ಸಮಾನ ಕನಿಷ್ಠ ಕಾರ್ಯಕ್ರಮವನ್ನು ಜ್ಯಾರಿಗೆ ತರಲು ಗಂಭೀರ ಪ್ರಯತ್ನ ನಡೆಸದಿದ್ದರೆ ನಾವು ಜನಗಳ ಬಳಿಗೆ ಹೋಗುತ್ತೇವೆ ಎಂದು ಅವರು ಹೇಳಿದರು.

ಪ್ರತಿ ದಿನ ರಾಜಕೀಯ ಮುಖಂಡರ ಬೃಹತ್ ಪ್ರಮಾಣದ ಭ್ರಷ್ಟಾಚಾರದ ಸುದ್ದಿಗಳು ಬರುತ್ತಲೇ ಇವೆ. ಭಾರತದ ಕಾಳಸಂತೆಯಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗ್ಗಳ ವ್ಯವಹಾರ ನಡೆಯುತ್ತಿದೆ. ಆದರೂ ಭಾರತ ವಿದೇಶಗಳಿಂದ ಸಾಲ ತರುತ್ತಿದೆ ಎಂದ ಜ್ಯೋತಿ ಬಸುರವರು ಕಾಂಗ್ರೆಸ್ ಮತ್ತಿತರ ರಾಜಕೀಯ ಪಕ್ಷಗಳಿಗೆ ನೈತಿಕತೆಯಲ್ಲಿ ನಂಬಿಕೆಯಿದ್ದಂತಿಲ್ಲ ಎಂದರು. ಶ್ರಮಜೀವಿಗಳು ತಮ್ಮ ಪ್ರಜ್ಞೆಯನ್ನು ಹೆಚ್ಚಿಸಿಕೊಂಡು ಇತರ ಪಕ್ಷಗಳ ಜಾತೀವಾದಿ, ಕೋಮುವಾದಿ ರಾಜಕೀಯದ ವಿರುದ್ಧ ಹೋರಾಡಬೇಕಾಗಿದೆ ಎಂದರು.

ಪಶ್ಚಿಮ ಬಂಗಾಳದಲ್ಲಿ ಸತತವಾಗಿ ಎಡರಂಗ ಸರಕಾರ ಕೇಂದ್ರದ ಕಾಂಗ್ರೆಸ್ ಸರಕಾರಗಳ ವೈರಿಪೂರ್ಣ ನಿಲುಮೆಗಳನ್ನು ಎದುರಿಸಿಯೂ ಸಣ್ಣ ಪ್ರಮಾಣದ ಉದ್ದಿಮೆಗಳ ವಲಯದಲ್ಲಿ ಪ್ರಥಮ ಸ್ಥಾನ ಪಡೆದಿದೆ, ಗೋಧಿ ಉತ್ಪಾದನೆಯಲ್ಲಿ ಪಂಜಾಬ್, ಹರ್‍ಯಾಣಗಳನ್ನು ಹಿಂದೆ ಹಾಕಿದೆ, ವಿದ್ಯುತ್ ಪರಿಸ್ಥಿತಿ ಸುಧಾರಿಸಿದೆ ಹಾಗೂ ಕಾರ್ಮಿಕರಿಗೆ ಪೂರ್ಣ ಟ್ರೇಡ್ ಯೂನಿಯನ್ ಹಕ್ಕುಗಳಿವೆ ಎಂದು ದುಡಿಯುವ ಜನ-ಪರವಾದ ರಾಜಕೀಯದ ಫಲಗಳ ಬಗ್ಗೆ ವಿವರಿಸಿದರು.

ಸಿಐಟಿಯು ಅಧ್ಯಕ್ಷರಾದ ಬಾಲಾನಂದನ್ ಮಾತನಾಡುತ್ತಾ ಸಿಐಟಿಯು ಒಂದು ವಿಭಿನ್ನ ತರದ ಸಂಘಟನೆ ಎಂದರು. ಅದು ಕಾರ್ಮಿಕ ವರ್ಗದ ಸಮಸ್ಯೆಗಳೊಂದಿಗೆ ಇತರ ಶ್ರಮ ಜೀವಿ ವಿಭಾಗಗಳ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಡುತ್ತಿದೆ ಎಂದರು. ಚಿದಂಬರಂ ಮನಮೋಹನಸಿಂಗ್‌ರ ನೀತಿಗಳನ್ನೇ ಮುಂದುವರಿಸಿದ್ದರಿಂದ ಗೋಧಿಯ ಬೆಲೆ10 ರೂ. ಆಯಿತೆಂದ ಅವರು ದೇವೇಗೌಡ ಸರಕಾರ ಈ ನೀತಿಗಳನ್ನು ಬದಲಿಸಬೇಕು ಎಂದರು.

ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆಯವರು ಮಾತನಾಡುತ್ತಾ ಖಾಸಗೀಕರಣ ನೀತಿಯನ್ನು ಬಲವಾಗಿ ಟೀಕಿಸಿದರು. ಬಿರ್ಲಾಗಳು, ಟಾಟಾಗಳು ಮತ್ತಿತರ ಬಂಡವಾಳಶಾಹಿಗಳಿಂದ ಕೋಟಿಗಟ್ಟಲೆಗಳಷ್ಟಾಗುವ ತೆರಿಗೆಗಳನ್ನು ವಸೂಲು ಮಾಡದ ಸರಕಾರ ದೇಶದಲ್ಲಿ ಮೂಲ ಸೌಕರ್ಯಗಳನ್ನು ಬೆಳೆಸಲು ಹಣ ಇಲ್ಲ ಎನ್ನುತ್ತಿದೆ ಎಂದು ಟೀಕಿಸಿದರು. ಸರಕಾರ ಇದೇ ನೀತಿ ಮುಂದುವರಿಸಿದರೆ ಹೆಚ್ಚೆಚ್ಚು ಉದ್ದಿಮೆಗಳು ರೋಗಗ್ರಸ್ತವಾಗುತ್ತವೆ ಎಂದ ಅವರು ಸರಕಾರದ ನೀತಿಗಳು ದೇಶದ ಕೈಗಾರಿಕಾ ನೆಲೆಯನ್ನು ಅಭಿವೃದ್ಧಿ ಪಡಿಸಲು ಏನೂ ಮಾಡುತ್ತಿಲ್ಲ ಎಂದು ಖೇದ ವ್ಯಕ್ತಪಡಿಸಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಇತರರೆಂದರೆ ಎನ್.ಪ್ರಸಾದ್ ರಾವ್, ಬಿ.ವಿ.ರಾಘವುಲು ಮತ್ತು ಡಾ. ಕೆ.ಹೇಮಲತಾ.

ಬಹಿರಂಗ ಸಭೆಯ ಮೊದಲು ವಿಶಾಖ ಪಟ್ಟಣದ ಬೀದಿಗಳಲ್ಲಿ ಕೆಂಬಾವುಟಗಳನ್ನು ಹೊತ್ತ ಒಂದು ದೊಡ್ಡ ಮೆರವಣಿಗೆ ನಡೆಯಿತು.

ಏಪ್ರಿಲ್ 6-10 ಸಿಐಟಿಯು ಅಖಿಲ ಭಾರತ ಸಮ್ಮೇಳನ

ಸಿಐಟಿಯುನ ಅಖಿಲ ಭಾರತ ಒಂಭತ್ತನೇ ಸಮ್ಮೇಳನವನ್ನು ಏಪ್ರಿಲ್ 6ರಿಂದ 10ರವರೆಗೆ ಕೇರಳದ ಎರ್ನಾಕುಲಂ-ಕೊಚ್ಚಿನ್‌ನಲ್ಲಿ ನಡೆಸಲು ವಿಶಾಖಪಟ್ಟಣದಲ್ಲಿ ಜನವರಿ 8ರವರೆಗೆಸಭೆ ಸೇರಿದ್ದ ಸಿಐಟಿಯು ಜನರಲ್ ಕೌನ್ಸಿಲ್ ನಿರ್ಧರಿಸಿದೆ. ಇದರಲ್ಲಿ ದೇಶದೆಲ್ಲೆಡೆಯಿಂದ 2500 ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ. ಸಮ್ಮೇಳನದ ಮೊದಲು ಏಪ್ರಿಲ್ 4-5ರಂದು ದುಡಿಯುವ ಮಹಿಳೆಯರ ಸಮ್ಮೇಳನವೂ ನಡೆಯಲಿದೆ.

ಇದಕ್ಕೆ ಮೊದಲು ಫೆಬ್ರವರಿ 17ರಿಂದ 22ರವರೆಗೆ ಕಲ್ಕತ್ತೆಯಲ್ಲಿ ಸಾಗರೋತ್ತರ ಕಾರ್ಮಿಕ ಸಂಘಟನೆಗಳ ಸಮ್ಮೇಳನ ನಡೆಯಲಿದೆ. ಸಿಐಟಿಯು ಇದರಲ್ಲಿ ಮುಖ್ಯ ಪಾತ್ರ ವಹಿಸಲಿದೆ. ಮೂರು ವರ್ಷಗಳ ಹಿಂದೆ ಆಸ್ಟ್ರೇಲಿಯಾದಲ್ಲಿ ದಕ್ಷಿಣ ಏಶ್ಯಾದ ಕಾರ್ಮಿಕ ಸಂಘಟನೆಗಳ ಸಮ್ಮೇಳನ ನಡೆದಿತ್ತು. ಸಮಾಜವಾದಿ ಬಣ ಕುಸಿದ ನಂತರ ವಿಶ್ವಾದ್ಯಂತ ಕಾರ್ಮಿಕರ ಮೇಲೆ ಹೆಚ್ಚುತ್ತಿರುವ ದಬ್ಬಾಳಿಕೆಗಳು ಮತ್ತು ಖಾಸಗೀಕರಣದ ವಿರುದ್ಧ ನಡೆಯಲಿರುವ ಈ ಅಂತರ್ರಾಷ್ಟ್ರೀಯ ಸಮ್ಮೇಳನದಲ್ಲಿ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ್, ಮಲೇಶ್ಯಾ, ಇಂಡೋನೇಶ್ಯಾ, ಕಾಂಬೋಡಿಯಾ, ಥೈಲಾಂಡ್, ದಕ್ಷಿಣ ಕೊರಿಯಾ, ಫಿಲಿಪ್ಪೀನ್ಸ್ ಮುಂತಾದ ಏಶ್ಯಾದ ದೇಶಗಳ, ಲೆಬನಾನ್, ಈಜಿಪ್ತ್ ಮುಂತಾದ ಪಶ್ಚಿಮ ಏಶ್ಯಾದ ದೇಶಗಳ, ಕೆನ್ಯಾ, ದಕ್ಷಿಣ ಆಫ್ರಿಕಾ ಮುಂತಾದ ಆಫ್ರಿಕಾ ಖಂಡದ ದೇಶಗಳ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಹಾಗೂ ಇಂಗ್ಲೆಂಡ್, ಫ್ರಾನ್ಸ್ ಮುಂತಾದ ಕೆಲವು ಯುರೋಪಿಯನ್ ದೇಶಗಳ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಹಾಗೂ ಚೀನಾ ಮತ್ತು ವಿಯೆಟ್ನಾಂ ಪ್ರತಿನಿಧಿಗಳು ವೀಕ್ಷಕರಾಗಿ ಭಾಗವಹಿಸಲಿದ್ದಾರೆ. ವಿದೇಶಗಳ 140 ಪ್ರತಿನಿಧಿಗಳು ಹಾಗೂ ಭಾರತದ ವಿವಿಧ ಕಾರ್ಮಿಕ ಸಂಘಟನೆಗಳ, ಕೈಗಾರಿಕಾ ಒಕ್ಕೂಟಗಳ ಒಟ್ಟು 160 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಲಿದ್ದಾರೆ. ಈ ಸಮ್ಮೇಳನ ಖಾಸಗೀಕರಣ ಮತ್ತು ಕಾರ್ಮಿಕರ ದಮನದ ವಿರುದ್ಧ ಅಂತರ್ರಾಷ್ಟ್ರೀಯ ಕಾರ್ಯಾಚರಣೆಗೆ ಕರೆ ನೀಡುವ ಸಂಭವವಿದೆ.

ಕನಿಷ್ಠ ಕೂಲಿ ಕುರಿತಂತೆ ಒಂದು ಸಮಗ್ರ ವರದಿ ತಯಾರಿಸಿ ಏಪ್ರಿಲ್ ಸಮ್ಮೇಳನದಲ್ಲಿ ಮಂಡಿಸಬೇಕೆಂದೂ ಸಿಐಟಿಯು ಜನರಲ್ ಕೌನ್ಸಿಲ್ ನಿರ್ಧರಿಸಿದೆ. ವಿಶಾಖಪಟ್ಟಣಂ ಉಕ್ಕು ಕಾರ್ಖಾನೆ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸುತ್ತಿಲ್ಲದ ವಿರುದ್ಧ ಒಂದು ನಿರ್ಣಯವನ್ನು ಸೇರಿದಂತೆ ಆರು ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

ಎಡ ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ಶಕ್ತಿಗಳನ್ನು ಗೆಲ್ಲಿಸಿ ಪಂಜಾಬಿನ ಮತದಾರರಿಗೆ ಮನವಿ

ಪಂಜಾಬಿನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ-ಅಕಾಲಿದಳ ಕೂಟ ಒಡ್ಡಿರುವ ಕೋಮುವಾದೀ ಅಪಾಯ ಹಾಗೂ ಕಾಂಗ್ರೆಸ್ ವಿಶ್ವಾಸಾರ್ಹತೆಗಳನ್ನು ಕಳಕೊಂಡಿರುವ ಹಿನ್ನೆಲೆಯಲ್ಲಿ ಸಿಪಿಐ(ಎಂ), ಸಿಪಿಐ, ಸಮಾಜವಾದಿ ಪಕ್ಷ ಮತ್ತು ಜನತಾದಳ ಇವರಿಬ್ಬರನ್ನು ವಿರೋಧಿಸಿ ಎಡ, ಪ್ರಜಾಪ್ರಭುತ್ವ ವಾದೀ ಹಾಗೂ ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸಲು ಒಗ್ಗಟ್ಟಿನಿಂದ ಹೋರಾಡುವುದಾಗಿ ಈ ನಾಲ್ಕುಪಕ್ಷಗಳ ಮುಖಂಡರು ಹೇಳಿದ್ದಾರೆ. ಈ ನಾಲ್ಕು ಪಕ್ಷಗಳ ಅಭ್ಯರ್ಥಿಗಳಿಗೆ ಮತ ನೀಡಿ ಪಂಜಾಬಿನಲ್ಲಿ ಶಾಂತಿ ನೆಲೆಗೊಳಿಸಲು ಪಂಜಾಬೀ ಜನತೆಯ ಐಕ್ಯತೆಯನ್ನು ಬಲಪಡಿಸಲು ಹಾಗೂ ಪಂಜಾಬ್ ಒಂದು ಮಹತ್ವದ ಪಾತ್ರ ವಹಿಸಿದ್ದ ಸ್ವಾತಂತ್ರ್ಯ ಆಂದೋಲನ ಭವ್ಯ ಪರಂಪರೆಯನ್ನು ಮುಂದಕ್ಕೊಯ್ಯುವಂತಾಗಲಿ ಎಂದು ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್, ಸಿಪಿಐನ ಪ್ರಧಾನ ಕಾರ್ಯದರ್ಶಿ ಎ.ಬಿ.ಬರ್ಧನ್, ಸಮಾಜವಾದಿ ಪಕ್ಷದ ಅಧ್ಯಕ್ಷ ಮುಲಾಯಂಸಿಂಗ್ ಯಾದವ್ ಹಾಗೂ ಜನತಾದಳದ ಅಧ್ಯಕ್ಷ ಶರದ್‌ಯಾದವ್ ನೀಡಿರುವ ಒಂದು ಜಂಟಿ ಹೇಳಿಕೆಯಲ್ಲಿ ಮನವಿ ಮಾಡಿದ್ದಾರೆ.

ಟಾಟಾ-ಸಿಂಗಾಪೂರ್ ವಿಮಾನ ಯಾನ ಕಂಪೆನಿ ಅನುಮತಿ ನೀಡದಿರಲು ಕೇಂದ್ರ ಸರಕಾರಕ್ಕೆ ಮನವಿ

ವಿದೇಶೀ ಹಣಹೂಡಿಕೆ ಪ್ರೋತ್ಸಾಹ ಮಂಡಳಿ(ಎಫ್.ಐ. ಪಿ.ಬಿ) ದೇಶದೊಳಗಿನ ವಿಮಾನ ಯಾನಕ್ಕೆ ಒಂದು ಕಂಪನಿ ರಚಿಸಿಕೊಳ್ಳುವ ಟಾಟಾ-ಸಿಂಗಾಪೂರ ಜಂಟಿ ಪ್ರಯತ್ನಕ್ಕೆ ಮಂಜೂರಾತಿ ನೀಡಿದೆ. ಇದು ಆಶ್ಚರ್ಯಕರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ದೇಶದೊಳಗಿನ ವಿಮಾನ ಯಾನದಲ್ಲಿ ವಿದೇಶೀ ಭಾಗವಹಿಸುವಿಕೆಗೆ ಅನುಮತಿ ನೀಡುವುದಿಲ್ಲ ಎಂದು ನಾಗರೀಕ ವಿಮಾನ ಯಾನ ಮಂತ್ರಿಗಳು ಮತ್ತೆ ಮತ್ತೆ ನೀಡುತ್ತಿರುವ ಹೇಳಿಕೆಗಳಿಗೆ ವಿರುದ್ಧವಾದ ಕ್ರಮ ಇದು. ಈ ಪ್ರಶ್ನೆಯ ಅಧ್ಯಯನ ಮಾಡಿದ ನಾಗರೀಕ ವಿಮಾನ ಯಾನ ಕುರಿತು ಸಂಸದೀಯ ಸ್ಥಾಯೀ ಸಮಿತಿ ಕೂಡ ಈ ರೀತಿಯ ವಿದೇಶಿ ಭಾಗವಹಿಸುವಿಕೆ ಬೇಡ ಎಂಬ ಅಭಿಪ್ರಾಯ ತಳೆದಿತ್ತು.

ಎಫ್.ಐ.ಪಿ.ಬಿ.ಯು ಈ ಮಂಜೂರಾತಿಯನ್ನು ವಿದೇಶಿ ಹೂಡಿಕೆ ಕುರಿತ ಸಂಪುಟ ಸಮಿತಿ ಅನುಮೋದಿಸಬೇಕಾಗಿದೆ. ದೇಶೀ ವಿಮಾನ ಯಾನ ವಲಯದಲ್ಲಿ ವಿದೇಶೀ ಹೂಡಿಕೆಗೆ ಅವಕಾಶ ಕೊಡಬಾರದೆಂದು ಇದುವರೆಗಿನ ನೀತಿಯನ್ನು ಬದಲಿಸಲು ಕಾರಣಗಳೇನೂ ಇಲ್ಲ, ಆದ್ದರಿಂದ ಕೇಂದ್ರ ಸಂಪುಟ ಈ ನಿಲುವನ್ನು ಬದಲಿಸ ಬಾರದು ಎಂದು ಪೊಲಿಟ್ ಬ್ಯೂರೋ ಆಗ್ರಹ ಪಡಿಸಿದೆ.

ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ಒಕ್ಕೂಟದ ಏಳನೆಯ ಸಮ್ಮೇಳನ

ಅಸ್ಸಾಂ ಮತ್ತು ತ್ರಿಪುರಾದಲ್ಲಿ ನಡೆಯುತ್ತಿರುವ ದಮನದ ವಿರುದ್ಧ ಚಳುವಳಿಗೆ ಕರೆ

ಎರಡು ಲಕ್ಷ ಸದಸ್ಯ ಬಲದ ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ಒಕ್ಕೂಟದ ಏಳನೆಯ ಸಮ್ಮೇಳನವು ಅಸ್ಸಾಂ ರಾಜ್ಯದ ಈಶಾನ್ಯ ಭಾಗದಲ್ಲಿರುವ ದಿಬ್ರುಗರ್ ನಗರದ ಗ್ರಂಥಾಲಯದ ಮುಂದೆ ಒಕ್ಕೂಟದ ಅಧ್ಯಕ್ಷೆ ವಿಮಲ ರಣದಿವೆಯವರು ಧ್ವಜಾರೋಹಣ ಮಾಡುವುದರೊಂದಿಗೆ ಪ್ರಾರಂಭವಾಯಿತು. ಹುತಾತ್ಮರಿಗೆ ಪುಷ್ಪಾಂಜಲಿ ಅರ್ಪಿಸಲಾಯಿತು.

ಸಮ್ಮೇಳನಕ್ಕೆ ಪಶ್ಚಿಮ ಬಂಗಾಳ, ಕೇರಳ, ಕರ್ನಾಟಕ, ಅಸ್ಸಾಂ, ತ್ರಿಪುರಾ ಮತ್ತು ತಮಿಳುನಾಡುಗಳಿಂದ 239 ಪ್ರತಿನಿಧಿಗಳು ಬಂದಿದ್ದರು. ಅವರಲ್ಲಿ 24 ಪ್ರತಿನಿಧಿಗಳು ಮಹಿಳೆಯರು.

ಒಕ್ಕೂಟದ ಸ್ಥಾಪಕ ಪ್ರಧಾನ ಕಾರ್ಯದರ್ಶಿ ಮನೋರಂಜನ್ ರಾಯ್, ಸುನಿಲ್ ಮೈತ್ರ, ಗೋದಾವರಿ ಪರುಳೇಕರ್, ಒಕ್ಕೂಟದ ಕಾರ್ಯದರ್ಶಿ ಎಂ.ಜನದೇವನ್, ಇ.ಕೆ.ಇಂಪಚ್ಚಿಬಾವಾ, ಎಂ.ಕೆ.ಕೃಷ್ಣನ್, ಸಿಐಟಿಯು ಪ್ರಧಾನ ಕಾರ್ಯದರ್ಶಿ ಭಾಸ್ಕರನ್ ನಾಯರ್, ಅಸ್ಸಾಂ ಮುಖಂಡ ಅಜಂತ್ಯ ಭಟ್ಟಾಚಾರ್ಯರಿಗೆ ಸಂತಾಪ ಸೂಚಿಸುವ ನಿರ್ಣಯಗಳನ್ನು ಟೀ ತೋಟದ ಕಾರ್ಮಿಕರ ನಾಯಕಿ ಸಾಗರಿಕ ಸೂರೇನ್ ಮತ್ತು ಇತರ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸುವ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ಶಶಾಕಮಲ್ ಹಂದಿಕೋಯ್ ಸ್ವಾಗತ ಸಮಿತಿಯ ಅಧ್ಯಕ್ಷರ ಭಾಷಣವನ್ನು ಓದಿದರು. ವಿಮಲ ರಣದಿವೆಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಪ್ಲಾಂಟೇಷನ್ ಕೈಗಾರಿಕೆಯ ಪರಿಸ್ಥಿತಿಯನ್ನು ಪ್ರಸ್ತಾಪಿಸಿ ಸಂಘಟನೆಯು ತಮಿಳುನಾಡು ಮತ್ತು ಕರ್ನಾಟಕಗಳಲ್ಲಿ ಹಿನ್ನೆಡೆಯಾಗಿರುವುದಕ್ಕೆ ಕಳವಳ ವ್ಯಕ್ತಪಡಿಸಿದರು.

ಬಾಂಗ್ಲಾದೇಶದಿಂದ ಬಂದಿದ್ದ ಸೌಹಾರ್ದ ಪ್ರತಿನಿಧಿಗಳು ಮಹಮದ್ ಅನ್ವರ್ ಹುಸೇನ್ ಮತ್ತು ಎಂ.ಡಿ. ಅಬುನೂರ್ ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು. ಸಮ್ಮೇಳನದ ಅಂತ್ಯದವರೆಗೆ ಅವರು ಉಪಸ್ಥಿತರಿದ್ದರು. ಸ್ವಾಗತ ಸಮಿತಿಯು ಅವರಿಗೆ ಅಸ್ಸಾಮಿನ ಶಾಲುಗಳನ್ನು ಹೊದಿಸಿ ಸನ್ಮಾನಿಸಿತು.

ಅಂತರರಾಷ್ಟ್ರೀಯ ಪರಿಸ್ಥಿತಿ, ದೇಶದ ಪರಿಸ್ಥಿತಿ, ಪ್ಲಾಂಟೇಷನ್ ಕಾರ್ಮಿಕರ ಚಳುವಳಿ, ಹತ್ಯೆಗಳ ವರದಿಗಳನ್ನೊಳಗೊಂಡ ಪ್ರಧಾನ ಕಾರ್ಯದರ್ಶಿ ವರದಿಯನ್ನು ಅನಂದ ಪಾಠಕ್ ಮಂಡಿಸಿದರು. 26 ಪ್ರತಿನಿಧಿಗಳು ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿದರು. ಪ್ಲಾಂಟೇಷನ್ ಲೇಬರ್ ಆಕ್ಟ್‌ನ ಕಲ್ಯಾಣ ಸೌಲಭ್ಯಗಳು ಕಾರ್ಮಿಕರಿಗೆ ಸಿಕ್ಕದಿರುವುದು, ಕಾರ್ಮಿಕರ ವಾಸಗೃಹಗಳು ಕೀಳು ಮಟ್ಟದಲ್ಲಿರುವುದು, ವಿದ್ಯುಚ್ಛಕ್ತಿ ಇಲ್ಲದಿರುವುದು, ಕುಡಿಯುವ ನೀರಿನ ಸೌಕರ್ಯವಿಲ್ಲದಿರುವುದು, ದಕ್ಷಿಣಕ್ಕೆ ಹೋಲಿಸಿದರೆ ಈಶಾನ್ಯ ಭಾಗದಲ್ಲಿ ಕೂಲಿ ಕಡಿಮೆ ಇರುವುದು ಇವು ಚರ್ಚೆಯಲ್ಲಿ ಮೂಡಿಬಂದ ಅಂಶಗಳು.

20 ರಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆ ಸಮ್ಮೇಳನವನ್ನುದ್ದೇಶಿಸಿ ಮಾತನಾಡುತ್ತ ಅಂತರ್ರಾಷ್ಟ್ರೀಯ ವ್ಯಾಪಾರದಲ್ಲಿ ಅಸಮಾನ ಶರತ್ತುಗಳಿರುವುದನ್ನು ಅದು ಪ್ಲಾಂಟೇಷನ್ ಉತ್ಪನ್ನಗಳ ವಿದೇಶಿ ವ್ಯಾಪಾರದ ಮೇಲೆ ಪ್ರತಿಕೂಲ ಪರಿಣಾಮ ಮಾಡುವುದನ್ನು ಪ್ರಸ್ತಾಪಿಸಿ, ಅಸ್ಸಾಂ ಟೀ ಉತ್ಪಾದನೆಯಲ್ಲಿ ಮೊದಲನೆಯ ಸ್ಥಾನದಲ್ಲಿದ್ದು ಅಸ್ಸಾಮಿನಲ್ಲಿ ಐಎನ್‌ಟಿಯುಸಿ ಮಾಡುವ ಕೂಲಿಯ ಒಪ್ಪಂದವು ಪಶ್ಚಿಮ ಬಂಗಾಳದ ಕೂಲಿಯನ್ನು ಕೆಳಗೆ ಎಳೆಯುತ್ತದೆ ಎಂದು ಹೇಳಿ ಅಸ್ಸಾಮಿನಲ್ಲಿ ಟೀ ತೋಟ ಕಾರ್ಮಿಕರ ಸಂಘಟನೆಯನ್ನು ಬಲ ಪಡಿಸುವುದೇ ಇದಕ್ಕೆ ಪರಿಹಾರ ಎಂದರು.

21 ರಂದು ಸಮ್ಮೇಳನವನ್ನುದ್ದೇಶಿಸಿ ಭಾಷಣ ಮಾಡಿದ ಸಿಐಟಿಯು ಉಪಾಧ್ಯಕ್ಷರಾದ ಸಮರ್ ಮುಖರ್ಜಿಯವರು ಪ್ರಸಕ್ತ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗದ ಪಾತ್ರವನ್ನು ವಿವರಿಸಿ, ಅಸ್ಸಾಂ ರಾಜ್ಯದ ರಾಜಕೀಯಕ್ಕೂ ಟೀ ಪ್ಲಾಂಟೇಷನ್ ಕಾರ್ಮಿಕರ ಸಂಘಟನೆಗೂ ಇರುವ ಸಂಬಂಧವನ್ನು ಹೇಳಿ ಸಿಐಟಿಯು ಸಂಘಟನೆಯನ್ನು ಅಸ್ಸಾಂ ಟೀ ತೋಟಗಳ ಕಾರ್ಮಿಕರ ನಡುವೆ ಶಕ್ತಿಯುತಗೊಳಿಸಲು ಕರೆಕೊಟ್ಟರು.

ಪ್ರತಿ ರಾಜ್ಯದಲ್ಲಿಯೂ ಪ್ಲಾಂಟೇಷನ್ ಕಾರ್ಮಿಕರ ಕೂಲಿಯನ್ನು ಶೇ 20 ರಷ್ಟು ಹೆಚ್ಚಿಸಬೇಕೆಂದೂ, ರಾಷ್ಟ್ರೀಯ ಕನಿಷ್ಠ ಕೂಲಿ ಮಾಸಿಕ ರೂ 1500 ಇರಬೇಕೆಂದೂ ಕೇಳುವ 30 ಅಂಶಗಳ ಬೇಡಿಕೆಗಳ ಪಟ್ಟಿಯನ್ನು ಸಮ್ಮೇಳನವು ಅಂಗೀಕರಿಸಿತು. ಮತ್ತು ಫೆಬ್ರವರಿ ತಿಂಗಳಲ್ಲಿ ಬೇಡಿಕೆಗಳ ವಾರಾಚರಣೆಯನ್ನು ನಡೆಸಲು ಕರೆ ಕೊಟ್ಟಿತು.

ಜನವರಿ 28 ರಂದು ಅಸ್ಸಾಮಿನ ಮೊರೇನ್ ಟೀ ತೋಟದಲ್ಲಿ ಸಾಗರಿಕ ಸೊರೇನ್ ಕೊಲೆಯಾದುದನ್ನು ಪ್ರತಿಭಟಿಸಲು, ತ್ರಿಪುರಾದಲ್ಲಿ ಉಗ್ರಗಾಮಿಗಳು ಟೀ ತೋಟ ಕಾರ್ಮಿಕರನ್ನು ಕೊಲೆ ಮಾಡುವುದನ್ನು ಮತ್ತು ದಬ್ಬಾಳಿಕೆ ನಡೆಸುವುದನ್ನು ಖಂಡಿಸಲು ಅಖಿಲ ಭಾರತ ಪ್ರತಿಭಟನಾ ದಿನವನ್ನು ನಡೆಸಲು ಕರೆ ಕೊಡುವ ನಿರ್ಣಯವನ್ನು ಸಮ್ಮೇಳನವು ಅಂಗೀಕರಿಸಿತು. ಹೊಸ ಆರ್ಥಿಕ ನೀತಿ ಮತ್ತು ಪ್ಲಾಂಟೇಷನ್ ಕೈಗಾರಿಕಾ, ಈಶಾನ್ಯ ಭಾರತ ಮತ್ತು ಅಸ್ಸಾಂಗಳ ಕೈಗಾರಿಕಾಭಿವೃದ್ಧಿ ಮೊದಲಾದ ವಿಷಯಗಳ ಮೇಲೆ ಸಮ್ಮೇಳನವು ನಿರ್ಣಯಗಳನ್ನು ಅಂಗೀಕರಿಸಿತು.

ಸಮ್ಮೇಳನವು ವಿಮಲ ರಣದಿವೆಯವರನ್ನು ಅಧ್ಯಕ್ಷರನ್ನಾಗಿ ಆನಂದ ಪಾಠಕ್‌ರನ್ನು ಕಾರ್ಯಾಧ್ಯಕ್ಷರನ್ನಾಗಿ, ಪಿ.ಲಾಲಾ ಜವಾಬುರವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ಸಿ.ನಂಜುಂಡಪ್ಪನವರನ್ನು ಖಜಾಂಚಿಯನ್ನಾಗಿ, ಕೆ.ಪದ್ಮನಾಭನ್, ಕೂಇಕಣ್ಣನ್, ಬಿರೇನ್ ಬೋಸ್, ಅಜಿತ್ ಸರಕಾರ್, ಮಾಣಿಕ್ ಸನ್ಯಾಲ್, ಪಿ.ಆರ್.ಗೋಪಾಲಕೃಷ್ಣನ್, ಟಿ.ಕೆ.ಉನ್ನಿಕೃಷ್ಣನ್, ಬಿಮಲ್ ಸಿನ್ನರನ್ನು ಉಪಾಧ್ಯಕ್ಷರುಗಳನ್ನಾಗಿಯೂ, ಜೆ.ಹೇಮಚಂದ್ರನ್, ಅಮಲ್ ಘೋಷ್, ದಸ್ತೀದಾರ್, ಜಿಯಾಉಲ್ ಅಲಮ್, ಮೊಂಟುಬೋಸ್‌ರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಿತು. ಚುನಾಯಿಸಲ್ಪಟ್ಟ ಕಾರ್ಯಕಾರಿ ಸಮಿತಿಯಲ್ಲಿ ಕರ್ನಾಟಕದಿಂದ ಕಾಂ|| ಎಚ್.ಕಾಳಯ್ಯ ಇದ್ದಾರೆ.

22 ರಂದು ವಿಮಲ ರಣದಿವೆಯವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ, ಅಮಲ್ ಘೋಷ್ ದಸ್ತೀದರ್, ಶಶಾ ಕಮಲ್ ಹಂದಿಕೋಯ್, ತ್ರಿಪುರದ ಮಂತ್ರಿ ಭಿಮಲ್ ಸಿನ್ಹ, ವಿರಾಮ್ ಕೋಸ್ಸ, ಸಮರ್ ಮುಖರ್ಜಿ, ಹೇಮೇನ್ ದಾಸ್, ಉದ್ಧಬರ್ಮನ್ (ಎಂ.ಪಿ) ಭಾಷಣ ಮಾಡಿದರು.

ಹಗರಿಬೊಮ್ಮನಹಳ್ಳಿಯಲ್ಲಿ ದಲಿತ ಮಹಿಳೆಯರ ಮೇಲೆ ದೌರ್ಜನ್ಯ

ಬಡವರಿಗೆ ನ್ಯಾಯ ದೊರಕಿಸಲು ತಕ್ಷಣ ಕ್ರಮಕ್ಕೆ ಜೆಎಂಎಸ್ ಆಗ್ರಹ

ಕಳೆದ ತಿಂಗಳು ಹಗರಿ ಬೊಮ್ಮನಹಳ್ಳಿಯಲ್ಲಿ ಇಬ್ಬರು ದಲಿತ ಮಹಿಳೆಯರನ್ನು ಬೆತ್ತಲೆಗೊಳಿಸಿ ನಡುರಸ್ತೆಯಲ್ಲಿ ಎಳೆದಾಡಿ ಚಪ್ಪಲಿಯಿಂದ ಅವಮಾನಗೊಳಿಸಿದ ಘಟನೆ ವರದಿ ಯಾಗಿತ್ತು. ಈ ಬಗ್ಗೆ ಮಾಹಿತಿ ಸಂಗ್ರಹಿಸಲು ಹಗರಿಬೊಮ್ಮನಹಳ್ಳಿಯ ಶಿವಾನಂದ ನಗರಕ್ಕೆ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮಿತಿಯ ನಿಯೋಗ ವೊಂದು ಜನವರಿ 6ರಂದು ಭೇಟಿ ನೀಡಿ ಸಂಗ್ರಹಿಸಿದ ಮಾಹಿತಿಗಳ ಪ್ರಕಾರ ಇದರಲ್ಲಿ ಪೋಲೀಸರ ಶಾಮೀಲು, ಜಿಲ್ಲಾ ಉಸುವಾರಿ ಮಂತ್ರಿಗಳ ಮಗನ ಬೆಂಬಲ ಹಾಗೂ ಶ್ರೀರಕ್ಷೆ ಯಿರುವುದು ಕಂಡು ಬಂದಿದೆ. ಈ ವಿಷಯ ವನ್ನು ಜನವರಿ 8ರಂದು ಪತ್ರಿಕಾ ಗೋಷ್ಠಿಯಲ್ಲಿ ಸಂಘಟನೆಯ ಕಾರ್ಯದರ್ಶಿ ಕೆ.ನೀಲಾ ಮತ್ತಿತರರು ವಿವರಿಸಿದರು.

ಈ ಘಟನೆಯನ್ನು ದೌರ್ಜನ್ಯದ ಕೇಸು ಎಂದು ದಾಖಲಿಸಿಕೊಳ್ಳಲು ಕೂಡಾ ಪೋಲೀಸರು ನಿರಾಕರಿಸಿದ್ದಾರೆ. ಮಹಿಳೆಯರು ಸಲ್ಲಿಸಿದ ದೂರಿನ ಬಗ್ಗೆ ಕ್ರಮ ಕೈಗೊಳ್ಳದೆ ತಕ್ಷಣವೇ ಆರೋಪಿಗಳನ್ನು ಬಂಧಿಸಲಿಲ್ಲ. ಅದರ ಬದಲು ಆರೋಪಿಗಳ ಪರವಾಗಿದ್ದ ತಿಮ್ಮಪ್ಪ ಎಂಬಾತ ಕೊಟ್ಟ ದೂರನ್ನು ಸ್ವೀಕರಿಸಿ ಮಹಿಳೆಯ ಅಣ್ಣನನ್ನು ಲಾಕಪ್ಪಿಗೆ ತಳ್ಳಿ ಮನಬಂದಂತೆ ಬಡಿಯಲಾಗಿದೆ ಎಂದು ತಿಳಿದು ಬಂದಿದೆ. ಇದು ಪೋಲೀಸರ ಶಾಮೀಲಿಗೆ ಹಿಡಿದ ಕೈಗನ್ನಡಿ ಎಂದು ಜನವಾದಿ ಮಹಿಳಾ ಸಂಘಟನೆ ಹೇಳಿದೆ. ಜಾಮೀನು ಪಡೆದ ಆರೋಪಿಗಳು ಜಿಲ್ಲಾ ಉಸ್ತುವಾರಿ ಮಂತ್ರಿ ಗಳಾದ ಎಂ.ಪಿ.ಪ್ರಕಾಶ್‌ರವರ ಮಗ ರವಿಯ ರಕ್ಷಣೆಯಲ್ಲಿ ಈಗ ರಾಜಾ ರೋಷವಾಗಿ ದೌರ್ಜನ್ಯಕ್ಕೆ ಒಳಗಾದವರಿಗೇ ಬೆದರಿಕೆ ಹಾಕಿಕೊಂಡು ಅಡ್ಡಾಡಿ ಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಸೃಜನಶೀಲತೆ, ಸಂಸ್ಕೃತಿ ಇತ್ಯಾದಿ ಬಗ್ಗೆ ನಯವಾಗಿ ಮಾತನಾಡುವ ಮಂತ್ರಿಗಳ ಮೌನ ಇದಕ್ಕೆ ಇಂಬುಗೊಟ್ಟಿದೆ, ಇದು ನಾಚಿಕೇಗೇಡು ಎಂದು ಪತ್ರಿಕಾಗೋಷ್ಠಿಯಲ್ಲಿ ತೀವ್ರವಾಗಿ ಟೀಕಿಸಲಾಯಿತು. ಈ ದಲಿತ ಮಹಿಳೆಯರ ಮೇಲೆ ಅಪರಾಧ ಎಸಗಿದವರು ಮೇಲ್ವರ್ಗಕ್ಕೆ ಸೇರಿದವರು.

ಇದನ್ನು ದೌರ್ಜನ್ಯದ ಕೇಸೆಂದು ದಾಖಲಿಸಬೇಕು, ದೌರ್ಜನ್ಯಕ್ಕೊಳಗಾದವರಿಗೆ ಪರಿಹಾರ ನೀಡಬೇಕು, ಶಾಮೀಲಾಗಿರುವ ಪೋಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸ ಬೇಕೆಂದು ಹಗರಿಬೊಮ್ಮನಹಳ್ಳಿಯಲ್ಲಿ ಜೆಎಂಎಸ್, ಎಸ್‌ಎಫ್‌ಐ, ಡಿವೈಎಫ್‌ಐ ಒತ್ತಾಯಿಸಿ ಚಳುವಳಿ ನಡೆಸುತ್ತಿವೆ. ಘಟನೆ ನಡೆದ ಸ್ಥಳಕ್ಕೆ ಭೇಟಿಯಿಟ್ಟು ಪರಿಶೀಲಿಸಿದ ಜನವಾದಿ ಮಹಿಳಾ ಸಂಘಟನೆಯ ನಿಯೋಗ ಈ ಬೇಡಿಕೆಗಳನ್ನು ಪುನರುಚ್ಚರಿ ಸುತ್ತದೆ. ಸರಕಾರ ಇನ್ನಷ್ಟು ವಿಳಂಬ ಮಾಡದೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಪಡಿಸಿದೆ. ಇಲ್ಲವಾದಲ್ಲಿ ರಾಜ್ಯ ಮಟ್ಟದ ಹೋರಾಟ ನಡೆಸುವುದಾಗಿ ಎಚ್ಚರಿಸಿದೆ. ಅಧಿಕಾರಿ ವರ್ಗದ ಬೇಜ ವಾಬ್ದಾರಿಯುತ, ಪೋಲೀಸರ ಪಕ್ಷಪಾತ, ಚುನಾಯಿತ ಪ್ರತಿನಿಧಿಗಳ ದಿವ್ಯ ನಿರ್ಲಕ್ಷ್ಯ, ಆರೋಪಿಗಳ ನಿರ್ಭಯದ ಮೆರೆದಾಟದ ನಡುವೆ ಬಡವರಿಗೆ ನ್ಯಾಯ ಇಲ್ಲ ಎಂದು ಹಲ್ಲೆಗೊಳಗಾದ ಮಹಿಳೆಯರು ಮರುಗುವ ಸನ್ನಿವೇಶ ಸೃಷ್ಟಿಯಾಗುವುದರತ್ತ ಜನವಾದಿ ಮಹಿಳಾ ಸಂಘಟನೆ ಸರಕಾರದ ಗಮನ ಸೆಳೆದಿದೆ.

ಇದಕ್ಕೆ ಮೊದಲು ಬೆಂಗಳೂರಿನಲ್ಲಿ ಸಭೆ ಸೇರಿದ್ದ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮಿತಿ ಇತ್ತೀಚೆಗೆ ಇಂತಹ ಹಲವು ಘಟನೆಗಳು, ಅದರಲ್ಲೂ ದಲಿತ ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಿರುವುದು ಅತ್ಯಂತ ಆತಂಕದ ಸಂಗತಿ. ಪೋಲೀಸ್ ವ್ಯವಸ್ಥೆ ಹದಗೆಟ್ಟಿರುವುದಕ್ಕೆ ನಿದರ್ಶನ ಎಂದು ಆತಂಕ ವ್ಯಕ್ತಪಡಿಸಿತ್ತು.

ಬೀಡಿ ಕಾರ್ಮಿಕರ ಸಮಾವೇಶ

ಕುಂದಾಪುರ: ಜನವರಿ 11ರಂದು ಬೀಡಿ ವರ್ಕರ್ಸ್ ಯೂನಿಯನ್(ಸಿಐಟಿಯು) ನೇತೃತ್ವದಲ್ಲಿ ಕುಂದಾಪುರ ನೆಹರೂ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಬೀಡಿ ಕಾರ್ಮಿಕರ ಸಮಾವೇಶವು ಶಂಕರ್‌ರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಆರಂಭದಲ್ಲಿ ಕುಮಾರಿ ಶೈಲಾರವರು ಸ್ವಾಗತಿಸಿ ಸಮಾವೇಶದ ಮಹತ್ವವನ್ನು ವಿವರಿಸಿದರು.

ಬೀಡಿ ವರ್ಕರ್ಸ್ ಯೂನಿಯನ್‌ನ ಕುಂದಾಪುರ ಘಟಕದ ಕಾರ್ಯದರ್ಶಿ ಯವರಾದ ಮಹಾಬಲ ವಡೇರ ಹೋಬಳಿ ಯವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕನಿಷ್ಟ ಕೂಲಿಯನ್ನು ಜ್ಯಾರಿಗೊಳಿಸಲು ಸರಕಾರವನ್ನು ಒತ್ತಾಯಿಸುವ ಚಳುವಳಿಯ ಅಂಗವಾಗಿ ಫೆಬ್ರವರಿ 16 ರಂದು ತಾಲೂಕು ಕಚೇರಿಯ ಎದುರು ಧರಣಿ ಮತ್ತು ಪ್ರತಿಭಟನಾ ಮತ ಪ್ರದರ್ಶನ ವನ್ನು ನಡೆಸಲಾಗುವುದು ಎಂದು ತಿಳಿಸಿದರು.

ಸಮಾವೇಶಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಅಬ್ರಹಾಂ ಕರ್ಕಡರವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಬೀಡಿ ಕಾರ್ಮಿಕರ ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಬೀಡಿ ವರ್ಕರ್ಸ್ ಫೆಡರೇಶನ್ (ಸಿಐಟಿಯು)ನ ಪ್ರಧಾನ ಕಾರ್ಯದರ್ಶಿಯವರಾದ ಕೆ. ಶಂಕರ್‌ರವರು ಮಾತನಾಡಿ ಫೆಬ್ರವರಿ 16ರಂದು ಕನಿಷ್ಟ ಕೂಲಿಯನ್ನು ಜ್ಯಾರಿಗೊಳಿಸಲು ಒತ್ತಾಯಿಸಿ ತಾಲೂಕು ಕಚೇರಿಯ ಎದುರು ನಡೆಯುವ ಧರಣಿ ಮತ್ತು ಪ್ರತಿಭಟನಾ ಮತ ಪ್ರದರ್ಶನವನ್ನು ಯಶಸ್ವಿಗೊಳಿಸಬೇಕೆಂದು ಹೇಳಿ ಬೀಡಿ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಇತ್ಯರ್ಥಗೊಳಿಸಲು ತೀವ್ರ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಡಿವೈಎಫ್‌ಐ: ಕುಂದಾಪುರ ತಾಲುಕು ಸಮ್ಮೇಳನ

ಕುಂದಾಪುರ: ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ಸ್ಪಷ್ಟವಾದ ಯುವ ನೀತಿ, ಕ್ರೀಡಾ ನೀತಿ, ಇಲ್ಲದೆ ಇರುವುದರಿಂದ ಕಳೆದ ಒಲಂಪಿಕ್ ಕ್ರೀಡಾ ಕೂಟದಲ್ಲಿ ಒಂದೇ ಒಂದು ಕಂಚಿನ ಪದಕಕ್ಕೆ ಭಾರತ ತೃಪ್ತಿ ಪಡಬೇಕಾಯಿತೆಂದು ಡಿವೈಎಫ್‌ಐನ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ್ ಆಚಾರಿ ಹೇಳಿದ್ದಾರೆ. ಅವರು ಇತ್ತೀಚೆಗೆ ಗುಲ್ವಾಡಿ ಘಟಕದ ಆಶ್ರಯದಲ್ಲಿ ಗುಲ್ವಾಡಿ ಯಲ್ಲಿ ನಡೆದ ಡಿವೈಎಫ್‌ಐನ ಕುಂದಾಪುರತಾಲೂಕು 7ನೇ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಡಿವೈಎಫ್‌ಐನ ರಾಜ್ಯ ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಕುಂದಾಪುರ ಸಮುದಾಯದ ಅಧ್ಯಕ್ಷರಾದ ಪ್ರಭಾಕರನ್ ಸಮ್ಮೇಳನ ವನ್ನುದ್ದೇಶಿಸಿ ಮಾತನಾಡಿದರು. ಸಮುದಾಯದ ಕಾರ್ಯದರ್ಶಿ ಜಿ.ವಿ. ಕಾರಂತ ಧ್ವಜಾರೋಹಣವನ್ನು ನಡೆಸಿದರು. ಪ್ರಾರಂಭದಲ್ಲಿ ಶಾವಲ್ ಹಮೀದ್ ಸ್ವಾಗತಿಸಿ, ಚಂದ್ರಶೇಖರ್ ವಂದಿಸಿದರು. ಸಮ್ಮೇಳನದಲ್ಲಿ ನೂತನ ಕುಂದಾಪುರ ತಾಲೂಕು ಸಮಿತಿ ಅಧ್ಯಕ್ಷರಾಗಿ ಎಚ್. ನರಸಿಂಹ, ಉಪಾಧ್ಯಕ್ಷರಾಗಿ ಎಂ.ಬಾಲಕೃಷ್ಣ, ರಾಜೀವ ಪಡುಕೋಣೆ, ಶಾವಲ್ ಹಮೀದ್, ಕಾರ್ಯದರ್ಶಿಯಾಗಿ ಚಂದ್ರ ಶೇಖರ್.ವಿ., ಜೊತೆ ಕಾರ್ಯದರ್ಶಿಗಳಾಗಿ ರಮಾನಾಥಭಂಡಾರಿ, ಅಶ್ವಥ್ ಕುಮಾರ್, ಎಂ.ಶೇಖರ್ ಹಾಗೂ ಖಜಾಂಚಿಯಾಗಿ ಶಂಕರ್ ಆನಗಳ್ಳಿ ಮತ್ತು 20ಮಂದಿ ತಾಲೂಕು ಸಮಿತಿ ಸದಸ್ಯರಾಗಿ ಆಯ್ಕೆಗೊಂಡರು.

ತಾತಗುಣಿ ಎಸ್ಟೇಟ್ ಸರ್ಕಾರ ಸ್ವಾಧೀನ ಪಡಿಸಿಕೊಳ್ಳಲಿ ಹೋರಾಟ ಸಮಿತಿ ಒತ್ತಾಯ

ಬೆಂಗಳೂರು ನಗರದ ಹೊರವಲಯದಲ್ಲಿರುವ ತಾತಗುಣಿ ಎಸ್ಟೇಟ್‌ನ ಮಾಲಿಕರಾಗಿದ್ದ ದೇವಿಕಾ ರಾಣಿ ರೋರಿಚ್‌ರವರ 223ಎಕರೆ 3ಗುಂಟೆ ಜಮೀನು ಪ್ರದೇಶವನ್ನು ಕೆ.ಟಿ.ಪ್ಲಾಂಟೇಶನ್ ರವರಿಗೆ ಮಾರಾಟ ಮಾಡುವುದು ಕಾನೂನು ಬದ್ಧವಾಗಿದೆ ಎಂದು ನಗರದ ಎರಡನೇ ಹೆಚ್ಚುವರಿ ಸಿವಿಲ್‌ನ್ಯಾಯಾಲಯ ತೀರ್ಪು ನೀಡಿದೆ.

ಆದರೆ ತಾತಗುಣಿ ಎಸ್ಟೇಟ್ ಒಟ್ಟು 560ಎಕರೆ ಆಸ್ತಿ ಯಾರಿಗೆ ಸೇರಲಿ ಬಿಡಲಿ ರಾಜ್ಯ ಸರ್ಕಾರ ತೀರ್ಮಾನ ಮಾಡಿದ ಪ್ರಕಾರ ಸುಗ್ರೀವಾಜ್ಞೆ ಮುಖಾಂತರ ರಾಜ್ಯ ಸರ್ಕಾರ ಸ್ವಾದೀನ ಪಡಸಿಕೊಳ್ಳಬೇಕೆಂದು ಬೆಂಗಳೂರು ದಕ್ಷಿಣ ತಾಲೂಕು ರೈತರ ತಾತ ಗುಣಿ ಎಸ್ಟೇಟ್ ಭೂ ಹೋರಾಟ ಸಮಿತಿ ಒತ್ತಾಯ ಪಡಿಸಿದೆ. ಮಾತ್ರವಲ್ಲ ಎಸ್ಟೇಟ್ ಪ್ರಾರಂಭದಿಂದ ದುಡಿದು ಕೊಂಡು ಬಂದಿ ರುವ ಹರಿಜನ ಕಾರ್ಮಿಕರಿಗೆ ಕೆಲಸ ಮುಂದುವರಿಸಿ ಕೊಂಡು ಹೋಗಬೇಕೆಂದು ಒತ್ತಾಯಿಸಿದೆ.

ಕೈಮಗ್ಗ ಕಾರ್ಮಿಕರ ರಾಜ್ಯ ಮಟ್ಟದ ಕಾರ್ಯಗಾರ

ರಾಣೆಬೆನ್ನೂರು; ಕೈಮಗ್ಗ ಕೈಗಾರಿಕೆಯಲ್ಲಿ ಬಾಲ ಕಾರ್ಮಿಕರ ಸಮಸ್ಯೆ ಕುರಿತು ಒಂದು ದಿನದ ರಾಜ್ಯಮಟ್ಟದ ಕಾರ್ಯಗಾರ ರಾಣೆಬೆನ್ನೂರಿನಲ್ಲಿ ಕರ್ನಾಟಕ ರಾಜ್ಯ ನೇಕಾರ ಕಾರ್ಮಿಕರ ಸಮನ್ವಯ ಸಮಿತಿಯ ಆಶ್ರಯದಲ್ಲಿ ಡಿಸೆಂಬರ್ 12 ರಂದು ನಡೆಯಿತು.

ಕಾರ್ಯಾಗಾರದ ಉದ್ಘಾಟನೆಯನ್ನು ಮಾಡಿದ ಸಿ.ಐ.ಟಿ.ಯು ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ವಿ.ಜಿ.ಕೆ. ನಾಯರ್ ಅವರು ಮಾತನಾಡುತ್ತ ಬಾಲ ಕಾರ್ಮಿಕರು ನೇಯ್ದ ಭಾರತದ ರತ್ನಗಂಬಳಿಗಳನ್ನು ಬಹಿಷ್ಕರಿಸಲು ಅಮೇರಿಕ ಮೊದಲಾದ ರಾಷ್ಟ್ರಗಳು ಬೆದರಿಕೆ ಹಾಕಿರುವುದರಿಂದ ಬಾಲ ಕಾರ್ಮಿಕರ ಸಮಸ್ಯೆಗೆ ಹೊಸ ಆಯಾಮ ದೊರೆತಿದೆ ಎಂದರು . ಭಾರತದಲ್ಲಿ ನಡೆಯುತ್ತಿರುವ ಬಾಲ ಕಾರ್ಮಿಕರ ಶೋಷಣೆಯ ಬಗ್ಗೆ ಅಮೇರಿಕ ಮೊದಲಾದ ರಾಷ್ಟ್ರಗಳು ಆತಂಕ ವ್ಯಕ್ತ ಪಡಿಸುವುದನ್ನು ಆಕ್ಷೇಪಿಸಿದ ನಾಯರ್ ಅವರು ಅಮೇರಿಕ, ಜರ್ಮನಿ, ಜಪಾನ್, ಮೊದಲಾದ ರಾಷ್ಟ್ರಗಳಲ್ಲಿಯೂ ಬಾಲ ಕಾರ್ಮಿಕ ಪದ್ಧತಿ ಜೀವಂತವಾಗಿರುವುದು ಗಮನಿಸಿದಾಗ ಇದೊಂದು ಬಂಡವಾಳಶಾಹಿ ಸಮಾಜ ವ್ಯವಸ್ಥೆಯ ಅನಿಷ್ಟ ಎಂಬುದು ಸ್ಪಷ್ಟವಾಗುತ್ತದೆ ಎಂದು ಹೇಳಿದರು.

ಭಾರತದಲ್ಲಿ ಇಂದು ಬೀಡಿ, ಅಗರಬತ್ತಿ, ಬೆಂಕಿಪೆಟ್ಟಿಗೆ, ಸಿಡಿಮದ್ದು, ಮುದ್ರಣ, ಅಂಗಡಿ, ಹೋಟೆಲ್, ಕೈಮಗ್ಗ, ವಿದ್ಯುತ್ ಮಗ್ಗ, ಹಿಟ್ಟಿನಗಿರಣಿ, ಮೊದಲಾದ ಇನ್ನೂ ಅನೇಕ ಕೈಗಾರಿಕೆಗಳಲ್ಲಿ ಮಕ್ಕಳನ್ನು ಅಕ್ರಮವಾಗಿ ದುಡಿಸಲಾಗುತ್ತದೆ ಎಂದು ಹೇಳಿದ ಅವರು ಸಿ.ಐ.ಟಿ.ಯು ಬಾಲ ಕಾರ್ಮಿಕರ ಪ್ರಶ್ನೆಯನ್ನು ರೂಪಿಸಲು ಹಾಗೂ ಬಾಲ ಕಾರ್ಮಿಕ ವರ್ಗದ ಪ್ರಶ್ನೆಯಭಾಗವಾಗಿ ಪರಿಗಣಿಸಿ ಈ ಪದ್ಧತಿಯ ವಿರುದ್ಧ ಜನಾಭಿಪ್ರಾಯವನ್ನು ರೂಪಿಸಲು ಹಾಗೂ ಬಾಲ ಕಾರ್ಮಿಕರ ಹಕ್ಕುಗಳಿಗಾಗಿ ಅವರನ್ನು ಸಂಘಟಿಸಲು ಶ್ರಮಿಸುತ್ತದೆಎಂದರು.

"ಕೈಮಗ್ಗ ಕೈಗಾರಿಕೆಯಲ್ಲಿ ಬಾಲ ಕಾರ್ಮಿಕರ ಸಮಸ್ಯೆ" ಎನ್ನುವ ವಿಷಯದ ಬಗ್ಗೆ ಪ್ರಬಂಧವನ್ನು ಮಂಡಿಸಿದ ಸಮನ್ವಯ ಸಮಿತಿಯ ಅಧ್ಯಕ್ಷ ನಿತ್ಯಾನಂದ ಸ್ವಾಮಿ ಅವರು ಕರ್ನಾಟಕದಲ್ಲಿ ಕೈಮಗ್ಗ ಕ್ಷೇತ್ರದಲ್ಲಿ ದುಡಿಯುವ ಬಾಲ ಕಾರ್ಮಿಕರ ಸಂಖ್ಯೆ ಸುಮಾರು 40 ಸಾವಿರ ಎಂದು ಅಂದಾಜು ಮಾಡಬಹುದು ಎಂದರು.

'ದುಡಿಯುವ ಬಾಲಕಿಯರು' ಎಂಬ ವಿಷಯದ ಬಗ್ಗೆ ಅಂಗನವಾಡಿ ಕಾರ್ಯಕರ್ತೆಯರ ಸಂಘದ ಪ್ರಧಾನ ಕಾರ್ಯ ದರ್ಶಿ ಎಸ್. ವರಲಕ್ಷ್ಮಿ ಮಾತನಾಡಿದರು.

ಹಿರಿಯ ನೇಕಾರ ಮುಖಂಡರಾದ ಹನುಮಂತಪ್ಪ ಕದರಮಂಡಲಗಿ ಅವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಒಂದು ನೂರು ಜನ ನೇಕಾರ ಪ್ರತಿನಿಧಿಗಳ ಪೈಕಿ 15 ಜನರು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು.

ರೈತರಿಂದ ಕೆಇಬಿ ಕಚೇರಿಗೆ ಮುತ್ತಿಗೆ

ಶ್ರೀನಿವಾಸಪುರ: ನೀರಾವರಿ ಪಂಪ್ ಸೆಟ್ಟುಗಳಿಗೆ ಕೇವಲ 6 ಗಂಟೆ ವಿದ್ಯುತ್ ಸರಬರಾಜು ಮಾಡುತ್ತಿರುವ ನೀತಿಯನ್ನು ಖಂಡಿಸಿ ಕನಿಷ್ಟ12 ಗಂಟೆ ವಿದ್ಯುತ್ ಪೂರೈಕೆಗೆ ಆಗ್ರಹಿಸಿ, ಅಕ್ರಮ ವಿದ್ಯುತ್ ಸಂಪರ್ಕ ಪಡೆದಿರುವ ರೈತರಿಂದ 5ರಿಂದ 10 ಸಾವಿರ ದಂಡ ವಸೂಲಿ ಮಾಡುವುದನ್ನು ವಿರೋಧಿಸಿ ಹಾಗೂ ಮೀಟರ್ ಅಳವಡಿಸುವ ಯೋಜನೆಯನ್ನು ಕೈಬಿಡಬೇಕೆಂದು ಒತ್ತಾಯಿಸಿ ಜನವರಿ 6 ರಂದು ಸೋಮವಾರ ತಾಲೂಕಿನ ಸಾವಿರಾರು ರೈತರು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಪುರಭವನದಿಂದ ತಮಟೆ ಬಾರಿಸುವುದರೊಂದಿಗೆ ಮೆರವಣಿಗೆ ಹೊರಟ ರೈತರು ಕೆಇಬಿ ಕಚೇರಿಗೆ ಪಿಕೆಂಟಿಂಗ್ ನಡೆಸಿ ಪೋಲೀಸರ ಸರ್ಪಕಾವಲನ್ನು ಭೇದಿಸಿ ಕಚೇರಿಗೆ ಬೀಗ ಹಾಕಿ ಎರಡು ಗಂಟೆಗಳ ಕಾಲ ಕಚೇರಿ ಮುಂದೆ ಧರಣಿ ನಡೆಸಿದರು.

ವಿದ್ಯುತ್ ಯೋಜನೆಗಳನ್ನು ಪೂರ್ಣಗೊಳಿಸದೆ, ಜಲಾಶಯಗಳಲ್ಲಿ 4 ಟಿಎಂಸಿ ನೀರಿನ ಅಂತರದ ನೆಪವನ್ನು ಮುಂದಿಟ್ಟು ಕೈಗಾರಿಕೆಗಳಿಗೆ 18ರಿಂದ 20 ಗಂಟೆ ವಿದ್ಯುತ್ ನೀಡಿ ರೈತರಿಗೆ ಕೇವಲ 6 ಗಂಟೆ ವಿದ್ಯುತ್ ನೀಡುವುದು ರೈತ ಮತ್ತು ಕೃಷಿ ಕೂಲಿಕಾರರನ್ನು ದುಡಿಮೆಯಿಂದ ದೂರ ಮಾಡುವ ರೈತ ವಿರೋಧಿ ನೀತಿಯಾಗಿದೆ ಎಂದು ರೈತ ಸಂಘದ ಅಧ್ಯಕ್ಷರಾದ ಎನ್.ವೀರಪ್ಪ ರೆಡ್ಡಿ ಹೇಳಿದರು.

ರೈತ ಸಂಘದ ಕಾರ್ಯದರ್ಶಿ ಪಿ.ಆರ್.ಸೂರ್ಯನಾರಾಯಣರವರು ಧರಣಿ ನಡೆಸಿದ ರೈತರನ್ನುದ್ದೇಶಿಸಿ ಮಾತನಾಡಿ ರೈತರು ವಿದ್ಯುತ್ ಸಂಪರ್ಕ ಪಡೆಯಲು ಸೀನಿಯಾರಿಟಿ ಕಾನೂನು ಇಟ್ಟಿರುವುದನ್ನು ತೆರವು ಮಾಡಿ ಎಲ್ಲಾ ರೈತರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕು ಹಾಗೂ ಅಕ್ರಮ ಸಂಪರ್ಕದಾರರಿಂದ 5ರಿಂದ 10 ಸಾವಿರ ದಂಡ ವಸೂಲಿ ಮಾಡುವ ಕ್ರಮವನ್ನು ಕೈ ಬಿಡಬೇಕೆಂದು ಜನವರಿ 1ರಿಂದ ಮಧ್ಯರಾತ್ರಿಯಲ್ಲಿ ನೀಡುತ್ತಿರುವ ಹೆಚ್ಚುವರಿ 2 ಗಂಟೆ ವಿದ್ಯುತ್ತನ್ನು 6 ಗಂಟೆ ವಿದ್ಯುತ್ ಕೊಡುವ ಜೊತೆಯಲ್ಲಿಯೇ ನೀಡಬೇಕೆಂದು ಒತ್ತಾಯಿಸಿದರು.

ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋದಾಗ, ಹೊಸ ಲೈನುಗಳಿಗೆ ವಿದ್ಯುತ್ ಸಾಮಗ್ರಿಗಳು ನೀಡುವಾಗ ರೈತರಿಂದ ಲಂಚ ಪಡೆದು ಕೆಇಬಿ ಇಲಾಖೆಯಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ ಎಂದು ಜಿಲ್ಲಾ ಸಹ ಕಾರ್ಯದರ್ಶಿ ಹೋಳೂರು ಶಂಕರ್ ಖಂಡಿಸಿದರು.

ಹೋರಾಟದ ನೇತೃತ್ವವನ್ನು ರೈತ ಸಂಘದ ಮುಖಂಡರುಗಳಾದ ವಿ.ನಾಗಪ್ಪ, ನಾಗಭೂಷಣ್ ವಕೀಲರಾದ ವಿಶ್ವನಾಥ್, ಶ್ರೀರಾಮರೆಡ್ಡಿ, ನವೀನ್‌ಕುಮಾರ್, ಮುರಳಿ ವಹಿಸಿದ್ದರು. ಈ ಹೋರಾಟದಲ್ಲಿ ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಕಾರ್ಯಕರ್ತರು ಭಾಗವಹಿಸಿದ್ದರು

ಕನಿಷ್ಟ ಕೂಲಿಗೆ ಒತ್ತಾಯಿಸಿ ಬೀಡಿ ಕಾರ್ಮಿಕರ ಧರಣಿ

42 ರೂ 40 ಪೈಸೆಯ ಕನಿಷ್ಟ ಕೂಲಿ ಜಾರಿಗಾಗಿ ಬೆಂಗಳೂರು ಲೇಬರ್ ಕಮೀಷನರ್ ಕಛೇರಿಯ ಎದುರು ಜನವರಿ 16 ರಂದು ಬೀಡಿ ಕಾರ್ಮಿಕರ ಧರಣಿ ನಡೆಯಿತು. ಈ ಸಂದರ್ಭದಲ್ಲಿ ಲೇಬರ್ ಕಮೀಷನರ್ ಅವರಿಗೆ ಮನವಿಯನ್ನು ಸಲ್ಲಿಸಲಾಯಿತು. ಈ ಕಾರ್ಯಕ್ರಮದ ನಾಯಕತ್ವವನ್ನು ವಿ.ಜೆ.ಕೆ ನಾಯರ್, ವರಲಕ್ಷ್ಮಿ ಜರೀಲೂನ್, ಸರಪುನ್ನಿಸಾ, ಮುಮ್ತಾಜ್, ಮೊದಲಾದವರು ಭಾಗವಹಿಸಿದ್ದರು.

ಕರ್ನಾಟಕದಲ್ಲಿ ಕಳೆದ ವಾರ

ಜನವರಿ 10

- ಮೈಸೂರು-ಬೆಂಗಳೂರು ನಾಲ್ಕು ಸಾಲಿನ ಹೆದ್ದಾರಿ ನಿರ್ಮಾಣಕ್ಕೆ ಸಂಪುಟ ಉಪ ಸಮಿತಿ ಅನುಮೋದನೆ. 2000 ಕೋಟಿ ರೂ.ಗಳ ವೆಚ್ಚದ ಈ ನಿರ್ಮಾಣ ಕಾರ್ಯವನ್ನು ಖಾಸಗಿ ಸಂಸ್ಥೆಯೊಂದಕ್ಕೆ ವಹಿಸಲಾಗಿದೆ.

ಜನವರಿ 11

- ಕೂಡಲ ಸಂಗಮದಲ್ಲಿ ಶರಣಮೇಳದ ಸಂದರ್ಭದಲ್ಲಿ ಶಾಂತಿ-ಸುವ್ಯವಸ್ಥೆ ಕಾಪಾಡಲೆಂದು ನಿಷೇಧಾಜ್ಞೆ ಜಾರಿ ಮಾಡಿರುವುದಾಗಿ ವಿಜಾಪುರ ಜಿಲ್ಲಾಧಿಕಾರಿ.
- ಬೆಂಗಳೂರು-ಸೇಲಂ ನಡುವೆ ನೇರ ಬ್ರಾಡ್‌ಗೇಜ್ ಮಾರ್ಗ ಆರಂಭ.
- ರಾಯಚೂರು ತಾಪ ವಿದ್ಯುತ್ ಸ್ಥಾವರದಿಂದ ಬರುತ್ತಿದ್ದ ಕಲ್ಲಿದ್ದಲಿನ ಬೂದಿಯ ಸಮಸ್ಯೆಗೆ ಪರಿಹಾರ ಪಡೆಯಲು ಕೆ.ಪಿ.ಸಿ. ಮತ್ತು ಎ.ಸಿ.ಸಿ. ಕಂಪೆನಿ ನಡುವೆ ಒಡಂಬಡಿಕೆ.

ಜನವರಿ 13

- ಭಾರತೀಯ ಹತ್ತಿನಿಗಮದ ಪ್ರಾದೇಶಿಕ ಕಚೇರಿಯನ್ನು ರಾಯಚೂರಿನಲ್ಲಿ ತೆರೆಯಲಾಗುವುದು ಎಂದು ಪ್ರಧಾನಿ.
- ರಾಮನಗರ, ಚಿಕ್ಕನಹಳ್ಳಿ ವಿಧಾನಸಭಾ ಕ್ಷೇತ್ರಗಳು ಹಾಗೂ ದಕ್ಷಿಣ ಪದವೀಧರ ವಿಧಾನ ಪರಿಷತ್ ಕ್ಷೇತ್ರಕ್ಕೆ ಉಪ ಚುನಾವಣೆಗಳ ಪ್ರಕ್ರಿಯೆ ಆರಂಭ.

ಜನವರಿ 14

- ಕಾವೇರಿ ನದಿ ನೀರು ವಿವಾದದಲ್ಲಿ ಮಧ್ಯ ಪ್ರವೇಶಿಸುವಂತೆ ಮಾಡಿದ್ದ ಕರ್ನಾಟಕ ಸರಕಾರದ ಕೋರಿಕೆಗೆ ಪ್ರಧಾನಿ ನಕಾರ ಸೂಚಿಸಿರುವುದಾಗಿ ಮುಖ್ಯಮಂತ್ರಿಗಳು.

ಜನವರಿ 15

- ಬೆಂಗಳೂರು ನಗರದಲ್ಲಿ ಹಗುರ ರೈಲು ಸಾರಿಗೆ ವ್ಯವಸ್ಥೆ ನಿರ್ಮಾಣದ ಒಪ್ಪಂದಕ್ಕೆ ಸಹಿ. 4800 ಕೋಟಿ ರೂ.ಗಳ ಈ ಯೋಜನೆಯನ್ನು ಖಾಸಗಿ ಯು.ಬಿ.ಕಂಪನಿಗೆ ನೀಡಲಾಗಿದೆ.

ಜನವರಿ 16

- ಎರಡು ಖಾಸಗಿ ಕಂಪನಿಗಳಿಂದ 1992-93ರಲ್ಲಿ ಐದು ಪಶು ವೈದ್ಯ ಔಷಧಿಗಳನ್ನು 4 ರೂ. ಬದಲು 35 ರೂ. ತೆತ್ತು ಖರೀದಿಸಿದ ರಾಜ್ಯಸರಕಾರಕ್ಕೆ 35 ಲಕ್ಷ ರೂ. ನಷ್ಟ ಮಾಡಿದ ಹಗರಣ ಪತ್ತೆಯಾಗಿರುವುದಾಗಿ ಲೋಕಾಯುಕ್ತ ಮೂಲಗಳಿಂದ ಸುದ್ದಿ.
- ಮತ್ತೆ 9 ಹೊಸ ಜಿಲ್ಲೆಗಳ ರಚನೆಯ ಸುದ್ದಿ.
- ಮಧ್ಯದಲ್ಲೇ ಶಾಲೆ ಬಿಡುವ ಮಕ್ಕಳಸಂಖ್ಯೆ ಇತರ ಹಲವು ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಹೆಚ್ಚು. ಕೇರಳ, ತಮಿಳುನಾಡುಗಳಲ್ಲಿ ಇದು ಶೇ. 17 ಕ್ಕಿಂತ ಕಮ್ಮಿಯಿದ್ದರೆ ಕರ್ನಾಟಕದಲ್ಲಿ ಇದು ಶೇ. 42. ಈ ಸ್ಥಿತಿಯ ಬಗ್ಗೆ ಉಪ ಮುಖ್ಯಮಂತ್ರಿಗಳ ಕಳವಳ.


"ವಿಧಾನಸಭೆಯಲ್ಲಿ ಎಲ್ಲಾ ಚರ್ಚೆಗಳೂ ಸಂಪ್ರದಾಯದಂತೆ ನಡೆಯುತ್ತಿವೆ. ಅವರ್‍ಯಾಕೆ ಕೇಳ್ತಾರೋ ಅವರಿಗೆ ಗೊತ್ತಿರೋಲ್ಲ, ನಾವೇನು ಹೇಳ್ತೀವೋ ನಮಗೆ ಗೊತ್ತಿರೋಲ್ಲ".

ಮುಖ್ಯಮಂತ್ರಿ
ಜೆ.ಹೆಚ್.ಪಟೇಲ್.

ಕೊಜೆಂಟ್ರಿಕ್ಸ್ ವಿದ್ಯುತ್ ಯೋಜನೆ

ಜನಗಳನ್ನು ಸುಲಿದು ವಿದೇಶಿ ಕಂಪನಿಗಳನ್ನು ಕೊಬ್ಬಿಸುವ ವಿದ್ಯುತ್ ನೀತಿಯ ಮತ್ತೊಂದು ಉದಾಹರಣೆ

ಎನ್ನುತ್ತಾರೆ ಈ ವಲಯದಲ್ಲಿನ ಒಬ್ಬ ತಜ್ಞರಾದ ಪ್ರಬೀರ್ ಪುರಕಾಯಸ್ಥ



adunique/ICA/13

ಸರಕಾರದ ವಿದ್ಯುತ್ ನೀತಿಯನ್ನು ರೂಪಿಸುವುದು ನಮ್ಮ ವಿದ್ಯುತ್ ಅಗತ್ಯಗಳಿಗಿಂತ ಹೆಚ್ಚಾಗಿ ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳ ನಿರ್ದಿಷ್ಟ ಬೇಡಿಕೆಗಳು. ಇದು ಈ ಹಿಂದೆ ಮಹಾರಾಷ್ಟ್ರದ ಎನ್ರೋನ್ ವಿದ್ಯುತ್ ಯೋಜನೆಯಲ್ಲಿ ಕಂಡು ಬಂತು. ಈಗ ಕರ್ನಾಟಕದ ಕೊಜೆಂಟ್ರಿಕ್ಸ್ ಯೋಜನೆಯಲ್ಲೂ ಕಂಡುಬರುತ್ತಿದೆ.

ಇದುವರೆಗೆ ವಿದ್ಯುತ್ ನೀತಿ ಕುರಿತಾದ ಬಹಳಷ್ಟು ಗೆಜೆಟ್ ಅಧಿಸೂಚನೆಗಳು ಎನ್ರೋನ್‌ನ ಬೇಡಿಕೆಗಳನ್ನು ಪೂರೈಸುವ ನಿಟ್ಟಿನಲ್ಲಿ ಬಂದಿವೆ. ಕರ್ನಾಟಕದ ಕೊಜೆಂಟ್ರಿಕ್ಸ್ ಈಗ ಸರಕಾರದ ವಿದ್ಯುತ್ ನೀತಿಗೆ ಹೊಸ ಅಂಶಗಳನ್ನು ಸೇರಿಸುತ್ತಿರುವಂತೆ ಕಾಣುತ್ತದೆ. ವಿದ್ಯುತ್ ರವಾನೆ, ವಿತರಣೆ ಅಥವಾ ಪೂರೈಕೆಯಲ್ಲಿ ಖಾಸಗಿಯವರಿಗೆ ಅವಕಾಶ ಕೊಡುವುದು ಇಂತಹ ಒಂದು ಹೊಸ ಅಂಶ. ಮಂಗಳೂರಿನಲ್ಲಿ ಸ್ಥಾಪಿಸಬೇಕೆಂದಿರುವ ಕೊಜೆಂಟ್ರಿಕ್ಸ್ ವಿದ್ಯುತ್ ಕೇಂದ್ರದ ವಿದ್ಯುತ್ತನ್ನು ಪೂರೈಸುವಷ್ಟು ಹಣದ ಸಾಮರ್ಥ್ಯ (1000 ಕೋಟಿ ರೂ) ಕೆಇಬಿಗಿಲ್ಲವಾದ್ದ ರಿಂದ ಈಗ ಈ ಕ್ಷೇತ್ರದಲ್ಲೂ ಖಾಸಗಿ ಯವರಿಗೆ ಅವಕಾಶ ನೀಡುವ ವಿಶೇಷಾಜ್ಞೆ ಹೊರಡಿಸುವ ಸಂಭವವಿದೆ.

ಎನ್ರೋನ್ ಯೋಜನೆಯ ಬಗೆಗಿನ ಬಹಳಷ್ಟು ಟೀಕೆಗಳು ಕೊಜೆಂಟ್ರಿಕ್ಸ್‌ಗೆ ಅನ್ವಯವಾಗುವುದಿಲ್ಲ. ಕೊಜೆಂಟ್ರಿಕ್ಸ್ ಎನ್ರೋನ್‌ನಂತೆ ದ್ರವರೂಪದ ನೈಸರ್ಗಿಕ ಅನಿಲವನ್ನು ಬಳಸುವುದಿಲ್ಲ. ಕಲ್ಲಿದ್ದಲನ್ನು ಬಳಸುತ್ತದೆ. ಸಾಮಾನ್ಯವಾಗಿ ಕಲ್ಲಿದ್ದಲು ಬಳಸುವ ವಿದ್ಯುತ್ ಯೋಜನೆಗಳ ಬಂಡವಾಳ ಖರ್ಚು ಹೆಚ್ಚೇ ಇರುತ್ತದೆ. ಆ ದೃಷ್ಟಿಯಿಂದ ಪ್ರತಿ ಮೆಗಾವ್ಯಾಟಿಗೆ 4 ಕೋಟಿ ರೂ. ವೆಚ್ಚ ಎಂಬ ಕೊಜೆಂಟ್ರಿಕ್ಸ್‌ನ ಅಂದಾಜು ಅಸಮರ್ಥನೀಯವೇನಲ್ಲ. ಆದರೆ ಈ ಯೋಜನೆಯಲ್ಲಿ ಅಡಗಿರುವ ಹಲವು ಅಂಶಗಳಿಂದ ವಿದ್ಯುತ್ ಬಳಕೆದಾರರಿಗೆ ವಿಧಿಸುವ ದರ ಮಾತ್ರ ವಿಪರೀತ ಹೆಚ್ಚುವ ಸಾಧ್ಯತೆಗಳೆಲ್ಲಾ ಇವೆ. ಅಷ್ಟೇ ಅಲ್ಲ, ಇದರಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸ್ಥಿತಿ ಮಹಾರಾಷ್ಟ್ರ ವಿದ್ಯುಚ್ಛಕ್ತಿ ಮಂಡಳಿಗಿಂತಲೂ ಹದಗೆಡುವ ಸಂಭವವಿದೆ.

ಕೊಜೆಂಟ್ರಿಕ್ಸ್ - ಒಂದು ಸ್ಥೂಲನೋಟ

ಇವನ್ನು ಪರಿಶೀಲಿಸುವ ಮೊದಲು ಕೊಜೆಂಟ್ರಿಕ್ಸ್ ಯೋಜನೆಯ ಬಗ್ಗೆ ಒಂದು ಸ್ಥೂಲ ಪರಿಚಯ. ಇದು 500 ಮೆ.ವಾ. ವಿದ್ಯುತ್ ಉತ್ಪಾದಿಸಬೇಕೆಂದಿರುವ ಎರಡು ವಿದ್ಯುತ್ ಕೇಂದ್ರಗಳ ಯೋಜನೆ, ಅಮೆರಿಕಾದ ಕೊಜೆಂಟ್ರಿಕ್ಸ್ ಕಂಪೆನಿ ಇದರ ಮಾಲಕರು. ಅಮೆರಿಕಾದ್ದೇ ಕಾಂಟ್ರಾಕ್ಟರ್ ಬ್ಲಾಕ್ ಅಂಡ್ ವಿಯೆಟ್ಚ ಇದನ್ನು ನಿರ್ಮಿಸುವ ಕಾಂಟ್ರಾಕ್ಟರುಗಳು. ಇದಕ್ಕೆ ಬಳಸುವ ಇಂಧನ ಕಲ್ಲಿದ್ದಲು. ಆದರೆ ಇಲ್ಲಿ ಸಿಗುವ ಕಲ್ಲಿದ್ದಲು ಇದಕ್ಕಾಗುವುದಿಲ್ಲವಂತೆ. ಬೂದಿ ಅಂಶ ಕಮ್ಮಿ ಇರುವ ಕಲ್ಲಿದ್ದಲು ಬೇಕು. ಇದನ್ನು ಆಸ್ಟ್ರೇಲಿಯಾದಿಂದ ಆಮದು ಮಾಡಬೇಕು.

1994ರಲ್ಲಿ ಈ ಯೋಜನೆಗೆ ಮಂಜೂರಾತಿ ನೀಡಿದಾಗ ಅದರ ನಿರ್ಮಾಣ ವೆಚ್ಚ 5088 ಕೋಟಿ ರೂ. ಎನ್ನಲಾಗಿತ್ತು. ನಂತರ ಎನ್ರೋನ್ ವಿವಾದ ಮತ್ತು ಕೊಜೆಂಟ್ರಿಕ್ಸ್ ವಿರುದ್ಧ ಕರ್ನಾಟಕದಲ್ಲಿ ಸಿಐಟಿಯು ಮತ್ತಿತರ ಚಳುವಳಿಯ ನಂತರ ಇದನ್ನು 3995 ಕೋಟಿ ರೂಗಳಿಗೆ ಇಳಿಸಲಾಯಿತು. ಈಗ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಈ ನಿರ್ಮಾಣ ವೆಚ್ಚವನ್ನೇ ಹೇಳುತ್ತಿವೆ.

> ***ಪ್ರತಿ ಮೆಗಾವ್ಯಾಟಿಗೆ 4 ಕೋಟಿ ರೂ. ವೆಚ್ಚ ಎಂಬ ಕೊಜೆಂಟ್ರಿಕ್ಸ್‌ನ ಅಂದಾಜು ಅಸಮರ್ಥನೀಯವೇನಲ್ಲ. ಆದರೆ ಈ ಯೋಜನೆಯಲ್ಲಿ ಅಡಗಿರುವ ಹಲವು ಅಂಶಗಳಿಂದ ವಿದ್ಯುತ್ ಬಳಕೆದಾರರಿಗೆ ವಿಧಿಸುವ ದರ ಮಾತ್ರ ವಿಪರೀತ ಹೆಚ್ಚುವ ಸಾಧ್ಯತೆಗಳೆಲ್ಲಾ ಇವೆ. ಅಷ್ಟೇ ಅಲ್ಲ, ಇದರಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸ್ಥಿತಿ ಮಹಾರಾಷ್ಟ್ರ ವಿದ್ಯುಚ್ಛಕ್ತಿ ಮಂಡಳಿಗಿಂತಲೂ ಹದಗೆಡುವ ಸಂಭವವಿದೆ.***

ಆದರೆ ವಿದ್ಯುತ್ ಬಳಕೆದಾರರಿಗೆ ಈ ಯೋಜನೆಗೆ ಎಷ್ಟು ಬಂಡವಾಳ ಬೇಕು ಎಂಬುದು ಅಷ್ಟು ಮುಖ್ಯವಲ್ಲ. ಕೆಇಬಿ ಈ ವಿದ್ಯುತ್ತನ್ನು ಖರೀದಿಸಲು ಕೊಜೆಂಟ್ರಿಕ್ಸ್‌ಗೆ ಯಾವ ಬೆಲೆ ತೆರಬೇಕಾದೀತು ಎಂಬುದೇ ಮುಖ್ಯ ಸಂಗತಿ. ಈ ಹಿಂದೆ ವಿದ್ಯುತ್ ಖರೀದಿಸುವ ಬಗ್ಗೆ ಆದ ಒಪ್ಪಂದದಲ್ಲಿ ಯೂನಿಟ್ಟಿಗೆ ರೂ-2.59 ಎಂದು ನಿಗದಿ ಮಾಡಲಾಗಿತ್ತು. ಡಾಲರಿಗೆ ರೂ 31.50 ಇದ್ದಾಗ ಮತ್ತು ಆಗಿನ ವಿದೇಶೀ ಕಲ್ಲಿದ್ದಲು ಬೆಲೆಗಳಲ್ಲಿ. ಡಾಲರ್ ಬೆಲೆಯೊಂದಿಗೆ ಹಾಗೂ ಕಲ್ಲಿದ್ದಲು ಆಮದು ಬೆಲೆ ಯೊಂದಿಗೆ ಆಗಬಹುದಾದ ಹೆಚ್ಚಳವನ್ನು ಗಮನಕ್ಕೆ ತಗೊಳ್ಳದಿದ್ದರೂ ಇದು ಸಾಕಷ್ಟು ಹೆಚ್ಚು ಬೆಲೆಯೇ. ಏಕೆಂದರೆ ಕರ್ನಾಟಕದಲ್ಲಿ ಈಗ ವಿದ್ಯುತ್ ಖರೀದಿ ಬೆಲೆ ಯೂನಿಟ್ಟಿಗೆ ರೂ 1.45 ಮಾತ್ರ. ಇತ್ತೀಚೆಗೆ ಕೇಂದ್ರಮತ್ತು ರಾಜ್ಯ ಸರಕಾರ ಈ ಯೋಜನೆಗೆ ಮಂಜೂರಾತಿ ನೀಡುವಾಗಿನ ವಿದ್ಯುತ್ ಖರೀದಿ ಒಪ್ಪಂದ ಏನೆಂದು ತಿಳಿದಿಲ್ಲ. ಇದನ್ನು ಗುಪ್ತವಾಗಿಡ ಲಾಗಿದೆ. ಆದ್ದರಿಂದ ಬಂಡವಾಳ ಖರ್ಚನ್ನು ಕಮ್ಮಿ ಮಾಡಿದ್ದರಿಂದ ವಿದ್ಯುತ್ ಖರೀದಿ ಬೆಲೆ ಕಮ್ಮಿಯಾಗಿದೆಯೋ ಹೆಚ್ಚಾಗಿದೆಯೋ ಎಂದು ತಿಳಿದಿಲ್ಲ. ಶಿವಸೇನೆ-ಬಿಜೆಪಿ ಸರಕಾರ ಮಾಡಿದ ಎನ್ರೋನ್ ಒಪ್ಪಂದದ ಅನುಭವದಿಂದ ಹೇಳುವುದಾದರೆ ಬಂಡವಾಳ ಖರ್ಚನ್ನು ಕಮ್ಮಿ ಮಾಡಿದರೂ ವಿದ್ಯುತ್ ಖರೀದಿಯ ತಲಾ ಯೂನಿಟ್ ಖರ್ಚು ಸುಮಾರಾಗಿ ಹಾಗೆಯೇ ಉಳಿಯುವ ಸಂಭವವಿದೆ. ಒಂದು ವೇಳೆ ಕೊಜೆಂಟ್ರಿಕ್ಸ್ ಯೋಜನೆಯಲ್ಲಿ ವಿದ್ಯುತ್ ಖರೀದಿ ಬೆಲೆಯೂ ಕೂಡಾ ಕಮ್ಮಿ ಯಾಗಿದೆ ಎಂದಿಟ್ಟುಕೊಂಡರೂ ಸರಕಾರ ಅಥವಾ ಬಳಕೆದಾರರು ತೆರಬೇಕಾದ ಬೆಲೆ ಭಾರೀ ಪ್ರಮಾಣದ್ದೇ ಆಗಿರುತ್ತದೆ. ಏಕೆಂದರೆ ಈ ಕೊಜೆಂಟ್ರಿಕ್ಸ್ ಯೋಜನೆ ಯಲ್ಲಿ ಮೇಲ್ನೋಟಕ್ಕೆ ಕಾಣದಂತೆ ಮರೆ ಮಾಚಿಟ್ಟ ಖರ್ಚುಗಳು ದೊಡ್ಡ ಪ್ರಮಾಣದಲ್ಲಿವೆ.

ಅಡಗಿಸಿಟ್ಟ ಈ ಖರ್ಚುಗಳಾವುವು?

ಮೊದಲನೆಯದಾಗಿ ಈ ಯೋಜನೆ ಉತ್ಪಾದಿಸಿದ ವಿದ್ಯುತ್ತನ್ನು ರವಾನಿಸಲು ಕೆಇಬಿ ಹೊಸ ಲೈನುಗಳನ್ನು ಹಾಕಬೇಕಾಗುತ್ತದೆ. ಇದಕ್ಕೆ ಒಂದು ಮೆಗಾವ್ಯಾಟ್‌ಗೆ 1 ಕೋಟಿ ರೂ ತಗಲುತ್ತದೆ. ಅಂದರೆ ಹಣವಿಲ್ಲದೆ ಒದ್ದಾಡುತ್ತಿರುವ ಕೆಇಬಿ ಈ ಕೊಜೆಂಟ್ರಿಕ್ಸ್ ವಿದ್ಯುತ್ತನ್ನು ಬಳಕೆದಾರರಿಗೆ ತಲುಪಿಸಲು 1000 ಕೋಟಿ ರೂಗಳನ್ನು ತೊಡಗಿಸಬೇಕು! ಎರಡನೆಯದಾಗಿ ಈ ವಿದ್ಯುತ್ ಕೇಂದ್ರಕ್ಕೆ ಬೇಕಾಗುವ ಅಪಾರ ಪ್ರಮಾಣದ ಆಮದು ಕಲ್ಲಿದ್ದಲನ್ನು ನಿರ್ವಹಿಸಲು ಮಂಗಳೂರು ಬಂದರು ಕೂಡಾ ಅಪಾರ ಬಂಡವಾಳ ತೊಡಗಿಸಬೇಕಾಗುತ್ತದೆ. ನಿಜ, ಇದನ್ನು ಕೇಂದ್ರ ಸರಕಾರ ಭರಿಸುತ್ತದೆ. ವಿದ್ಯುತ್ ದರಗಳಲ್ಲಿ ಇದರ ಕೊಡುಗೆ ಇರಲಿಕ್ಕಿಲ್ಲ. ಆದರೆ ಕೊಜೆಂಟ್ರಿಕ್ಸ್ ಆರಿಸಿಕೊಂಡ ಸ್ಥಳ ಹಾಗೂ ಇಂಧನಕ್ಕಾಗಿ ಭಾರತದ ಜನತೆ ನೀಡ ಬೇಕಾದ ಸಬ್ಸಿಡಿ ಇದು ಎಂಬುದಂತೂ ನಿರ್ವಿವಾದ.

> ***ಬಂಡವಾಳದ ಮೊತ್ತ ಹೆಚ್ಚಾದಂತೆ ವಿದ್ಯುತ್ ದರ ಕೂಡಾ ಹೆಚ್ಚಿಸುವುದು ಸರಕಾರದ ಈಗಿನ ವಿದ್ಯುತ್‌ನೀತಿಯ ಒಂದು ಮುಖ್ಯ ಅಂಶ. ಅಂದರೆ ಕೊಜೆಂಟ್ರಿಕ್ಸ್ ಕಂಪೆನಿ ಯಾವುದೇ ಹಂತದಲ್ಲಿ ತಾನು ಹೆಚ್ಚು ಬಂಡವಾಳ ಹಾಕಬೇಕಾಗಿ ಬಂದಿದೆಯೆಂದು ಹೇಳಿಕೊಂಡು ಹೆಚ್ಚಿನ ವಿದ್ಯುತ್ ದರ ಗಿಟ್ಟಿಸಲು ಅವಕಾಶವಿದೆ.***

ಮೂರನೆಯದಾಗಿ ಈ ಯೊಜನೆಯಲ್ಲಿ ತೊಡಗಿಸಬಹುದಾದ ಬಂಡವಾಳದ ಮೇಲೆ ಮಿತಿಯನ್ನೇನೂ ಹಾಕಿಲ್ಲ. ಈ ಬಂಡವಾಳದ ಮೊತ್ತ ಹೆಚ್ಚಾದಂತೆ ವಿದ್ಯುತ್ ದರ ಕೂಡಾ ಹೆಚ್ಚಿಸುವುದು ಸರಕಾರದ ಈಗಿನ ವಿದ್ಯುತ್ ನೀತಿಯ ಒಂದು ಮುಖ್ಯ ಅಂಶ. ಅಂದರೆ ಕೊಜೆಂಟ್ರಿಕ್ಸ್ ಕಂಪೆನಿ ಯಾವುದೇ ಹಂತದಲ್ಲಿ ತಾನು ಹೆಚ್ಚು ಬಂಡವಾಳ ಹಾಕಬೇಕಾಗಿ ಬಂದಿದೆಯೆಂದು ಹೇಳಿಕೊಂಡು ಹೆಚ್ಚಿನ ವಿದ್ಯುತ್ ದರ ಗಿಟ್ಟಿಸಲು ಅವಕಾಶವಿದೆ.

ಕೊನೆಯದಾಗಿ ವಿದ್ಯುತ್ ದರವನ್ನು ವಿನಿಮಯ ದರ, ಇಂಧನ ಖರ್ಚು ಹಾಗೂ ಹಣದಬ್ಬರದೊಂದಿಗೆ ಲಗತ್ತಿಸಲಾಗಿದೆ. ಅಂದರೆ ಇವು ಮೂರರಲ್ಲಿ ಯಾವುದು ಹೆಚ್ಚಿದರೂ ವಿದ್ಯುತ್ ದರವನ್ನು ಹೆಚ್ಚಿಸಲು ಅವಕಾಶವಿದೆ. ಒಟ್ಟಿನಲ್ಲಿ ಸಮಯ ಹೋದಂತೆ ವಿದ್ಯುತ್ ದರ ಹೆಚ್ಚುತ್ತಾ ಹೋಗುತ್ತದೆ ಎಂದೇ ಇದರರ್ಥ.

ಕೆಇಬಿಗೆ ದುರವಸ್ಥೆ ಕಾದಿದೆ ಎಂದರ್ಥ

ಇವನ್ನೆಲ್ಲಾ ಗಮನಕ್ಕೆ ತೆಗೆದುಕೊಳ್ಳದೆ ಮೂಲ ವಿದ್ಯುತ್ ಖರೀದಿ ಒಪ್ಪಂದದಲ್ಲಿ ಹೇಳಿದ ದರ ರೂ 2.59 ಗಿಂತಲೂ ಕಮ್ಮಿ ಅಂದರೆ 2.30 ರಂತೆ ಕೆಇಬಿ ಪ್ರತಿ ಯೂನಿಟ್ಟಿಗೆ ತೆರ ಬೇಕಾದೀತಷ್ಟೇ ಎಂದಿಟ್ಟುಕೊ ಳ್ಳೋಣ. ಇದರ ರವಾನೆಗೆ ಈಗಿನಂತೆ ಯೂನಿಟ್ಟಿಗೆ 50 ಪೈಸೆ ಖರ್ಚಾಗುತ್ತದೆ. ಅಂದರೆ ಕೊಜೆಂಟ್ರಿಕ್ಸ್‌ನಿಂದ ವಿದ್ಯುತ್ ಖರೀದಿಸಿ ರವಾನಿಸಲು ಕೆಇಬಿ ತೆರಬೇಕಾದ ಹಣ ಯೂನಿಟ್ಟಿಗೆ ರೂ 2.75. ಈ ಒಪ್ಪಂದದಲ್ಲಿ ಇನ್ನೊಂದು ಅಂಶವಿದೆ, ಕೊಜೆಂಟ್ರಿಕ್ಸ್ ಉತ್ಪಾದಿ ಸುವ ವಿದ್ಯುತ್‌ನಲ್ಲಿ ಕನಿಷ್ಟ 80% ವನ್ನು ಕೆಇಬಿ ಖರೀದಿಸಲೇ ಬೇಕು.(ಇದನ್ನು P.L.F. ಎನ್ನುತ್ತಾರೆ) ಅಂದರೆ ಕೆಇಬಿ ಈ ಕೊಜೆಂಟ್ರಿಕ್ಸ್ ವಿದ್ಯುತ್ತಿಗಾಗಿ ವರ್ಷಕ್ಕೆ 1763 ಕೋಟಿ ರೂ ಖರ್ಚು ಮಾಡಬೇಕು. ಇದು ಕೆಇಬಿಯ ಪ್ರಸ್ತುತ ಆದಾಯಕ್ಕಿಂತ 77% ಹೆಚ್ಚು! ಆದರೆ ಈಗಿನ ವಿದ್ಯುತ್ ದರ ಅಂದರೆ ಯೂನಿಟಿಗೆ ರೂ 1.42 ದರದಲ್ಲಿ ಕೆಇಬಿಗೆ ಸಿಗುವ ಆದಾಯ ಕೇವಲ 742 ಕೋಟಿ ರೂ. ಅಂದರೆ ಪ್ರಸ್ತುತ ದರಗಳಲ್ಲಿ ಕೆಇಬಿ ಕೊಜೆಂಟ್ರಿಕ್ಸ್ ವಿದ್ಯುತ್ತಿನಿಂದಾಗಿ ವರ್ಷಕ್ಕೆ 1000 ಕೋಟಿ ರೂ ನಷ್ಟವನ್ನು ಅನುಭವಿಸಬೇಕಾಗುತ್ತದೆ.

ಈಗ ಕೆಲವರು ಇನ್ನೊಂದು ವಾದ ಮಾಡಬಹುದು, ಕೊಜೆಂಟ್ರಿಕ್ಸ್ ವಿದ್ಯುತ್ ಅಷ್ಟೊಂದು ಖರ್ಚಿನದಾಗಿದ್ದರೆ ಹೆಚ್ಚಿನ ವಿದ್ಯುತ್ ದರಗಳಿಂದ ಅದನ್ನು ಸರಿದೂಗಿಸಬಹುದಲ್ಲವೇ? ಇಲ್ಲಿ ವಿದ್ಯುತ್ ಬಳಕೆದಾರರು ಯಾರೆಲ್ಲಾ ಎಂಬುದನ್ನು ಗಮನಿಸಬೇಕಾಗುತ್ತದೆ.

27 ರೇ ಹೆಚ್ಚು ವಿದ್ಯುತ್ತಿಗೆ 1000 ಕೋಟಿಗೂ ಹೆಚ್ಚಿನ ನಷ್ಟ!

ಕರ್ನಾಟಕದಲ್ಲಿ ವಿದ್ಯುತ್ ಉದ್ದಿಮೆಗಳು ಬಳಸುವ ವಿದ್ಯುತ್ 32.2% ಮಾತ್ರ. ಈ ವಿಭಾಗದಿಂದ ಕೆಇಬಿಗೆ ಬರುವ ಆದಾಯ 1277 ಕೋಟಿ ರೂ. ಹೀಗಿರುವಾಗ ಈ ವಿಭಾಗದಿಂದಲೇ ಮೇಲೆ ಹೇಳಿದ 1763 ಕೋಟಿ ರೂಗಳಷ್ಟು ಹೆಚ್ಚಿನ ಖರ್ಚನ್ನು ವಸೂಲಿ ಮಾಡುವ ಸಾಧ್ಯತೆಗಳಿಲ್ಲ. ಅಲ್ಲದೆ ಕರ್ನಾಟಕದ ಉದ್ದಿಮೆ ವಲಯದಲ್ಲಿ ಒಟ್ಟು 1000 ಮೆ.ವಾ. ಉತ್ಪಾದಿಸುವಷ್ಟು ಖಾಸಗಿ ಜನರೇಟರ್‌ಗಳಿವೆ. ಇದರಲ್ಲಿ ಅವರಿಗೆ ತಗಲುವ ಖರ್ಚು ಯುನಿಟ್‌ಗೆ ರೂ 2.20 ರಿಂದ 2.50 ರವರೆಗೆ. ಅಂದರೆ ಕೊಜೆಂಟ್ರಿಕ್ಸ್ ವಿದ್ಯುತ್ತಿಗೆಂದು ಕೆಇಬಿ ರೂ 2.50 ಕ್ಕಿಂತ ಹೆಚ್ಚು ದರ ವಿಧಿಸಿದರೆ ಈ ಉದ್ದಿಮೆಗಳು ಕೊಜೆಂಟ್ರಿಕ್ಸ್ ವಿದ್ಯುತ್ ಖರೀದಿಸದೆ ತಮ್ಮದೇ ಜನರೇಟರ್‌ಗಳಿಂದ ವಿದ್ಯುತ್ ಪಡೆಯಲು ನಿರ್ಧರಿಸುತ್ತಾರೆ. ಅಂದರೆ ವಿದ್ಯುತ್ ದರ ಏರಿಕೆಯಿಂದ ಮಾರಾಟ ಕಡಿಮೆಯಾಗಿ ಕೆಇಬಿಗೆ ಬೇಕಾದ ಹೆಚ್ಚಿನ ಹಣ ದೊರಕದಂತಾಗುತ್ತದೆ.

ಕರ್ನಾಟಕದಲ್ಲಿ ಅತಿ ಹೆಚ್ಚು ಪ್ರಮಾಣದ ವಿದ್ಯುತ್ ಬಳಕೆಯಾಗುವುದು ಕೃಷಿ ರಂಗದಲ್ಲಿ. ಒಟ್ಟು ವಿದ್ಯುತ್ತಿನ 43.7% ರಷ್ಟು. ಈಗ ಇಲ್ಲಿ ವಸೂಲಿ ಮಾಡುವ ದರ 20.5 ಪೈಸೆ ಮಾತ್ರ. ಕೊಜೆಂಟ್ರಿಕ್ಸ್ ವಿದ್ಯುತ್ ಖರೀದಿಸಲು ಕೆಇಬಿ ಇದನ್ನು ಕನಿಷ್ಟ ರೂ 2.00 ಕ್ಕೆ ಏರಿಸಬೇಕು. ಅದೇ ರೀತಿ ಗೃಹ ಬಳಕೆದಾರರಿಗೂ ವಿದ್ಯುತ್ ದರ ಏರಿಸಿದರೆ ಮಾತ್ರವೇ ಕೆಇಬಿ ಕೊಜೆಂಟ್ರಿಕ್ಸ್ ವಿದ್ಯುತ್ತಿನ ಹೆಚ್ಚಿನ ಖರ್ಚನ್ನು ಭರಿಸಲು ಸಾಧ್ಯ ಎಂಬ ಪರಿಸ್ಥಿತಿಯಿದೆ.

ಇದು ಮೇಲೆ ಹೇಳಿದ ಮರೆಮಾಚಿದ ಖರ್ಚುಗಳನ್ನು ಗಮನಕ್ಕೆ ತೆಗೆದುಕೊಳ್ಳದೇ ಇದ್ದಾಗಿನ ಪರಿಸ್ಥಿತಿ. ಇವನ್ನೆಲ್ಲಾ ಗಮನಕ್ಕೆ ತಗೊಂಡರೆ ಕೆಇಬಿಯ ಪರಿಸ್ಥಿತಿ ಮತ್ತಷ್ಟು ಶೋಚನೀಯವಾಗುತ್ತದೆ. ವಿದೇಶೀ ವಿನಿಮಯ ದರಗಳಲ್ಲಿ ವ್ಯತ್ಯಾಸ, ಇಂಧನ ಬೆಲೆಗಳಲ್ಲಿ ಹೆಚ್ಚಳ, ಹಣದುಬ್ಬರ ಇವನ್ನೆಲ್ಲಾ ಲೆಕ್ಕಕ್ಕೆ ತಗೊಂಡಾಗ ಕೆಇಬಿ ತೆರಬೇಕಾದ ಮೊತ್ತ 2750 ಕೋಟಿ ರೂ ಆಗುತ್ತದೆ. ಇದು ಈಗಿನ ಕೆಇಬಿ ಆದಾಯಕ್ಕಿಂತಲೂ ಹೆಚ್ಚು. ಆದರೆ ಇದರಿಂದ ಸಿಗುವ ಹೆಚ್ಚಿನ ವಿದ್ಯುತ್ ಪ್ರಮಾಣದ ಹೆಚ್ಚಳ 27% ಮಾತ್ರ. ಅಂದರೆ ಕೇವಲ 27% ಹೆಚ್ಚಿನ ವಿದ್ಯುತ್‌ಗಾಗಿ ಕೆಇಬಿ ಇಷ್ಟೊಂದು ಹಣ ತೆರಬೇಕು.

ಇಷ್ಟೇ ಅಲ್ಲ, ಮೇಲೆ ಹೇಳಿದಂತೆ ಕೊಜೆಂಟ್ರಿಕ್ಸ್ ಉತ್ಪಾದಿಸುವ ವಿದ್ಯುತ್ತಿನಲ್ಲಿ 80-85 ಶೇಕಡಾದಷ್ಟು ವಿದ್ಯುತ್ತನ್ನು ಕೆಇಬಿ ತನಗೆ ಬೇಕೋ ಬೇಡವೋ, ಖರೀದಿಸಲೇಬೇಕು. ಅಂದರೆ ವಿದ್ಯುತ್ತಿನ ಬೇಡಿಕೆ ಕಮ್ಮಿಯಿರುವ ಅವಧಿಯಲ್ಲಿ ಇತರ ಅಗ್ಗ ದರದ ವಿದ್ಯುತ್ ಉತ್ಪಾದನಾ ಘಟಕಗಳನ್ನು ಈ ಕೊಜೆಂಟ್ರಿಕ್ಸ್ ವಿದ್ಯುತ್ತಿಗಾಗಿ ಮುಚ್ಚಿಡಬೇಕು! ಇದರಿಂದ ಕರ್ನಾಟಕ ರಾಜ್ಯದ ಹಣಕಾಸು ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದಷ್ಟೆ ಅಲ್ಲ, ಈಗಿರುವ ವಿದ್ಯುತ್ ಸ್ಥಾವರಗಳಿಗೆ ಮತ್ತು ಉತ್ಪಾದನಾ ಉಪಕರಣಗಳಿಗೆ ಇದು ಹಾನಿಕಾರಕ.

ವಿದ್ಯುತ್ ರವಾನೆಯಲ್ಲೂ ಖಾಸಗಿ ರಂಗ ಪ್ರವೇಶ

ಕೊಜೆಂಟ್ರಿಕ್ಸ್ ವಿದ್ಯುತ್ ರವಾನೆಗಾಗಿ 1000 ಕೋಟಿ ರೂ. ತೊಡಗಿಸಲು ತನಗೆ ಸಾಧ್ಯವಿಲ್ಲ ಎಂದು

ವಾರದ ಆರ್ಥಿಕ ಟಿಪ್ಪಣಿಗಳು

ಡಿ.ಎಸ್.ಮಣಿ

ಫೆರಾ ಕಾಯಿದೆಗೆ ತಿದ್ದುಪಡಿ : ವ್ಯಾಪಾರದಲ್ಲಿ ಜೂಜನ್ನು ತರಬಲೆಂದೇ?

ಫೆರಾ ಎಂದರೆ ಫಾರಿನ್ ಎಕ್ಸ್‌ಚೇಂಜ್ ರೆಗ್ಯುಲೇಟಿಂಗ್ ಆಕ್ಟ್‌ಗೆ ತಿದ್ದುಪಡಿ ತರಲು ಸರ್ಕಾರ ಯೋಚಿಸುತ್ತಿದೆಯಂತೆ. ಈ ಫೆರಾ ವಿದೇಶಿ ವಿನಿಮಯದ ನಿಯಂತ್ರಣಕ್ಕಾಗಿ ತಂದ ಕಾಯಿದೆ ನಮ್ಮ ರೂಪಾಯಿ ಮತ್ತು ಡಾಲರ್ ಎರಡು ಬೇರೆ ಬೇರೆ ನಗದುಗಳು ಇದರ ವಿನಿಮಯ ಹೇಗೆ? ಈ ವಿದೇಶಿ ವಿನಿಮಯ ಯಾಕೆ ಮುಖ್ಯ? ಯಾಕೆಂದರೆ ಅಂತರ್‌ರಾಷ್ಟ್ರೀಯ ವ್ಯಾಪಾರದಲ್ಲಿ ಇದಕ್ಕೆ ಪ್ರಾಮುಖ್ಯತೆ ಬರುತ್ತದೆ. ಅಮೆರಿಕದಿಂದ ನಾವೇನಾದರೂ ತರಿಸಿಕೊಳ್ಳಬೇಕಾದರೆ (ಇದಕ್ಕೆ ಆಮದು ಎನ್ನುತ್ತಾರೆ) ಅವರಿಗೆ ಡಾಲರಿನಲ್ಲಿ ಹಣ ನೀಡಿದರೆ ಮಾತ್ರ ಈ ಆಮದು ಸಾಧ್ಯ. ಹಾಗೇ ಅಮೆರಿಕನ್ನರು ಭಾರತದಿಂದ ಏನಾದರೂ ಕೊಳ್ಳುವುದಿದ್ದರೆ (ಭಾರತದಿಂದ ಈ ವಸ್ತುವನ್ನು ರಫ್ತು ಮಾಡುವುದು ಎನ್ನುತ್ತೇವೆ) ಆಗ ಅವರು ರೂಪಾಯಿಯ ರೂಪದಲ್ಲಿ ಹಣ ತರಬೇಕು. ಇದು ಒಂದೊಂದು ವ್ಯವಹಾರ.

ಆದರೆ ಇಬ್ಬರಿಗೂ ಇಂತಹ ಅವಶ್ಯಕತೆ ಇರುವುದರಿಂದ ರೂಪಾಯಿ ಮತ್ತು ಡಾಲರುಗಳನ್ನು ನಿರ್ದಿಷ್ಟ ಬೆಲೆಗೆ ವಿನಿಮಯ ಮಾಡಿಕೊಳ್ಳಬಹುದು. ಆದರೆ ಇಲ್ಲಿ ವಿವಿಧ ವ್ಯಾಪಾರಸ್ಥರು ವ್ಯಾಪಾರ ಮಾಡುವುದರಿಂದ ಈ ಒಟ್ಟಾರೆ ವ್ಯವಹಾರ ಸಂಕೀರ್ಣವಾಗುತ್ತದೆ. ಆದ್ದರಿಂದ ಈ ಫೆರಾ ಕಾಯಿದೆ ಇದೆ. ಈ ಕಾಯಿದೆ ಈ ವಿದೇಶಿ ವಿನಿಮಯದಲ್ಲಿ ದೇಶದ ಹಿತಾಸಕ್ತಿಗಳನ್ನು ಕಾಯುವ ಹಲವು ನಿಬಂಧನೆಗಳನ್ನು ಹೇರುತ್ತದೆ. ಉದಾಹರಣೆಗೆ ವಿದೇಶಗಳಿಂದ ಆಮದು ಮಾಡಿಕೊಳ್ಳುವಾತ ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಮಗಳಿಗನುಸಾರವಾಗಿ ನಡೆದುಕೊಳ್ಳಬೇಕು. ಏನು ಬೇಕಾದರೂ ಆಮದು ಮಾಡಿಕೊಳ್ಳುತ್ತೇನೆ, ಏನು ಬೇಕಾದರೂ ರಫ್ತು ಮಾಡುತ್ತೇನೆ ಎನ್ನುವಂತಿಲ್ಲ. ಹಾಗೆ ಬಿಟ್ಟರೆ ಲಾಭಕೋರ ವ್ಯಾಪಾರಿಗಳು ಏನು ಮಾಡಬಹುದೆಂಬುದಕ್ಕೆ ಒಂದು ಉದಾಹರಣೆ ತೆಗೆದುಕೊಳ್ಳೋಣ. ಚಿನ್ನ ವಿದೇಶಗಳಲ್ಲಿ ಸೋವಿ ಮತ್ತು ಭಾರತದಲ್ಲಿ ಗೋಧಿ ಸೋವಿ ಎಂದುಕೊಳ್ಳೋಣ. ಆಗ ನಮ್ಮ ವ್ಯಾಪಾರಿಗಳು ಚಿನ್ನವನ್ನು ಆಮದು ಮಾಡಿಕೊಳ್ಳುತ್ತಾರೆ. ಮತ್ತು ಗೋಧಿ ರಫ್ತು ಮಾಡುತ್ತಾರೆ. ಆಗ ನಮ್ಮ ಮಾರುಕಟ್ಟೆಯಲ್ಲಿ ಗೋಧಿ ಕಡಿಮೆಯಾಗಿ ಅದರ ಬೆಲೆ ಹೆಚ್ಚಾಗುತ್ತದೆ. ಜನ ಕಂಗಾಲಾಗುತ್ತಾರೆ. ಚಿನ್ನ ಹೆಚ್ಚಿಗೆ ಬಂದು ಅದರ ಬೆಲೆ ಸ್ವಲ್ಪ ಕಡಿಮೆ ಯಾಗಬಹುದು. ಆದರೆ ಚಿನ್ನ ತಿನ್ನುವಂತಿಲ್ಲವಲ್ಲ!! ಈ ವಿದೇಶಿ ವಿನಿಮಯದ ಸುತ್ತಮುತ್ತಲೇ ಆಮದು ರಫ್ತು ನೀತಿ ವಿದೇಶೀ ನೀತಿ ಇತ್ಯಾದಿಗಳೆಲ್ಲ ಸುತ್ತಿಕೊಂಡಿರುತ್ತವೆ.

ಇಂತಹ ಕಾಯಿದೆಗಳನ್ನು ತಿದ್ದುಪಡಿ ಮಾಡಿ ನಿರ್ಬಂಧಗಳನ್ನು ಕಡಿಮೆ ಮಾಡುವುದೆಂದರೆ ಅದರಿಂದ ದೇಶದ ಮಾರುಕಟ್ಟೆಯನ್ನು ವಿಶ್ವ ಮಾರುಕಟ್ಟೆಯ ಪ್ರಭಾವದಡಿ ತಂದಂತೆ. ಇದು ಹಲವು ತರಹದ ತೊಂದರೆಗಳನ್ನು ಜನಸಾಮಾನ್ಯರಿಗೆ ತಂದೊಡ್ಡುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕಿನ ಉದ್ಯೋಗಿಗಳ ಸಂಘ ಇಂತಹ ನಿರ್ಬಂಧ ಸಡಿಲಿಕೆಯನ್ನು ತೀವ್ರವಾಗಿ ವಿರೋಧಿಸಿದೆ. ಅದು ದೇಶದ ವಿದೇಶಿ ವ್ಯಾಪಾರದಲ್ಲಿ ಜೂಜನ್ನು ತಂದಂತೆ ಆಗುತ್ತದೆ ಎಂದಿದೆ.

ಇದನ್ನೇ ಮಾಡಬೇಕೆಂದು ಹೊರಟಿದೆಯೇ ಸರಕಾರ?

"ಹೊಸ ಆರ್ಥಿಕ ನೀತಿಗೆ ಧಿಕ್ಕಾರ"

ಹೊಸ ಆರ್ಥಿಕ ನೀತಿಗಳ ಗುಣಗಾನವನ್ನು ಎಲ್ಲರೂ ಮಾಡುತ್ತಿರುವಾಗ ಈ ಧಿಕ್ಕಾರ ಕೂಗಿದವರು ಯಾರಿರಬಹುದು ಎಂಬುದು ನಿಮ್ಮ ಪ್ರಶ್ನೆಯಲ್ಲವೇ? ಈ ಧಿಕ್ಕಾರ ಕೂಗಿದವರು ಕೂಗುತ್ತಿರುವವರು ದುಡಿವ ಜನರ ಕ್ರಾಂತಿಕಾರಿ ಸಂಘಟನೆಯಾದ ಸಿಐಟಿಯುವಿನ ಸದಸ್ಯರು.

ಸಿಐಟಿಯುವಿನ ಅಧ್ಯಕ್ಷರಾದ ಕಾಂ|| ಇ.ಬಾಲಾನಂದನ್ ರವರು ಸರಕಾರದ ಪ್ರತಿಗಾಮಿ ಆರ್ಥಿಕ ನೀತಿಗಳನ್ನು ಇಡಿಯಾಗಿ ವಿರೋಧಿಸಿ ಹೋರಾಡಬೇಕೆಂದು ಕರೆ ನೀಡಿದ್ದಾರೆ. ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಹಿಂದಿನ ತಿಂಗಳು ರೂಪಿಸಿದ ಬೇಡಿಕೆಗಳನ್ನು ಚರ್ಚಿಸಿ ನಿರ್ಧಾರಕ್ಕೆ ಬರುವಂತೆ ಅವರು ಕರೆ ನೀಡಿದ್ದಾರೆ.

ಅವರು ಉದಾರೀಕರಣ ಮತ್ತು ಜಾಗತೀಕರಣದ ಆರ್ಥಿಕ ನೀತಿಯ ಪರಿಣಾಮಗಳನ್ನು ವಿಶ್ಲೇಷಿಸುತ್ತ ಈ ನೀತಿಗಳಿಂದಾಗಿ ತೈಲ, ವಿದ್ಯುತ್, ಔಷಧ, ಹಣಕಾಸು ಮತ್ತು ಪೆಟ್ರೋಲಿಯಂ ಉದ್ದಿಮೆಯಲ್ಲಿನ ಸ್ವಾವಲಂಬನೆ 1991-92 ರಲ್ಲಿ ಶೇ50ರಷ್ಟು ಇದ್ದದ್ದು 1995-96 ರಲ್ಲಿಶೇ 44ಕ್ಕೆ ಇಳಿದಿದೆ ಎಂದಿದ್ದಾರೆ. ಇದು ಈ ವರ್ಷದ ಕೊನೆಗೆ ಶೇ.39ಕ್ಕೆ ಇಳಿಯಲಿದೆಯಂತೆ. ಇದರಿಂದಾಗಿಯೇ ತೈಲ ಆಮದು ಖಾತೆಯಲ್ಲಿನ ಕೊರತೆ 9980 ಕೋಟಿ ರೂಪಾಯಿಗಳಿದ್ದದ್ದು 15500 ಕೋಟಿ ರೂಪಾಯಿಗಳಿಗೇರಿದೆ.

ಹಾಗೆಯೇ ವಿದ್ಯುತ್ ಉದ್ದಿಮೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಬಂದಿರುವುದರಿಂದ ವಿದ್ಯುತ್ತಿನ ಬೆಲೆ ಕನಿಷ್ಠ ಮೂರು ಪಟ್ಟು ಹೆಚ್ಚಾಗಲಿದೆ ಎಂದಿದ್ದಾರೆ.

ಆದ್ದರಿಂದಲೇ ಈ ಹೊಸ ಆರ್ಥಿಕ ನೀತಿಯನ್ನು ಇಡಿಯಾಗಿ ವಿರೋಧಿಸಿ ಹೋರಾಡಲು ಅವರು ಕರೆ ನೀಡಿರುವುದು.

ಸಂಯುಕ್ತ ರಂಗ ಸರಕಾರದ ಘಟಾನುಘಟಿಗಳಿಗೆ ಅರ್ಥವಾದೀತೆ ಇದು?

ಕರ್ನಾಟಕ ಟೆಲಿಕಾಂ ಲಿ.ಗೆ ಪೂರ್ಣ ಗ್ರಹಣ?

ಕರ್ನಾಟಕ ಟೆಲಿಕಾಂ ಲಿಮಿಟೆಡ್ (ಕೆಟಿಎಲ್) ಎಂಬ ಸರಕಾರಿ ವಲಯದ ಉದ್ದಿಮೆ ಬಾಗಿಲು ಮುಚ್ಚುವ ಹಂತದಲ್ಲಿದೆ. ಉದಾರೀಕರಣದ ಫಲ ಅದು. ಈ ಉದ್ದಿಮೆಗೆ ಎರಡೂವರೆ ಕೋಟಿ ರೂಪಾಯಿಗಳ ದುಡಿವ ಬಂಡವಾಳದ ಅವಶ್ಯಕತೆ ಇದೆ. ಕರ್ನಾಟಕ ರಾಜ್ಯ ಸರಕಾರ ಈ ಮೊತ್ತವನ್ನು ನೀಡಲು ನಿರಾಕರಿಸಿರುವುದರಿಂದಾಗಿ 18 ಕೋಟಿ ರೂಪಾಯಿಗಳ ಆರ್ಡರ್ ಹೊಂದಿರುವ ಕೆಟಿಎಲ್ ಬಾಗಿಲು ಮುಚ್ಚುವ ಪ್ರಸಂಗ ಬಂದಿದೆ.

ಮುನ್ನೂರು ಕಾರ್ಮಿಕರನ್ನು ಹೊಂದಿರುವ ಈ ಕಾರ್ಖಾನೆ ಮುಚ್ಚಿದರೆ ಇವರೆಲ್ಲ ನಿರ್ಗತಿಕರಾಗುತ್ತಾರೆ. ಈ ಕಾರ್ಖಾನೆಯ ಮೇಲೆ ಅವಲಂಬಿಸಿರುವ ಇನ್ನೂ ಹಲವರು ನಿರ್ಗತಿಕರಾಗುತ್ತಾರೆ, ನಿರುದ್ಯೋಗಿಗಳಾಗುತ್ತಾರೆ.

ಬಂಡವಾಳಿಗರ ಲಾಭವನ್ನೇ ನೋಡುವ ಉದಾರೀಕರಣ ಈ ಕಾರ್ಮಿಕರ/ದುಡಿವ ಜನರ ಕಣ್ಣೀರನ್ನು ನೋಡಲಾರದು ಅಲ್ಲವೆ?

'ಔದ್ಯಮಿಕ' ರೋಗ ನಿವಾರಣೆಗೆ ನೆರವು ನೀಡಿ

ಇದು ಒಂದು ರಾಜ್ಯದ ಮುಖ್ಯಮಂತ್ರಿ ಬಂಡವಾಳಿಗರ ಸಂಘಟನೆಯಾದ ಸಿಐಐಗೆ ಮಾಡಿರುವ ಮನವಿ. ರಾಜ್ಯದ ಮುಖ್ಯಮಂತ್ರಿಗಳು ಇಂತಹ ವಿಚಾರವನ್ನೇ ಮಾಡಬೇಕಾದ ಅವಶ್ಯಕತೆ ಇಲ್ಲದ ಕಾಲ. ಇದು ಉದಾರೀಕರಣದ ಕಾಲ. ಮೇಲಿನ ಸುದ್ದಿ ನೋಡಿದಿರಲ್ಲ. ಉದ್ದಿಮೆ ರೋಗಗ್ರಸ್ಥವಾದರೆ ಅದನ್ನು ಮುಚ್ಚಬೇಕು ಅಷ್ಟೇ, ಸುಲಭವಲ್ಲವೆ? ಲಾಭ ಮಾಡದೆ ಹಾನಿ ಮಾಡುವ ಉದ್ದಿಮೆ ಇದ್ದರೆಷ್ಟು ಬಿಟ್ಟರೆಷ್ಟು? ಅಲ್ಲವೇ?

ವಾದ ಮಾಡಲು ಚೆನ್ನಾಗಿರುತ್ತದೆ. ಆದರೆ ಸಹಸ್ರ ಸಹಸ್ರ ಜನ ತಮ್ಮ ಉದ್ಯೋಗಗಳನ್ನು ಕಳೆದುಕೊಂಡು ನಿರ್ಗತಿಕರಾಗಿ ಬೀದಿಪಾಲಾಗುವಾಗ?

ಅಲ್ಲೇ ಬೂರ್ಜ್ವಾ ಸರಕಾರಗಳಿಗೂ ಎಡಪಕ್ಷಗಳ ಸರಕಾರಗಳಿಗೂ ಇರುವ ವ್ಯತ್ಯಾಸ. ಜನತಾದಳ ಸರಕಾರವಿರುವ ಕರ್ನಾಟಕದಲ್ಲಿ ಸರಕಾರ ಇಂತಹ ಉದ್ದಿಮೆಗಳನ್ನು ಮುಚ್ಚಿ ಎನ್ನುತ್ತದೆ. ಆದರೆ ಎಡರಂಗ ಸರಕಾರವಿರುವ ಪ.ಬಂಗಾಳದಲ್ಲಿ ಇಂತಹ ಉದ್ದಿಮೆಗಳನ್ನು ಉಳಿಸಿಕೊಂಡು ರೋಗ ನಿವಾರಣೆ ಮಾಡಿ ಅವುಗಳನ್ನು ಲಾಭದಾಯಕಗೊಳಿಸುವ ಪ್ರಾಮಾಣಿಕ ಮಾನವೀಯ ಧೋರಣೆಯ ಪ್ರಯತ್ನ ಮಾಡಲಾಗುತ್ತದೆ.

ಮೇಲಿನ ಮನವಿ ಮಾಡಿದವರು ಇನ್ನಾರೂ ಅಲ್ಲ, ಇಪ್ಪತ್ತು ವರ್ಷಗಳಿಗೂ ಹೆಚ್ಚು ಕಾಲ ಸತತವಾಗಿ ಪ.ಬಂಗಾಳದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿರುವ ಕಾಂ. ಜ್ಯೋತಿ ಬಸು.

ಈ ವ್ಯತ್ಯಾಸ ಪ್ರಾಮಾಣಿಕವಾಗಿ ವಿಚಾರ ಮಾಡುವವರಿಗೆ ಮಾತ್ರ ಅರ್ಥವಾಗುತ್ತದೆ ಅಲ್ಲವೆ?

ಭಾರತದ ವಿಮಾ ಕೋಟೆಗೆ ಲಗ್ಗೆ

ಇದು ಸಾಮ್ರಾಜ್ಯ ಶಾಹಿಗಳ ಇಂದಿನ ಪರಮ ಬೇಡಿಕೆ. ಅಮೆರಿಕ, ಬ್ರಿಟನ್ ಮತ್ತು ಇತರ ಅಭಿವೃದ್ಧಿ ಹೊಂದಿದ ದೇಶಗಳೆಲ್ಲ ಈಗ ಕೇಳುತ್ತಿರುವುದು 'ವಿಮಾ ವಲಯವನ್ನು ತೆರೆಯಿರಿ' ಎಂದು. ಭಾರತಕ್ಕೆ ಅಮೆರಿಕ ರಾಯಭಾರಿಯಾಗಿರುವ ಫ್ರಾಂಕ್ ವಿಸ್ನರ್ ಮಹಾಶಯ ಭಾರತ ತನ್ನ ಹಣಕಾಸು ವಲಯವನ್ನು ತೆರೆಯಬೇಕೆಂದು ಮತ್ತೆ ಹೇಳಿದ್ದಾನೆ. ಇದರಿಂದ ಇಡೀ ಅಂತರ್‌ರಚನಾ ಸೌಲಭ್ಯಗಳಿಗೆ ಹಣಕಾಸು ಹರಿದು ಬಂದು ಭಾರತದ ಅಭಿವೃದ್ಧಿ ತ್ವರಿತವಾಗಿ ಆಗಿ ದೇಶದ ಬಹುತೇಕ ಜನರಿಗೆ ಈ ಅಭಿವೃದ್ಧಿಯ ಲಾಭ ಹರಿದು ಬರುತ್ತದೆ ಎಂದಿದ್ದಾನೆ ಆತ.

ಇದಲ್ಲದೆ ಬ್ರಿಟನ್ ವ್ಯಾಪಾರಿ ಸಂಸ್ಥೆಯ ಮುಖ್ಯಸ್ಥ ಇಯಾನ್ ಲಾಂಗ್ ಸಹ ಭಾರತ ತನ್ನ ವಿಮಾ ವಲಯದಲ್ಲಿ ವಿದೇಶೀ ಹೂಡಿಕೆಗೆ ಅವಕಾಶ ಮಾಡಿಕೊಡಬೇಕು ಎಂದಿದ್ದಾನೆ. ಬ್ರಿಟಿಷ್ ಪ್ರಧಾನಿ ಜಾನ್ ಮೇಜರ್ ಜೊತೆಗೆ ಭಾರತಕ್ಕೆ ಬಂದ ಈತ ಇಂತಹ ಉದಾರೀಕರಣದಿಂದ ವಿಮಾ ವಲಯದಲ್ಲಿ ಆರೋಗ್ಯಕರ ಸ್ಪರ್ಧೆ ಏರ್ಪಟ್ಟು ದೇಶದ ಜನರಿಗೆ ಲಾಭವಾಗುತ್ತದೆ ಎಂದಿದ್ದಾನೆ.

ಭಾರತದ ಜನರಿಗೆ ಲಾಭವಾಗುವುದು ಒತ್ತೊಟ್ಟಿಗಿರಲಿ. ಈ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಅಪಾರ ಲಾಭವಂತೂ ಆಗಲೇ ಬೇಕು. ಅವರಿಗೆ ಲಾಭವೆಂದರೆ ಭಾರತದ ಜನಕ್ಕೆ ಹಾನಿಯಾಗಲೇಬೇಕಲ್ಲವೇ?

ದರೋಡೆಕೋರರ ಮಕ್ಕಳ ಭಾರತ ಬೇಟೆ

ಬ್ರಿಟಿಷರು ಭಾರತವನ್ನು ಮೂರ್ಖಾಲ ಆಳಿ ಕೊಳ್ಳೆ ಹೊಡೆದವರು. ಈ ದೇಶದ ಬೆಳವಣಿಗೆಯನ್ನೇ ತಿರುಚಿ ದೇಶದ ಗತಿಯನ್ನೇ ಬದಲಿಸಿದವರು. ದೇಶದ ಜನ ಹೋರಾಡಿ ಈ ದಬ್ಬಾಳಿಕೆಗಾರರನ್ನು ಹೊರಗಟ್ಟಿದರು ನಿಜ. ನಂತರವೂ ಅವರು ಹಿಂಬಾಗಿಲಿನಿಂದ ಬಂದು ದೇಶವನ್ನು ಕೊಳ್ಳೆ ಹೊಡೆಯಲು ಪ್ರಯತ್ನಿಸುತ್ತಲೇ ಇದ್ದಾರೆ.

ಬ್ರಿಟಿಷ್ ಪ್ರಧಾನಿ ಜಾನ್ ಮೇಜರ್ ದೊಡ್ಡ ವ್ಯಾಪಾರೀ ಸಮೂಹವನ್ನೇ ಕಟ್ಟಿಕೊಂಡು ಭಾರತಕ್ಕೆ ಬಂದು ಹೋಗಿದ್ದಾನೆ. ಈತನ ಮತ್ತು ಈತನ ಗುಂಪಿನ ಮಹತ್ತರ ಬೇಡಿಕೆ/ಒತ್ತಡ 'ದೇಶದಲ್ಲಿ ಇನ್ನೂ ಹೆಚ್ಚು ಉದಾರೀಕರಣ ಮಾಡಿ' ಎಂದು

ಈ ತಂಡ ಮೊದಲು ಬಂದು ಇಳಿದದ್ದು ಎಡರಂಗ ಸರಕಾರ ಆಡಳಿತದಲ್ಲಿರುವ ಪ. ಬಂಗಾಳದ ರಾಜಧಾನಿ ಕಲ್ಕತ್ತದಲ್ಲಿ. ಅಲ್ಲಿ ಈ ತಂಡಕ್ಕೆ ಭವ್ಯ ಸ್ವಾಗತ ನೀಡಿದವರಲ್ಲಿ ಎಡರಂಗ ಸರಕಾರದ ಮುಖ್ಯಮಂತ್ರಿ ಮತ್ತು ಮಂತ್ರಿಗಳೂ ಇದ್ದರು. ಇದಕ್ಕೆ ಬೂರ್ಜ್ವಾ ಪತ್ರಿಕೆಗಳು ದೊಡ್ಡ ಹುಯಿಲೆಬ್ಬಿಸಿದವು. "ಉದಾರೀಕರಣ ಬೇಡವೆನ್ನುವವರು ಯಾಕೆ ಈ ತಂಡವನ್ನು ಒಲೈಸುತ್ತಿದ್ದಾರೆ?" ಎಂದು. ಆದರೆ ಇವರಿಗೆ ಅರ್ಥವಾಗದ್ದು ಎಡರಂಗ ಸರಕಾರ ಎಂದೂ ವಿದೇಶೀ ಹೂಡಿಕೆ ಬೇಡವೆಂದಿಲ್ಲ ಆದರೆ ಈ ಹೂಡಿಕೆ ಪರಸ್ಪರರಿಗೆ ಲಾಭವಾಗುವಂತೆ ಬರಬೇಕು ಹೊರತು ಹೂಡಿಕೆದಾರರಿಗೆ ಮಾತ್ರ ಲಾಭವಾಗುವಂತಲ್ಲ.

ಇದು ಬಹಳ ಸೂಕ್ಷ್ಮ ವಿಚಾರ. ಎಡರಂಗ ಸರಕಾರ ವಿದೇಶಿ ವ್ಯಾಪಾರ ತಂಡಕ್ಕೆ ಸ್ವಾಗತ ನೀಡಿದೆ. ಅವರೊಡನೆ ವ್ಯವಹಾರ ಮಾಡಲೂ ಸಿದ್ಧವಾಗಿದೆ. ಆದರೆ ನಮಗೆ ಅನುಕೂಲವಾಗುವ/ಲಾಭವಾಗುವ ಶರತ್ತುಗಳ ಮೇಲೆ ಕೇಂದ್ರ ಮತ್ತು ಇತರ ರಾಜ್ಯ ಸರಕಾರಗಳೂ ಇದನ್ನು ಮಾಡಿದರೆ ದೇಶದ ಹಿತಾಸಕ್ತಿಗೇನೂ ತೊಂದರೆಯಿಲ್ಲ. ಆದರೆ ಈ ಸರಕಾರಗಳು ದೇಶವನ್ನೇ ಮಾರುತ್ತಾರೆ.

ಕೆಇಬಿಗೆ ಅರಿವಾಗುತ್ತಿರುವಂತಿದೆ. ಆದ್ದರಿಂದಲೇ ಈ ಕೆಲಸವನ್ನೂ ಖಾಸಗೀಯವರಿಗೆ ವಹಿಸುವ ಯೋಚನೆಯನ್ನಿಡಲಾಗಿದೆ. ಇದಕ್ಕೆ ಮುಂದೆ ಬರುವ ಖಾಸಗಿಯವರಿಗೆ 25-30 ಶೇಕಡಾದಷ್ಟು ಪ್ರತಿಫಲದ ಗ್ಯಾರಂಟಿ ನೀಡಲಾಗುವುದಂತೆ. ಅಂದರೆ ಖಾಸಗಿಯವರಿಗೆ ಗ್ಯಾರಂಟಿ ಪ್ರತಿಫಲ ನೀಡುವ ವಿನಾಶಕಾರಿ ವಿದ್ಯುತ್ ನೀತಿ ಇನ್ನೊಂದು ಹೆಜ್ಜೆ ಮುಂದೆ ಹೋಗಿದೆ. ಇದರಿಂದ ವಿದ್ಯುತ್ ದರ ಮತ್ತೆ ಯೂನಿಟ್ಟಿಗೆ 50 ಪೈಸೆಯಿಂದ ಒಂದು ರೂಪಾಯಿಯಷ್ಟು ಹೆಚ್ಚುತ್ತದೆ. ಅಂದರೆ ಈ ಮೇಲೆ ಹಾಕಿರುವ ಲೆಕ್ಕಾಚಾರದ ಅಂಕಿ ಸಂಖ್ಯೆಗಳು ಮತ್ತಷ್ಟು ಹೆಚ್ಚುತ್ತವೆ.

> *ಕೊಜೆಂಟ್ರಿಕ್ಸ್ ಉತ್ಪಾದಿಸುವ ವಿದ್ಯುತ್ತಿನ ರವಾನೆ/ವಿತರಣೆ ಮುಂದೆ ಬರುವ ಖಾಸಗಿಯವರಿಗೆ 25-30 ಶೇಕಾಡದಷ್ಟು ಪ್ರತಿಫಲದ ಗ್ಯಾರಂಟಿ ನೀಡಲಾಗುವುದಂತೆ. ಅಂದರೆ ಖಾಸಗಿಯವರಿಗೆ ಗ್ಯಾರಂಟಿ ಪ್ರತಿಫಲ ನೀಡುವ ವಿನಾಶಕಾರಿ ವಿದ್ಯುತ್ ನೀತಿ ಇನ್ನೊಂದು ಹೆಜ್ಜೆ ಮುಂದೆ ಹೋಗಿದೆ.*

ಬೇರೆ ದಾರಿಯೇ ಇಲ್ಲವೇ?

ಕರ್ನಾಟಕದ ವಿದ್ಯುತ್ ವಲಯದಲ್ಲಿ ಇಂತಹ ದುಬಾರಿ ಕೊಜೆಂಟ್ರಿಕ್ಸ್ ವಿದ್ಯುತ್ತನ್ನು ಪಡೆಯುವುದಲ್ಲದೆ ತಕ್ಷಣಕ್ಕೆ ಬೇರೆ ಮಾರ್ಗೋಪಾಯವೇ ಇಲ್ಲವೇ? ಇದೆ. ಕೆಇಬಿ ನಷ್ಟದಲ್ಲಿ ನಡೆಯುತ್ತಿದ್ದರೂ ಅದರ ಹಣಕಾಸು ಕೊರತೆ ದೇಶದ ಇತರ ರಾಜ್ಯ ವಿದ್ಯುತ್ ಮಂಡಳಿಗಳಿಗೆ ಹೋಲಿಸಿದರೆ ಬಹಳ ಕಮ್ಮಿ. ಕೃಷಿ ವಲಯದ ವಿದ್ಯುತ್ತಿಗೆ ರಾಜ್ಯ ಸರಕಾರ ಸ್ವಲ್ಪ ಸಬ್ಸಿಡಿ ಕೊಟ್ಟರೆ ಕೆಇಬಿ ಹಣಕಾಸಿನ ದೃಷ್ಟಿಯಿಂದ ಸಮರ್ಥವಾಗುತ್ತದೆ.

ಅಂದರೆ ಕೆಇಬಿಯಲ್ಲಿ ಸಮಸ್ಯೆಗಳೇ ಇಲ್ಲವೆಂದಲ್ಲ.

- *ಕೆಇಬಿ ರವಾನೆ ಮತ್ತು ವಿತರಣೆಯಲ್ಲಿ ಬಹಳಷ್ಟು ವಿದ್ಯುತ್ ಕಳಕೊಳ್ಳುತ್ತಿದೆ. ವಾಸ್ತವವಾಗಿ ಹೀಗೆ ವಿದ್ಯುತ್ ನಷ್ಟದಲ್ಲಿ ಕೃಷಿ ವಲಯದಲ್ಲಿನ ವಿದ್ಯುತ್ ಸೋರಿಕೆಯೂ ಅಡಗಿದೆ. ಕೃಷಿ ವಲಯಕ್ಕೆ ನೀಡುವ ವಿದ್ಯುತ್ತಿಗೆ ಮೀಟರ್ ಇಲ್ಲವಾದ್ದರಿಂದ ಈ ರೀತಿಯ ಕಸರತ್ತು ಮಾಡಲು ಬಹಳಷ್ಟು ಅವಕಾಶಗಳಿವೆ. ಒಂದು ಸಾಧಾರಣ ಅಂದಾಜಿನ ಪ್ರಕಾರ ಈ ರೀತಿಯ ವಿದ್ಯುತ್ ನಷ್ಟದಲ್ಲಿ ಕನಿಷ್ಠ 50% ದಷ್ಟು ವಾಸ್ತವವಾಗಿ ವಿದ್ಯುತ್ ಕಳ್ಳತನವೆ. ಇದನ್ನು ತಡೆದರೂ ಕೆಇಬಿಗೆ ಸಾಕಷ್ಟು ಆದಾಯ ಬರುತ್ತದೆ.*
- *ಇತ್ತೀಚಿನ ಒಂದು ಅಧ್ಯಯನದ ಪ್ರಕಾರ ಕರ್ನಾಟಕದಲ್ಲಿ ಒಟ್ಟು 1000 ಮೆ.ವಾ. ವಿದ್ಯುತ್ ಉತ್ಪಾದನೆ ಮಾಡಬಲ್ಲ ಖಾಸಗಿ ಜನರೇಟರುಗಳಿವೆ. ಆದರೆ ಇವುಗಳ ಉಪಯೋಗವಾಗುವುದು ಕೇವಲ 27% ರಷ್ಟು ಮಾತ್ರ. ಇದಕ್ಕೆ ಸ್ವಲ್ಪ ಉತ್ತೇಜನ ನೀಡಿದರೆ ವಿದ್ಯುತ್ತನ್ನು ಕೆಇಬಿ ಪಡೆಯುವಂತಾಗಿ ಈ ರಾಜ್ಯದ ವಿದ್ಯುತ್ ಸಾಮರ್ಥ್ಯವನ್ನು ಗಮನಾರ್ಹವಾಗಿ ಹೆಚ್ಚಿಸಲು ಸಾಧ್ಯವಿದೆ.*
- *ಕೊನೆಯದಾಗಿ, ಸ್ವದೇಶಿ ತಂತ್ರಜ್ಞಾನ ಮತ್ತು ಉಪಕರಣಗಳನ್ನು ಬಳಸಿ ಕೊಜೆಂಟ್ರಿಕ್ಸ್‌ಗೆ ಒಂದು ಪರ್ಯಾಯ ಭಾರತೀಯ ವಿದ್ಯುತ್ ಸ್ಥಾವರವನ್ನು ನಿರ್ಮಿಸಲು ಸಾಧ್ಯವಿದೆ. ಇದರಲ್ಲಿ ಯೂನಿಟ್ಟಿಗೆ ರೂ 2.00 ಕ್ಕಿಂತ ಕಮ್ಮಿ ಖರ್ಚಿನಲ್ಲಿ ವಿದ್ಯುತ್ ಪಡೆಯಲು ಸಾಧ್ಯ. ಇದರಿಂದ ರಾಜ್ಯಕ್ಕೆ ಪ್ರತಿ ವರ್ಷ 500 ಕೋಟಿ ರೂ ಉಳಿಯುತ್ತದೆ.*

ಮತ್ತೇಕೆ ಈ ವಿನಾಶಕಾರಿ ನೀತಿ?

ಇತರ ಪರ್ಯಾಯ ದಾರಿಗಳಿರುವಾಗ ಇಂತಹ ವಿನಾಶಕಾರಿ ನೀತಿಗಳನ್ನು ಅನುಸರಿಸುವ ಧಾವಂತಗಳೇಕೆ? ವಿದ್ಯುತ್ ಮಂಡಳಿಗಳ ಕಾರ್ಯನಿರ್ವಹಣೆಯನ್ನು ಸುಧಾರಿಸುವಲ್ಲಿ ಮೊದಲು ಗಮನ ಕೇಂದ್ರೀಕರಿಸಬೇಕಾದ ನೀತಿಗಳನ್ನು ರೂಪಿಸುವ ಬದಲು ಈ ಮಂಡಳಿಗಳು ವಿದೇಶೀ ಹೂಡಿಕೆದಾರರೊಂದಿಗೆ ಇಂತಹ ವಿನಾಶಕಾರಿ ವಿದ್ಯುತ್ ಖರೀದಿ ಒಪ್ಪಂದಗಳಿಗೆ ಸಹಿ ಹಾಕುವಂತೆ ಏಕೆ ಒತ್ತಾಯಿಸಲಾಗುತ್ತಿದೆ? ಇವೆಲ್ಲದಕ್ಕೂ ಒಂದೇ ಕಾರಣ ಭಾರತಕ್ಕೆ ಕೇವಲ ಈ ಬಹುರಾಷ್ಟ್ರೀಯ ಕಂಪನಿಗಳಿಂದಲೇ ಮುಕ್ತಿ ಎಂದು ನಮ್ಮ ನೀತಿ ನಿರ್ಣಾಯಕರು ಸೈದ್ಧಾಂತಿಕವಾಗಿ ಒಪ್ಪಿಕೊಂಡಂತೆ ಕಾಣುತ್ತದೆ ಅಥವಾ ಅವರು ಅತಿ ಹೆಚ್ಚು ಹರಾಜು ಕೂಗುವವರಿಗೆ ತಮ್ಮನ್ನು ಮಾರಿಕೊಂಡಿದ್ದಾರೆ. ಇವೆರಡರಲ್ಲಿ ಯಾವುದೇ ಕಾರಣವಿದ್ದರೂ ಅದು ದೇಶಕ್ಕೆ ಅತ್ಯಂತ ವಿನಾಶಕಾರಿ.

> *ವಿದ್ಯುತ್ ಪೂರೈಕೆಯ ಪ್ರಮಾಣ ಹೆಚ್ಚುವ ಬದಲು ಕೆಇಬಿ ತನ್ನನ್ನು ತಾನೇ ವಿನಾಶದ ಅಂಚಿಗೆ ಒಯ್ಯುತ್ತದಷ್ಟೆ.*

ಇಂತಹ ಒಂದು ವಾತಾವರಣದಲ್ಲಿ ಇವನ್ನೆಲ್ಲಾ ಸರಿಪಡಿಸಬೇಕಾದರೆ ವಿವೇಕದ ದನಿ, ಜನಗಳ ಇಚ್ಛಾಶಕ್ತಿಯ ದನಿ ಮೊಳಗಬೇಕು. ಇಲ್ಲವಾದರೆ ವಿದ್ಯುತ್ ಮಂಡಳಿಗಳು ಒಂದೆಡೆ ಕೆಲವು ದುಬಾರಿ ಯೋಜನೆಗಳಿಗೆ ಹಣ ತೆತ್ತು ದಿವಾಳಿಯಾಗುತ್ತಾ ಇನ್ನೊಂದೆಡೆ ತಮ್ಮದೇ ಬೃಹತ್ ವಿದ್ಯುತ್ ಸ್ಥಾವರಗಳನ್ನು ನಡೆಸಲು ಹಣವಿಲ್ಲದೆ ಅವು ಕೊಳೆಯಬೇಕಾದಂತಹ ಕತ್ತಲೆಯ ದಿನಗಳನ್ನು ನಾವು ನೋಡಬೇಕಾದೀತು. ಕೊಜೆಂಟ್ರಿಕ್ಸ್ ಯೋಜನೆಯಿಂದ ವಿದ್ಯುತ್ ಪೂರೈಕೆಯ ಪ್ರಮಾಣ ಹೆಚ್ಚುವ ಬದಲು ಕೆಇಬಿ ತನ್ನನ್ನು ತಾನೇ ವಿನಾಶದ ಅಂಚಿಗೆ ಒಯ್ಯುತ್ತದಷ್ಟೆ.

□

ತ್ರಿಪುರಾ ಉಗ್ರರಿಗೆ ಶರಣಾಗಲು ಗಡುವು

ಮುಗ್ಧ ಜನರ ಪ್ರಾಣದೊಂದಿಗೆ ಚೆಲ್ಲಾಟ ಆಡುತ್ತಿರುವ ಹಾಗೂ ದೇಶದ ಏಕತೆಗೆ ಭಂಗ ತರುತ್ತಿರುವ ತ್ರಿಪುರಾದ ಉಗ್ರಗಾಮಿಗಳ ವಿರುದ್ಧ ರಾಜ್ಯಸರಕಾರ ದೃಢವಾದ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿದೆ. ಸುಮಾರು 14 ಸಂಘಟನೆಗಳ ಹೆಸರಿನಲ್ಲಿ ಚಟುವಟಿಕೆಯಲ್ಲಿ ತೊಡಗಿರುವ ಉಗ್ರಗಾಮಿಗಳಿಗೆ ಶರಣಾಗಲು ಅದು ಇದೇ ಜನವರಿ 26 ರ ವರೆಗೆ ಗಡುವು ನೀಡಿದೆ.

ಗಣರಾಜ್ಯ ದಿನದೊಳಗೆ ಶರಣಾಗದಿದ್ದರೆ ಕಠಿಣ ಕ್ರಮಗಳನ್ನು ಕೈಗೊಳ್ಳುವುದಾಗಿ ಎಡರಂಗ ಸರಕಾರ ಎಚ್ಚರಿಕೆ ನೀಡಿದೆ. ಹೆಚ್ಚುತ್ತಿರುವ ಉಗ್ರಗಾಮಿಗಳ ಪಿಡುಗನ್ನು ನಿಯಂತ್ರಿಸಲು ಸರಕಾರ ದೃಢ ಸಂಕಲ್ಪ ಮಾಡಿದೆ.

ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ನಡುವಿನ ಸೌಹಾರ್ದವನ್ನು ಕಾಪಾಡಲು ಸರ್ವ ಪ್ರಯತ್ನ ಮಾಡುತ್ತಿರುವ ದಶರಥ ದೇಬ್ ನೇತೃತ್ವದ ಸರಕಾರದ ನಿರ್ಧಾರವನ್ನು ಜನವರಿ 14 ರಂದು ಪ್ರಕಟಿಸಲಾಯಿತು.

ಭಾರತದ ಸಂವಿಧಾನದ ಚೌಕಟ್ಟಿನೊಳಗೆ ಸಮಸ್ಯೆಯನ್ನು ಇತ್ಯರ್ಥಪಡಿಸಲಿಕ್ಕಾಗಿ ಉಗ್ರಗಾಮಿಗಳೊಂದಿಗೆ ಮಾತನಾಡಲು ತಾನು ಸಿದ್ಧವಿರುವುದಾಗಿ ಸರಕಾರ ಸ್ಪಷ್ಟ ಪಡಿಸಿದೆ.

26 ರೊಳಗೆ ಶರಣಾಗುವ ಉಗ್ರಗಾಮಿಗಳ ಜೀವನ ನಿರ್ವಹಣೆಗೆ ಆರ್ಥಿಕ ನೆರವು ಕಲ್ಪಿಸುವುದಾಗಿ ಅದು ತಿಳಿಸಿದೆ.


ರಾಜ್ಯದಲ್ಲಿ ಕೋಮು ದ್ವೇಷ ಹರಡುವರಿಗೂ ಸರಕಾರ ತೀಕ್ಷ್ಣ ಎಚ್ಚರಿಕೆ ನೀಡಿದೆ.

ಶರಣು

ಸಿಪಿಐ(ಎಂ)ನ ನೇತೃತ್ವದ ಎಡರಂಗ ಸರಕಾರ ತ್ರಿಪುರಾದಲ್ಲಿ 1993 ಏಪ್ರಿಲ್‌ನಲ್ಲಿ ಅಧಿಕಾರಕ್ಕೆ ಬಂದಂದಿನಿಂದ ಈವರೆಗೆ ಸುಮಾರು 5000 ಬುಡಕಟ್ಟು ಗೆರಿಲ್ಲಾಗಳು ಸರಕಾರಕ್ಕೆ ಶರಣಾಗಿದ್ದಾರೆ. ಈಶಾನ್ಯ ಭಾರತದ ಈ ಪುಟ್ಟ ರಾಜ್ಯದಲ್ಲಿ ಸುಮಾರು 14 ಉಗ್ರಗಾಮಿ ಸಂಘಟನೆಗಳು ಸಕ್ರಿಯವಾಗಿವೆ.

ಎಡರಂಗ ಸರಕಾರದ ದೃಢ ನಿಲುವನ್ನು ರಾಜ್ಯದಲ್ಲಿ ವ್ಯಾಪಕವಾಗಿ ಸ್ವಾಗತಿಸಲಾಗಿದೆ. ತ್ರಿಪುರಾ ಉಪಜಾತಿ ಯುವ ಸಮಿತಿ (ಟಿಯುಜೆಎಸ್) ಮತ್ತು ಭಾರತೀಯ ಜನತಾ ಪಕ್ಷಗಳು ಸರಕಾರದ ನಿರ್ಧಾರವನ್ನು ಸ್ವಾಗತಿಸಿದೆ. ಇನ್ನೂ ಮೊದಲೇ ಈ ಕ್ರಮವನ್ನು ಕೈಗೊಳ್ಳಬೇಕಿತ್ತು ಎಂದು ಟಿಯುಜೆಎಸ್ ಹೇಳಿದೆ.

ಇದು ಕಣ್ಣೊರೆಸುವ ತಂತ್ರ ಎಂದು ಪ್ರಮುಖ ಪ್ರತಿಪಕ್ಷವಾದ ಕಾಂಗ್ರೆಸ್(ಐ) ಹೇಳಿದೆ. ಈ ಪ್ರತಿಕ್ರಿಯೆ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅನುಸರಿಸುತ್ತಾ ಬಂದಿರುವ ವಿಭಜನಕಾರಿ ನೀತಿಗೆ ಅನುಗುಣವಾಗಿಯೇ ಇದೆ. ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಈ ಕಾಂಗ್ರೆಸ್ ಪಕ್ಷ ಬುಡಕಟ್ಟು ಮತ್ತು ಇತರ ಜನರ ನಡುವೆ ಒಡಕು ಉಂಟು ಮಾಡಿದ್ದು, ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ತನ್ನ ಪಕ್ಷದ ನೆರವಿನಿಂದ ಇಡೀ ರಾಜ್ಯ ಗಲಭೆ ಪೀಡಿತ ಎಂದು ಘೋಷಿಸುವಂತೆ ಮಾಡಿ ಚುನಾವಣೆಗಳಲ್ಲಿ ಅಕ್ರಮ ನಡೆಸಿದ್ದ ವಿಚಾರ ಇಡೀ ಜಗತ್ತಿಗೆ ಗೊತ್ತು.



ಸಿಬಿಐ ವಿಚಾರಣೆ: ಸಿಪಿಐ(ಎಂ)ಗೆ ಮಸಿ ಬಳಿಯುವ ತಂತ್ರ

ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ|| ಗಣೇಶ ಶಂಕರ ವಿದ್ಯಾರ್ಥಿ ಅವರನ್ನು ಕೇಂದ್ರೀಯ ತನಿಖಾ ದಳ(ಸಿಬಿಐ) ತನಿಖೆಗೆ ಒಳಪಡಿಸಿದ್ದನ್ನು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಕಟುವಾಗಿ ಟೀಕಿಸಿದೆ.

ಕೋಟ್ಯಾಂತರ ರೂಪಾಯಿಗಳ ಮೇವು ಹಗರಣಕ್ಕೆ ಸಂಬಂಧಿಸಿದಂತೆ ಕಾಂ||ವಿದ್ಯಾರ್ಥಿ ಮತ್ತು ಸಿಪಿಐ(ಎಂ)ಗೆ ಮಸಿ ಬಳಿಯುವ ಯತ್ನ ನಡೆಯುತ್ತಿರುವುದು ಸ್ಪಷ್ಟವಾಗಿದೆ.

ಡಾ|| ಇಂದ್ರಭಾನ ಪ್ರಸಾದ್ ಅವರ ಸೇವೆಯನ್ನು ವಿಸ್ತರಿಸಬೇಕೆಂದು ತಾವು ಶಿಫಾರಸು ಮಾಡಿದ್ದನ್ನು ಉದ್ದೇಶ ಪೂರ್ವಕವಾಗಿ ಮೇವು ಹಗಣಗಳೊಂದಿಗೆ ಸಂಬಂಧ ಕಲ್ಪಿಸಲಾಗಿದೆ.

ಇದು ತಮ್ಮ(ವಿದ್ಯಾರ್ಥಿ) ಹಾಗೂ ಪಕ್ಷದ ಘನತೆಗೆ ಮಸಿ ಬಳಿಯಲು ನಡೆಸಿರುವ ಸಂಚಿನ ಅಂಗವಾಗಿದೆ ಎಂದು ಕಾಂ|| ವಿದ್ಯಾರ್ಥಿ ಈ ಮೊದಲೇ ಸ್ಪಷ್ಟೀಕರಣ ನೀಡಿದ್ದರು. ಅದನ್ನು ಪತ್ರಿಕೆಗಳು ವ್ಯಾಪಕವಾಗಿ ಪ್ರಕಟಿಸಿದ್ದವು.

ದೃಢ ಹೋರಾಟ

ಮೇವು ಹಗರಣ ಮತ್ತು ಇತರ ಹಗರಣಗಳ ವಿರುದ್ಧ ಸಾಮೂಹಿಕ ಹೋರಾಟಗಳನ್ನು ಮುಂದುವರಿಸಲು ಹಾಗೂ ಹಗರಣಗಳಲ್ಲಿ ಆರೋಪಿಗಳಾಗಿರುವ ರಾಜಕಾರಣಿಗಳು ಮತ್ತು ಅಧಿಕಾರಿಗಳನ್ನು ನ್ಯಾಯಾಲಯದ ಕಟಕಟೆಗೆ ತರುವಂತೆ ಮಾಡುವ ದೃಢ ನಿರ್ಧಾರದಿಂದ ಹಿಂದೆ ಸರಿಯುವ ಪ್ರಶ್ನೆಯಿಲ್ಲ ಎಂದು ಪಕ್ಷದ ರಾಜ್ಯ ಸಮಿತಿ ಸ್ಪಷ್ಟಪಡಿಸಿದೆ.

ಸಿಪಿಐ(ಎಂ) ಡಾರ್ಜಿಲಿಂಗ್ ಜಿಲ್ಲಾಸಮಿತಿ ಬರ್ಖಾಸ್ತು

ಸಿಪಿಐ(ಎಂ) ಡಾರ್ಜಿಲಿಂಗ್ ಜಿಲ್ಲಾ ಸಮಿತಿಯನ್ನು ಬರ್ಖಾಸ್ತುಗೊಳಿಸಲು ಪಕ್ಷದ ಪಶ್ಚಿಮಬಂಗಾಳ ರಾಜ್ಯ ಕಾರ್ಯದರ್ಶಿ ಮಂಡಳಿ ನಿರ್ಧರಿಸಿದೆ. ಈ ನಿರ್ಧಾರಕ್ಕೆ ಪೊಲಿಟ್ ಬ್ಯೂರೋದ ಅನುಮೋದನೆಯಿದೆ ಎಂದು ಪಕ್ಷದ ಕೇಂದ್ರ ಸಮಿತಿ ಸದಸ್ಯ ಅನಿಲ್ ಬಿಸ್ವಾಸ್ ತಿಳಿಸಿದ್ದಾರೆ.

ಬರ್ಖಾಸ್ತುಗೊಂಡಿರುವ ಜಿಲ್ಲಾ ಸಮಿತಿ ಸ್ಥಾನದಲ್ಲಿ ಜಿಲ್ಲಾ ಸಂಘಟನಾ ಸಮಿತಿಯನ್ನು ರಚಿಸಲಾಗಿದೆ. ಅದರಲ್ಲಿ 35 ಸದಸ್ಯರಿದ್ದಾರೆ. ಎಸ್.ಪಿ.ಲೆಪ್ಚಾ ಸಂಘಟನಾ ಸಮಿತಿಯ ಸಂಚಾಲಕರಾಗಿರುತ್ತಾರೆ.

'ಗಣಶಕ್ತಿ'ಗೆ ಬೃಹತ್ ಕಟ್ಟಡದ ಹೊಸಶಕ್ತಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಮುಖ್ಯ ಪತ್ರಿಕೆ 'ಗಣಶಕ್ತಿ'ಗೆ ಈಗ ಹೊಸ ಶಕ್ತಿ ಬಂದಿದೆ. ಪತ್ರಿಕೆಗೆ ಈಗ 30 ರ ಹರೆಯ. ಈ ಸಂದರ್ಭದಲ್ಲಿ ಅದರ ಸ್ವಂತ ಕಟ್ಟಡವಾದ 'ಗಣಶಕ್ತಿ ಭವನ'ವನ್ನು ಜನವರಿ ಎರಡರಂದು ಕಲ್ಕತ್ತದಲ್ಲಿ ಉದ್ಘಾಟಿಸಲಾಯಿತು.

ಗಣಶಕ್ತಿ ಇದುವರೆಗೆ ಕಾರ್ಯ ನಿರ್ವಹಿಸುತ್ತಿದ್ದ ಮುಜಾಫರ್ ಅಹಮದ್ ಭವನದ(ರಾಜ್ಯ ಸಮಿತಿ ಕೇಂದ್ರ ಕಚೇರಿ) ಕೂಗಳತೆಯಲ್ಲೇ ಈ ಏಳು ಅಂತಸ್ತಿನ ಹೊಸ ಕಟ್ಟಡವಿದೆ.

ಮುದ್ರಣ ಹಾಗೂ ಪತ್ರಿಕೋದ್ಯಮ ಕ್ಷೇತ್ರದ ಅತ್ಯಾಧುನಿಕ ಅಗತ್ಯಗಳನ್ನು ಹೊಸ ಕಟ್ಟಡದಲ್ಲಿ ಅಳವಡಿಸಲಾಗಿದೆ. ಇಲ್ಲಿ ವಿಶಾಲ ಸ್ಥಳಾವಕಾಶವಿದೆ. ಅಷ್ಟೇ ಅಲ್ಲದೆ ಸ್ಥಳೀಯ ಕಂಪ್ಯೂಟರ್ ಜಾಲ (LAN- ಲ್ಯಾನ್), ಲೇಸರ್ ಪ್ರಿಂಟಿಂಗ್, ಡಿ.ಟಿ.ಪಿ. ಸೌಲಭ್ಯ ಮತ್ತು 'ಆನ್ ಲೈನ್' ಎಡಿಟಿಂಗ್ ಸೌಲಭ್ಯಗಳಿವೆ.

ಕಟ್ಟಡದ ಕೊನೆ ಮಹಡಿಯಲ್ಲಿ ಸಂಪಾದಕೀಯ ವಿಭಾಗವಿದೆ. ಜಾಹೀರಾತು, ಪ್ರಸರಣಾ, ಆಡಳಿತ ಮತ್ತಿತರ ವಿಭಾಗಗಳು ಉಳಿದ ಭಾಗದಲ್ಲಿದೆ.

ಎಜೆಸಿ ಬೋಸ್ ರಸ್ತೆಯಲ್ಲಿ 'ಗಣಶಕ್ತಿ ಭವನ'ವಿದ್ದು ಅದರ ಉದ್ಘಾಟನೆ ಸಂದರ್ಭದಲ್ಲಿ ನೆರೆದಿದ್ದ ಸಾವಿರಾರು ಜನರನ್ನುದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ||ಹರಿಕಿಶನ್ ಸಿಂಗ್ ಸುರ್ಜಿತ್ ಮಾತನಾಡಿದರು.

ಪಕ್ಷದ ಮುಖ್ಯವಾಣಿಯಾಗಿ 'ಗಣಶಕ್ತಿ' ಮಾರ್ಕ್ಸ್‌ವಾದ-ಲೆನಿನ್‌ವಾದದ ತತ್ವಗಳನ್ನು ಎತ್ತಿ ಹಿಡಿದಿಟ್ಟ ರೀತಿಯನ್ನು ಕಾಂ|| ಸುರ್ಜಿತ್ ಶ್ಲಾಘಿಸಿದರು. ಕಮ್ಯುನಿಸ್ಟ್ ಆಂದೋಲನ ನಡೆದು ಬಂದ ಕಲ್ಲು ಮುಳ್ಳಿನ ದಾರಿಯನ್ನು ಅವರು ವಿವರಿಸಿದರು.

ಕಟ್ಟಡವನ್ನು ಉದ್ಘಾಟಿಸಿದ ಪಾಲಿಟ್ ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜ್ಯೋತಿ ಬಸು ಪಕ್ಷದ ಸಾಹಿತ್ಯದ ಮಹತ್ವವನ್ನು ತಿಳಿಸಿದರು.

ಎಡಶಕ್ತಿಗಳನ್ನು, ವಿಶೇಷವಾಗಿ ಸಿಪಿಐ(ಎಂ)ನ್ನು ಅವಹೇಳನ ಮಾಡಲು ದೊಡ್ಡ ದೊಡ್ಡ ಪತ್ರಿಕೆಗಳು ನಡೆಸುವ ಪ್ರಯತ್ನಗಳನ್ನು ಎದುರಿಸಲು ಅವುಗಳು ಹರಡುವ ಸುಳ್ಳಿನ ಸರಮಾಲೆಗಳಿಗೆ ತಕ್ಕ ಉತ್ತರ ನೀಡಲು ಗಣಶಕ್ತಿ ಮತ್ತು ಪಕ್ಷದ ಇತರ ಪ್ರಕಟಣೆಗಳು ವಹಿಸುತ್ತಿರುವ ಪಾತ್ರವನ್ನು ಬಸು ಪ್ರಶಂಸಿಸಿದರು.

ಎಡರಂಗ ಸರಕಾರದ ಶೈಲೇನ್ ದಾಸ್‌ಗುಪ್ತ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಗಣಶಕ್ತಿ ಸಂಪಾದಕ ಅನಿಲ್ ಬಿಸ್ವಾಸ್ ಅವರೂ ಮಾತನಾಡಿದರು. 'ಪತ್ರಕರ್ತರು ರಾಜಕೀಯದ ಮೇಲೆ ದೊಡ್ಡ ರೀತಿಯ ಪ್ರಭಾವ ಬೀರಬಹುದು' ಎಂಬ ಚೆಕ್ ಲೇಖಕ ಮಿಲನ್ ಕಲಂದೇರಾ ಅವರ ಮಾತನ್ನು ಬಿಸ್ವಾಸ್ ತಮ್ಮ ಭಾಷಣದಲ್ಲಿ ಉದ್ಧರಿಸಿದರು.

ತ್ರಿಪುರ ಸಚಿವರೊಂದಿಗೆ ಆತ್ಮೀಯ ಸಂದರ್ಶನ

ಸಂದರ್ಶನ: ಕೃಷ್ಣಚನ್ನ, ಪೋಲಂಪಲ್ಲಿ

'ನನ್ನ ರಾಜ್ಯ ಈಶಾನ್ಯ ಭಾರತದ ಕೆಂಪುತಾರೆ...'

-ಜಿತೇಂದ್ರ ಚೌಧರಿ

ಈಶಾನ್ಯ ಭಾರತದ ರಾಜ್ಯಗಳಲ್ಲಿ ಶರವೇಗದಲ್ಲಿ ಪ್ರಗತಿಯತ್ತ ದಾಪುಗಾಲಿಡುತ್ತಿರುವ ತ್ರಿಪುರ. ಬೆಟ್ಟ, ಗುಡ್ಡ, ಕಾನನ, ನದಿ, ಝರಿಗಳ ನಡುವೆ ತುಂಬಿಕೊಂಡಿರುವ ಈ ರಾಜ್ಯದ ಸಂಪನ್ಮೂಲವೆಂದರೆ ಪರಿಸರ. ಭಯೋತ್ಪಾದನೆ, ಜನಾಂಗೀಯ ಕಲಹ - ಮುಂತಾದ ಸಮಸ್ಯೆಗಳ ನಡುವೆಯೂ ತನ್ನದೇ ಸ್ವಂತ ನೆಲೆ ಕಾಯ್ದುಕೊಂಡೇ ಬಂದಿರುವ ತ್ರಿಪುರದ್ದು ವೈಶಿಷ್ಟ್ಯತೆಯ ಮೆರುಗು. ಇಲ್ಲಿ ಆಳುತ್ತಿರುವುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನೇತೃತ್ವದ ಎಡರಂಗ ಸರಕಾರ.

ಇಲ್ಲಿ ಮೊದಲು, ಅಂದರೆ ಸ್ವಾತಂತ್ರ್ಯ ನಂತರ ಅಲ್ಲಿದ್ದ ಕಾಂಗ್ರೆಸ್ ಸರಕಾರ ತ್ರಿಪುರದಲ್ಲಿ ಸಮಸ್ಯೆಗಳನ್ನು ಪರಿಹರಿಸುವುದಕ್ಕಿಂತ ಸೃಷ್ಟಿಸಿದ್ದೇ ಹೆಚ್ಚು. ಜನ ರೋಸಿ ಹೋದರು. ಪರಿಣಾಮವೇ ಸಿಪಿಐ(ಎಂ) ಪಕ್ಷ ಅಧಿಕಾರಕ್ಕೆ ಬಂದಿತು. ಮತ್ತೆ ಅಲ್ಲೊಂದು ಶಕ ಆರಂಭವಾಯಿತು.

ತ್ರಿಪುರಾದ ಕ್ರೀಡಾ, ಯುವಜನಸೇವಾ, ಸಮಾಜ ಕಲ್ಯಾಣ, ಸಾಮಾಜಿಕ ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ ಸಚಿವರಾದ ಕಾಂ|| ಜಿತೇಂದ್ರ ಚೌಧರಿ(ಡಿವೈಎಫ್‌ಐ ಅಖಿಲ ಭಾರತ ಸಹ ಕಾರ್ಯದರ್ಶಿ) ಅವರು ಕಳೆದ ಜನವರಿ 6ರಂದು ಬೆಂಗಳೂರಿಗೆ ಬಂದಿದ್ದರು. ಅದೇ 7 ರಂದು ವಾಪಸ್ ತ್ರಿಪುರಾಗೆ ತೆರಳುವಾಗ ಗಡಿಬಿಡಿಯಲ್ಲಿ ಘಟಿಸಿದ ಸಂದರ್ಶನವಿದು. ವಿಮಾನ ನಿಲ್ದಾಣಕ್ಕೆ ಬೀಳ್ಕೊಡಲು ಹೊರಟಾಗ, ಅಲ್ಲಿನ ಅತಿಥಿಗೃಹವೊಂದರಲ್ಲಿ 'ಐಕ್ಯರಂಗ'ಕ್ಕೆ ನೀಡಿದ ಸಂಕ್ಷಿಪ್ತ ಆತ್ಮೀಯ ಸಂದರ್ಶನ ಅರ್ಥಾತ್ 'ಸಂವಾದ.

"ನನ್ನ ರಾಜ್ಯ ಈಶಾನ್ಯ ಭಾರತದ ಕೆಂಪು ತಾರೆ.... ನನ್ನ ರಾಜ್ಯದ ಬಗ್ಗೆ ನನಗೆ ಹೆಮ್ಮೆ ಇದೆ ಎಂದು ಮಾತು ಶುರು ಮಾಡಿದ ಅವರು, ನಿರರ್ಗಳವಾಗಿ ಉತ್ತರಿಸಿದರು. ತಮ್ಮ ತಾಯ್ನಾಡಿನ ಸ್ಥಿತಿಯನ್ನು ಬಿಚ್ಚಿಟ್ಟರು.

ಈಗ ತ್ರಿಪುರ ಹೇಗಿದೆ? ಸರಕಾರ ಎತ್ತ ಸಾಗಿದೆ?

● ಈಶಾನ್ಯ ಭಾರತದಲ್ಲಿಯೇ ಪ್ರಗತಿಯತ್ತ ವೇಗದಲ್ಲಿ ಸಾಗುತ್ತಿರುವ ತ್ರಿಪುರ ಎಂದು ಹೇಳಲು ನನಗೆ ಹೆಮ್ಮೆಯಾಗುತ್ತದೆ. ಮೊದಲಿದ್ದ ಪ್ರಕ್ಷುಬ್ಧತೆ ಈಗಿಲ್ಲ. ಪ್ರಗತಿಯೇ ಗುರಿ ಎಂಬ ಮನೋಭಾವ ಪಡೆದು ಕೆಲಸ ಮಾಡುವ ಪ್ರವೃತ್ತಿಯನ್ನು ತರುವಲ್ಲಿ ನಮ್ಮ ಸರಕಾರ ಯಶಸ್ವಿಯಾಗಿದೆ. ಹಮ್ಮಿಕೊಳ್ಳುತ್ತಿರುವ ಯೋಜನೆಗಳು, ಜನ ಪರ ಕಾರ್ಯಕ್ರಮಗಳು ಎಷ್ಟು ಸಫಲವಾಗುತ್ತಿವೆಯೆಂದರೆ, ಅದಕ್ಕೆ ಜನ ಸ್ಪಂದನೆ ಕಾರಣ. ಅಂತಹ ವಾತಾವರಣ ತ್ರಿಪುರದಲ್ಲಿದೆ. ಆದಕ್ಕಾಗಿ ನಮ್ಮ ಸರಕಾರ ಶ್ರಮಿಸುತ್ತಿದೆ.

ಸಂಪೂರ್ಣ ಸಾಕ್ಷರತಾ ಆಂದೋಲನ ತ್ರಿಪುರಾದಲ್ಲಿ ಯಶಸ್ವಿಯಾಗಿದೆ. ಕರ್ನಾಟಕದಲ್ಲಿ ಒಂದು ಅರ್ಥದಲ್ಲಿ ವಿಫಲವಾಗಿದೆ. ನಿಮ್ಮಲ್ಲಿ ಸಾಕ್ಷರತಾ ಯಶಸ್ಸಿನ ಬಗ್ಗೆ ಸ್ವಲ್ಪ ಹೇಳುವಿರಾ?

● ಶಿಕ್ಷಣ - ಕೆಲಸ ಕೊಡುವುದನ್ನೇ ಧ್ಯೇಯವಾಗಿಟ್ಟುಕೊಂಡಿರುವುದು ನಮ್ಮ ಸರಕಾರ. ಮುಖ್ಯವಾಗಿ ಸಿಪಿಐ(ಎಂ) ಪಕ್ಷ ಶಿಸ್ತು, ನಿಯಮಗಳಿಗೆ ಬದ್ಧವಾದದ್ದು. ಅದು ಜಾರಿಗೆ ತರುವ ಕಾರ್ಯಕ್ರಮಗಳು ಹಾಗೇ ಇರುತ್ತವೆ. ನಾವು ಬರೀ ಭಾಷಣ ಮಾಡುವುದಿಲ್ಲ. ಕೆಲಸ ಮಾಡುತ್ತೇವೆ. ಇದನ್ನೇ ನಮ್ಮ ಸ್ವಯಂಸೇವಕರು ಮಾಡಿದರು. ಇದೇ ಪೂರ್ಣ ಸಾಕ್ಷರತೆ ಸಾಧಿಸಲು ಸಾಧ್ಯವಾಯಿತು. 1996 ಡಿ. 30ಕ್ಕೆ ನಾವು ಗುರಿ ಮುಟ್ಟಿದೆವು.

ಯುವ ಜನತೆಗಾಗಿ ಯಾವುದಾದರೂ ನೀತಿಯನ್ನು ರೂಪಿಸಿದ್ದೀರಾ? ತ್ರಿಪುರದಲ್ಲಿ ಮಹಿಳೆಯ ಸ್ಥಾನಮಾನವೇನು?

● 'ಯುವಜನತೆಗೆ ನೀತಿ' ಜಾರಿಗೆ ತರುವುದು. ನಾವು ಅಗತ್ಯ ಎಂದು ಭಾವಿಸಿಲ್ಲ. ಶಿಕ್ಷಣ-ಕೆಲಸ ಕೊಡುವುದೇ ನಮ್ಮ ಗುರಿಯಾಗಿದೆ. ಇದರಲ್ಲಿ ನಾವು ಯಶಸ್ಸು ಸಾಧಿಸುತ್ತಿದ್ದೇವೆ. ಆರ್ಥಿಕವಾಗಿ, ಸಾಮಾಜಿಕವಾಗಿ ಸುಧಾರಿಸಬೇಕಾದರೆ ಶಿಕ್ಷಣ-ಕೆಲಸ ಅಗತ್ಯವೆಂದು ನಾವು ನಂಬಿದ್ದೇವೆ. ಬರೀ ನೀತಿಗಳು ಎನ್ನುವುದು ಕೇವಲ ಬೋಗಸ್ ಮಾತ್ರ. ಪ್ರಸ್ತುತ ತ್ರಿಪುರದಲ್ಲಿ ಮಹಿಳೆಯರು ಸ್ವಾವಲಂಬನೆ ಸಾಧಿಸಲು ಈವರೆಗೂ ಸಾಧ್ಯವಾಗಿಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ. ತ್ರಿಪುರ ಕೈಗಾರಿಕವಾಗಿ ಹಿಂದುಳಿದ ರಾಜ್ಯ. ಆದರೂ ತೋಟಗಾರಿಕೆ ಬೆಳೆಗಳಲ್ಲಿ ಮಹಿಳೆಯರೂ ಹೆಚ್ಚಾಗಿ ಅವಲಂಬಿತವಾಗಿದ್ದಾರೆ. ಇದಕ್ಕೆ ಸರಕಾರ ಅಗತ್ಯ ಸೌಲಭ್ಯವನ್ನು ಒದಗಿಸುತ್ತಿದೆ.

ತ್ರಿಪುರದಲ್ಲಿ ನೀವು ಹೆದರಿಸುತ್ತಿರುವ ಸಮಸ್ಯೆಗಳು ಯಾವುವು?

● ಜನಾಂಗೀಯ ಕಲಹ, ವಲಸೆ ಸಮಸ್ಯೆ, ಭಯೋತ್ಪಾದನೆ.

ಇವನ್ನು ಹತ್ತಿಕ್ಕಲು ನಿಮ್ಮ ಸರಕಾರ ಹೇಗೆ ಶ್ರಮಿಸುತ್ತಿದೆ?

● ತ್ರಿಪುರದಲ್ಲಿ ಬುಡಕಟ್ಟು ಜನಾಂಗ ಇತರ ಜನಾಂಗದ ನಡುವೆ ಕಲಹ ಅವ್ಯಾಹತವಾಗಿ ನಡೆದು ಕೊಂಡು ಬಂದಿದೆ. ಇದನ್ನು ಹತ್ತಿಕ್ಕಲು ನಾವು ಹೆಚ್ಚು ದುಡಿದಿದ್ದೇವೆ. ಎರಡು ಬಣಗಳನ್ನು ಒಗ್ಗೂಡಿಸುವ ಧ್ಯೇಯ ನಮ್ಮದು. ಆದರೆ ಕಾಂಗ್ರೆಸ್ ತನ್ನ ಅವಧಿಯಲ್ಲಿ ವಿಭಜಿಸಿ ಆಳುವ ನೀತಿಯನ್ನು ಮುಂದುವರಿಸಿಕೊಂಡೇ ಬಂತು. ಪರಿಣಾಮವಾಗಿ ನೈಸರ್ಗಿಕವಾಗಿ ಸಬಲವಾಗಿದ್ದ ತ್ರಿಪುರ ಪ್ರಕ್ಷುಬ್ಧಗೊಂಡಿತು. ನಮ್ಮ ಸರಕಾರ ಎರಡು ಜನಾಂಗಗಳನ್ನು ಸಾಮರಸ್ಯವಾಗಿ ಕರೆದೊಯ್ಯುವ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಜನಾಂಗೀಯ ಕಲಹ ಹೆಚ್ಚಿದಂತೆ ವಲಸೆ ಸಮಸ್ಯೆ ಹೆಚ್ಚಿತು. ಹೀಗೆ 50 ಸಾವಿರ ಬುಡಕಟ್ಟು ಜನ ನೆರೆ ರಾಷ್ಟ್ರಗಳಿಂದ ವಲಸೆ ಹೋದರು, ಅಲ್ಲಿರಲು ಅವಕಾಶ ಸಿಗದೇ ತ್ರಿಪುರಕ್ಕೆ ವಾಪಸ್ಸಾದರು. ಅವರಿಗೆಲ್ಲ ಮೂಲಭೂತ ಅಗತ್ಯಗಳನ್ನು ಒದಗಿಸಲಾಗಿದೆ.

ಈಚೆಗೆ ಅಸ್ಸಾಂನಲ್ಲಿಯಂತೆ ತ್ರಿಪುರಾದಲ್ಲಿಯೂ ಉಗ್ರಗಾಮಿಗಳು ತಲೆ ಎತ್ತಿದ್ದಾರೆ. ಆದರೆ ಕೇಂದ್ರ ಸರಕಾರ ನೆರವು ಕೋರಲಾಗಿದೆ. ಈ ಬಗ್ಗೆ ಸೂಕ್ತ ರಕ್ಷಣೆ ಒದಗಿಸಲು ಉನ್ನತ ತಂಡವೊಂದ ಸಮೀಕ್ಷೆ ನಡೆಸಿದೆ. ಅಗ್ನಿ ಸೂಕ್ಷ್ಮ ಪ್ರದೇಶಗಳಾದ ಗಡಿ ಭಾಗಗಳಲ್ಲಿ ವ್ಯಾಪಕ ಭದ್ರತೆ ಮಾಡಲಾಗಿದೆ.

ದೇವೇಗೌಡರ ಬಗ್ಗೆ ನಿಮ್ಮ ಪ್ರತಿಕ್ರಿಯೆ.........

● ಅವರು ಪ್ರಧಾನಿಯಾಗುವುದು ಅನಿವಾರ್ಯವಾಗಿತ್ತು. ಆದರೂ ಇದರಲ್ಲಿ ವಿಶೇಷವೇನೂ ಇಲ್ಲ. ಆದಾಗ್ಯೂ ಗೌಡರ ಕೆಲಸ - ಸಾಧನೆ ಮೆಚ್ಚತಕ್ಕದ್ದು. ಈಶಾನ್ಯ ರಾಜ್ಯಗಳ ಪ್ರಗತಿಗೆ ಹೆಚ್ಚು ಒತ್ತು ಕೊಟ್ಟಿದ್ದು ಸಂಯುಕ್ತರಂಗ ಸರಕಾರ. ರಾಷ್ಟ್ರೀಯ ರೈಲ್ವೆ ನಕ್ಷೆಯಲ್ಲಿ ತ್ರಿಪುರದ ರಾಜಧಾನಿ 'ಅಗರ್ತಲಾ'ಗೆ ಸ್ಥಾನ ಕಲ್ಪಿಸಿದ್ದು ಸಾಧನೆ. ನೆಹರು ಯಿಂದ ನರಸಿಂಹರಾವ್‌ವರೆಗೂ ನನೆಗುದಿಗೆ ಬಿದ್ದಿದ್ದ ಈ ಯೋಜನೆಗೆ ಜೀವ ಕೊಟ್ಟವರು ದೇವೇಗೌಡರು. ಅವರು ಈಶಾನ ರಾಜ್ಯಗಳಿಗೆ ಭೇಟಿ ನೀಡಿದ್ದರು.

ಹದಿನೆಂಟು ದುಡಿಯುವ ವರ್ಗದ ಪಕ್ಷಗಳ ಕರೆ

ಸಾಮ್ರಾಜ್ಯಶಾಹಿ 'ಹೊಸ ವಿಶ್ವ ವ್ಯವಸ್ಥೆ'ಗೆ ಯುರೇಶ್ಯನ್ ಬದಲಿ

ಟರ್ಕಿಯ ಕಾರ್ಮಿಕರ ಪಕ್ಷ ತನ್ನ ಮಹಾಧಿವೇಶನವನ್ನು ಈ ಬಾರಿ ವಿಶಿಷ್ಟ ರೀತಿಯಲ್ಲಿ ನಡೆಸಿತು. ಮಹಾಧಿವೇಶನದ ಮೊದಲು ಮೂರು ದಿನದ ಅಂತರ್ರಾಷ್ಟ್ರೀಯ ಸಮ್ಮೇಳನ ಏರ್ಪಡಿಸಿತು. ಹದಿನೆಂಟು ದುಡಿಯುವ ವರ್ಗದ ಪಕ್ಷಗಳು, ಇತರ ಪ್ರಗತಿಪರ ಸಂಘಟನೆಗಳು, ವ್ಯಕ್ತಿಗಳು ಸೇರಿದ್ದ ಈ ಸಭೆ ಸಾಮ್ರಾಜ್ಯಶಾಹಿಯ 'ಹೊಸ ವಿಶ್ವ ವ್ಯವಸ್ಥೆ'ಯನ್ನು ಕೊನೆಗಾಣಿಸಿ ಅದಕ್ಕೆ ಯುರೇಶ್ಯನ್ ಬದಲಿ ರೂಪಿಸುವ ಕರೆ ನೀಡಿತು. ಸಾಮ್ರಾಜ್ಯಶಾಹಿ 'ಜಾಗತೀಕರಣ'ಕ್ಕೆ ಇದು ದುಡಿಯುವ ವರ್ಗದ 'ಜಾಗತೀಕರಣ'ದ ಸವಾಲಾಗಿತ್ತು.

ಯುರೋಪಿನಿಂದ ಪೆಸಿಫಿಕ್ ಸಾಗರದ ತಟದವರೆಗಿನ ಏಶ್ಯಾ ಸೇರಿದ ಈ ದೊಡ್ಡ ಪ್ರದೇಶ ಯುರೇಶ್ಯಾ ಜಾಗತಿಕ ಸಾಮ್ರಾಜ್ಯಶಾಹಿ ಬೆಳವಣಿಗೆ ಕಂಡ ಪ್ರದೇಶ. ಈ ಯುರೇಶ್ಯವೇ ಸಾಮ್ರಾಜ್ಯಶಾಹಿ ವ್ಯವಸ್ಥೆಗೆ ಸವಾಲಾಗಿ, ಅದನ್ನು ನಾಶ ಮಾಡಿ ಯುರೇಶ್ಯನ್ ಬದಲಿ ರೂಪಿಸುವುದು ಎಂಬುದು ಸಮ್ಮೇಳನದ ಮುಖ್ಯ ಆಶಯವಾಗಿತ್ತು. ಚೀನ, ರಶ್ಯ, ಭಾರತದಂತಹ ಮಹಾನ್ ದೇಶಗಳನ್ನೊಳಗೊಂಡ ಈ 'ಯುರೇಶ್ಯನ್' ಬದಲಿ ಚರಿತ್ರೆಯನ್ನು ಮುನ್ನಡೆಸುವುದರಲ್ಲಿ ಮಹಾನ್ ಪಾತ್ರ ವಹಿಸಲಿದೆ ಎಂದು ಸಮ್ಮೇಳನ ಅಭಿಪ್ರಾಯಪಟ್ಟಿತು.

ರಾಷ್ಟ್ರೀಯತೆ, ಜನಾಂಗೀಯ, ಧಾರ್ಮಿಕ ವಿಭಜನೆಗಳನ್ನು ಬಳಸಿ ಪ್ರತ್ಯೇಕತಾವಾದದ ವಿಷ ಬೀಜ ಬಿತ್ತುತ್ತಾ ಸಾಮ್ರಾಜ್ಯಶಾಹಿ ಈ ಯುರೇಶ್ಯನ್ ಪ್ರದೇಶವನ್ನು ರಣರಂಗವಾಗಿಸಿದೆ. ಈ 'ಹೊಸ ವಿಶ್ವ ವ್ಯವಸ್ಥೆ' ನಿಜವಾಗಿಯೂ ಹಳೆ ವ್ಯವಸ್ಥೆ. ಹಳೆ ವಸಾಹತುಶಾಹಿ ಹಾಗೂ ಹೊಸ ವಸಾಹತುಶಾಹಿ ವ್ಯವಸ್ಥೆಯ ಸಂಕರ ಇದು. ಯುರೇಶ್ಯಾವನ್ನು ಒಡೆಯಲು ಸಾಮ್ರಾಜ್ಯಶಾಹಿ ದೇಶಗಳು ನಡುವೆ ಸಂಚು ನಡೆಸಿವೆ. ಕ್ರೊಏಶಿಯಾ ಹಾಗೂ ಸ್ಲೋವೇನಿಯಾ, ಜರ್ಮನಿ ತನ್ನ ನಿಯಂತ್ರಣದಡಿ ತಂದಿದೆ. ಅಮೇರಿಕಾ ಬೋಸ್ನಿಯಾ, ಹರ್ಜಗೋವಿನಾಗಳನ್ನು ತನ್ನ ಕೆಳಗಣ ಶೇರಿಯತ್ ಆಡಳಿತದಲ್ಲಿ ತಂದಿದೆ. ಚೆಕೊಸ್ಲೋವಾಕಿಯಾ, ಇರಾಕ್‌ಗಳನ್ನು ಇಬ್ಭಾಗ ಮಾಡಿದ್ದಾರೆ. ಮಧ್ಯ ಪ್ರಾಚ್ಯ, ಕಾರೇಶಿಯನ್, ಅಫಘಾನಿಸ್ತಾನ, ಇಂಡಿಯಾಗಳನ್ನು ರಾಷ್ಟ್ರೀಯ, ಜನಾಂಗೀಯ, ಧಾರ್ಮಿಕ ಕಲಹದಲ್ಲಿ ಮುಳುಗಿಸಿ ಒಡೆದು ಆಳಲು ಇವರು ಪ್ರಯತ್ನಿಸುತ್ತಿದ್ದಾರೆ.

ಚೀನಾದಲ್ಲಿ ಟಿಬೇಟ್‌ನ ಹೆಸರಲ್ಲಿ, ಕೊರಿಯಾವನ್ನು ಬೆದರಿಸುತ್ತಾ, ವಿಯೆಟ್ನಾಂನಲ್ಲಿ 'ಶಾಂತಿಮಂತ್ರ'ವನ್ನು ಪಠಿಸುತ್ತಾ ಸಮಾಜವಾದಿ ವ್ಯವಸ್ಥೆಯನ್ನು ವಿನಾಶ ಮಾಡಲು ಸಾಮ್ರಾಜ್ಯಶಾಹಿ ಹೊರಟಿದೆ. ಇರಾಕಿನ ಭಾಗವನ್ನು ಕಿತ್ತು ಟರ್ಕಿಯ ಅಡಿಯಲ್ಲಿ ಕುರ್ದಿಸ್ತಾನ್ ಮಾಡುವ ಹಂಚಿಕೆ ಹೊಂದಿದೆ ಎಂದು ಸಮ್ಮೇಳನವನ್ನು ಉದ್ಘಾಟಿಸುತ್ತಾ ಹಿರಿಯ ಟರ್ಕಿಸ್ ವರ್ಕರ್ಸ್ ಪಾರ್ಟಿಯ ನಾಯಕ ಸೂಫಿ ಕರಮನ್ ಹೇಳಿದರು.

ಟರ್ಕಿಷ್ ವರ್ಕರ್ಸ್ ಪಾರ್ಟಿಯ ಅಧ್ಯಕ್ಷ ದೋಗು ಪೆರಿನ್‌ಸೆಕ್ ಮಾತನಾಡುತ್ತಾ 'ಹೊಸ ವಿಶ್ವ ವ್ಯವಸ್ಥೆ' ಎಲ್ಲಾ ವಿಕಾಸಶೀಲ ದೇಶಗಳ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ, ಕೃಷಿ ಕ್ಷೇತ್ರದ, ಸಾಮಾಜಿಕ ಭದ್ರತೆ ವ್ಯವಸ್ಥೆಯ ನಾಶಕ್ಕೆ ಕಾರಣವಾಗಿದೆ. ಇದರಿಂದ ಈ ದೇಶಗಳ ಸ್ವಾವಲಂಬನೆ, ಸ್ವಾತಂತ್ರ್ಯವನ್ನು ನಾಶ ಮಾಡಲಾಗುತ್ತಿದೆ. ಚೀನ, ರಶ್ಯ, ಇಂಡಿಯಾ, ಅರಬ್ ಜಗತ್ತು, ಟರ್ಕಿಗಳ ಜನರು ಮಾನವ ಕೋಟಿ ಸ್ವಾತಂತ್ರ್ಯ, ಶಾಂತಿ ಮತ್ತು ಸಮಾಜವಾದವನ್ನು ಕಾಪಾಡಬಲ್ಲರು ಎಂದರು.

ಚೀನಾದ ಪ್ರತಿನಿಧಿ ಮಾತನಾಡುತ್ತಾ ಸಾಮ್ರಾಜ್ಯಶಾಹಿ ಪಿತೂರಿ ಹಾಗೂ ವಸಾಹತುಶಾಹಿ ದಬ್ಬಾಳಿಕೆಯಿಂದ ದೂರಗಾಮೀ ಆರ್ಥಿಕ ಹಿಂದುಳಿದಿರುವಿಕೆಯನ್ನು ಹಲವಾರು ದೇಶಗಳು ಎದುರಿಸುತ್ತಿವೆ. ಚೀನಾದ ವೇಗದ ಆರ್ಥಿಕ ಪ್ರಗತಿ, 1985ರಿಂದ 1995ರೊಳಗೆ ಹತ್ತು ವರ್ಷದಲ್ಲಿ ಬಡತನವನ್ನು ಕಾಲು ಭಾಗಕ್ಕಿಳಿಸಿ ಪ್ರಗತಿ ಹಾಗೂ 20ನೇ ಶತಮಾನದ ಕೊನೆಯ ಹೊತ್ತಿಗೆ ಬಡತನ ನಿರ್ಮೂಲನ ಮಾಡುವ ಯೋಜನೆ, ಚೀನಾದಲ್ಲಿ ಪ್ರಗತಿ ಹಾಗೂ ಶಾಂತಿ ಕಾಯಂಗೊಳಿಸುವಾಗ ಮಾನವ ಕೋಟಿಯ ಪ್ರಗತಿಯಲ್ಲಿ ಚೀನಾದ ಈ ಕೊಡುಗೆ ಗಮನಾರ್ಹ ಪಾತ್ರ ವಹಿಸಲಿದೆ ಎಂದರು.

ಕೊರಿಯಾದ ಪ್ರತಿನಿಧಿ ಅಮೇರಿಕಾ ಚರಿತ್ರೆಯ ಗುರಿಯನ್ನು ನಿಲ್ಲಿಸಲು ಪ್ರಯತ್ನಿಸುತ್ತಿದೆ. 'ಪ್ರಜಾಪ್ರಭುತ್ವ' ಮತ್ತು 'ಮಾನವ ಹಕ್ಕು'ಗಳ ಸೋಗಿನಲ್ಲಿಎಲ್ಲಾ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಮೂಗು ತೂರಿಸುವುದು ಅದರ ತಂತ್ರಗಳಲ್ಲಿ ಒಂದು. ಇದೇ ತಂತ್ರವನ್ನು ಬಳಸಿ ಉತ್ತರ ಕೊರಿಯಾ ಹಾಗೂ ಕ್ಯೂಬಾದ ಸಮಾಜವಾದವನ್ನು ನಿರ್ನಾಮ ಮಾಡಲು ಪ್ರಯತ್ನಿಸುತ್ತಿದೆ.

ಮಾಜಿ ಸಮಾಜವಾದಿ ದೇಶಗಳ ಪ್ರತಿನಿಧಿಗಳು ಮಾತನಾಡುತ್ತಾ ಬಂಡವಾಳಶಾಹಿಯನ್ನು ಈ ದೇಶಗಳಲ್ಲಿ ಪುನಃ ಸ್ಥಾಪಿಸಿ ಸಮಾಜವಾದದ ಎಲ್ಲಾ ಸಾಧನೆ, ಉದ್ಯೋಗ, ಮನೆ, ಶಿಕ್ಷಣ, ಆರೋಗ್ಯ, ಕಲ್ಯಾಣ, ಪೆನ್ಶನ್ ಮತ್ತಿತರ ಯೋಜನೆಗಳ ಗ್ಯಾರಂಟಿಗಳನ್ನು ನಿರ್ನಾಮ ಮಾಡಲಾಗಿದೆ. ಬಂಡವಾಳಶಾಹಿ ಇದ್ಯಾವುದನ್ನೂ ನೀಡುವ ಉದ್ದೇಶ ಹೊಂದಿಲ್ಲ. ಈ ದೇಶಗಳ ಸಮಸ್ಯೆಗಳನ್ನು ಬಂಡವಾಳಶಾಹಿ ಪರಿಹರಿಸಲಾರದು ಎಂದು ಎಲ್ಲರಿಗೂ ಮನವರಿಕೆಯಾಗುತ್ತಿದೆ. ಸಾಮ್ರಾಜ್ಯಶಾಹಿ ಅಡಿಯಾಳಾದ ಹಿಂದುಳಿದ ಬಂಡವಾಳಶಾಹಿ ಈ ದೇಶಗಳ ಮೇಲೆ ಹೊರಿಸುವುದು ಸಾಮ್ರಾಜ್ಯ ಶಾಹಿಗಳ ಉದ್ದೇಶ.

ಪಶ್ಚಿಮ ಯುರೋಪ್ ಪ್ರತಿನಿಧಿಗಳು ಮಾತನಾಡುತ್ತಾ ಬಂಡವಾಳಶಾಹಿ ಜಗತ್ತಿನಲ್ಲೂ ಮೂರುವರೆ ಕೋಟಿ ನಿರುದ್ಯೋಗಿಗಳಿದ್ದಾರೆ, ಅಮೇರಿಕದಲ್ಲೇ ಶೇಕಡಾ 23 ಜನ ಬಡತನದಲ್ಲಿದ್ದಾರೆ. ಮೂರು ಕೋಟಿ ಜನರಿಗೆ ಯಾವುದೇ ಆರೋಗ್ಯ ವ್ಯವಸ್ಥೆ ಇಲ್ಲ.

ಅರಬ್ ಐಕ್ಯತೆಯನ್ನು ನಿರ್ನಾಮ ಮಾಡಿ, ಈ ಪ್ರದೇಶದಲ್ಲಿ ಶಾಂತಿಗೆ ಅಡ್ಡ ಬರುವುದು ಹಾಗೂ ಭಯೋತ್ಪಾದನೆಯನ್ನು ಹಬ್ಬಿಸುವುದು ಸಾಮ್ರಾಜ್ಯಶಾಹಿಯ ಗುರಿ. ಆದರೆ ಇವೆಲ್ಲಾ 'ಹೊಸ ವಿಶ್ವ ವ್ಯವಸ್ಥೆ'ಯನ್ನು ಜಗತ್ತಿನ ಮೇಲೆ ಹೇರುವ ತಂತ್ರ, ಈ ವ್ಯವಸ್ಥೆಯು ಸಮಸ್ಯೆಗಳಿಗೆ ಪರಿಹಾರ ನೀಡದು. ಕೊನೆಗೆ ಆ ವಿಶ್ವ ವ್ಯವಸ್ಥೆಯನ್ನೇ ನಾಶ ಮಾಡುವ ಶಕ್ತಿಗಳಿಗೆ ಅದು ಕುಮ್ಮಕ್ಕು ಕೊಡುತ್ತಿದೆ ಎಂದರು.

ಸಮ್ಮೇಳನದಲ್ಲಿ ಅಜರ್‌ಬೈಜಾನ್, ಬಲ್ಗೇರಿಯಾ, ಡೆನ್ಮಾರ್ಕ್, ಜಾರ್ಜಿಯಾ, ಸಿರಿಯಾ, ಸ್ಪೇನ್, ಟರ್ಕಿ, ಕೊರಿಯಾ, ಪೊಲೆಂಡ್, ರಶ್ಯ, ಸಿರಿಯಾ, ಉಕ್ರೇನ್, ಯುಗೋಸ್ಲಾವಿಯಾ, ಸರ್ಬಿಯಾದ ಸಮಾಜವಾದಿ ಅಥವಾ ಕಮ್ಯುನಿಸ್ಟ್ ಪಕ್ಷಗಳು ಭಾಗವಹಿಸಿದ್ದರು. ಸಿಪಿಐ(ಎಂ)ನ ಪ್ರತಿನಿಧಿ ಬ್ರಿಟನ್‌ನ ಅವತಾರ್ ಸಾದಿಕ್ ಭಾಗವಹಿಸಿದ್ದರು. ಪ್ಯಾಲೇಸ್ತೇನ್‌ನಿಂದ ಎಲ್‌ಫತೇಹ್ ಎಂಬ ಎಡಪಂಥೀಯ ಪಕ್ಷ ಭಾಗವಹಿಸಿತ್ತು.

ಸಮ್ಮೇಳನ ಕ್ಯೂಬಾ, ಕೊರಿಯಾ, ಇರಾಕ್ ಹಾಗೂ ಲಿಬ್ಯಾಗಳ ಮೇಲೆ ಸಾಮ್ರಾಜ್ಯಶಾಹಿ ದಿಗ್ಬಂಧನವನ್ನು ಖಂಡಿಸಿತ್ತು. ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ಸಾಮ್ರಾಜ್ಯಶಾಹಿ ಎಲ್ಲಾ ದೇಶಗಳ ಮೇಲೆ ಹರಿಯಬಿಟ್ಟಿರುವ ಚರಿತ್ರೆಯಲ್ಲೇ ಹಿಂದೆಂದೂ ಕಂಡರಿಯದ ದಬ್ಬಾಳಿಕೆಗೆ ಎಲ್ಲಾ ಸಾಮ್ರಾಜ್ಯಶಾಹಿ ವಿರೋಧಿ ಐಕ್ಯತೆ, ಐಕ್ಯ ಚಳುವಳಿಗಳ ಕಾರ್ಯಾಚರಣೆಯೇ ಉತ್ತರ. ಈ ಶತಮಾನದ ಎರಡು ದೊಡ್ಡ ಮಾನವ ಕೋಟಿಯ ಸಾಧನೆಗಳಾದ ಸ್ವಾತಂತ್ರ್ಯಮತ್ತು ಸಮಾಜವಾದವನ್ನು ನಾಶ ಮಾಡಲು ಬಿಡದೆ ಕಾಪಾಡಿಕೊಳ್ಳುವುದು, ಯುರೇಶ್ಯನ್ ಬದಲಿಯ ಸಾರ ಎಂದು ಸಮ್ಮೇಳನದ ಹೇಳಿಕೆ ಸಾರಿದೆ.

ಪಾಕಿಸ್ತಾನದಲ್ಲಿ ಫೆಬ್ರುವರಿ 3ರಂದು ಚುನಾವಣೆ

ಪಾಕಿಸ್ತಾನದಲ್ಲಿ ಫೆಬ್ರವರಿ 3ರಂದು ಚುನಾವಣೆ ನಡೆಸಲಾಗುವುದು ಎಂದು ರಕ್ಷಣೆ ಹಾಗೂ ರಾಷ್ಟ್ರೀಯ ಭದ್ರತಾ ಮಂಡಳಿ ಘೋಷಿಸಿದೆ.ಆದರೆ ಈ ಮಂಡಳಿಯ ರಚನೆಯೇ ಪಾಕಿಸ್ತಾನದ ರಾಜಕೀಯ ಪಕ್ಷಗಳಲ್ಲಿ ತೀವ್ರ ಅಸಮಾಧಾನ ತಂದಿದೆ. ಈ ಮಂಡಳಿ ದೇಶದ ಆಡಳಿತದಲ್ಲಿ ಸೈನ್ಯದ ಪಾತ್ರವನ್ನು ಅಧಿಕೃತಗೊಳಿಸುವ ಪ್ರಯತ್ನ ಎನ್ನಲಾಗಿದೆ. ಈ ಮಂಡಳಿಯ ಅಧ್ಯಕ್ಷರಿಗೆ ಸಲಹಾ ಮಂಡಳಿಯಾದರು ಹೆಚ್ಚಿನ ಅಧಿಕಾರ ಈ ಮಂಡಳಿಗೆ ಇದೆ. ಅಲ್ಲದೆ ಈ ಮಂಡಳಿಯಲ್ಲಿ ಬರಿ ಸೈನ್ಯಾಧಿಕಾರಿಗಳೂ ಇದ್ದಾರೆ. ಈ ಮಂಡಳಿ ತಂದಿರುವ ಚುನಾವಣಾ ನಿಯಮಗಳಲ್ಲಿ, ದೇಶದ ನ್ಯಾಯಾಂಗ ಹಾಗೂ ಸೈನ್ಯವನ್ನು ಟೀಕಿಸಬಾರದು ಎಂದು ವಿಧಿಸಲಾಗಿದೆ. ಇದು ಚುನಾವಣೆ ಎಷ್ಟರ ಮಟ್ಟಿಗೆ ಮುಕ್ತ ಹಾಗೂ ನ್ಯಾಯಯುತ ವಾಗುತ್ತದೆ ಅಲ್ಲದೆ ಚುನಾವಣೆ ನಂತರ ಹೊಸ ಸರಕಾರಕ್ಕೆ ಎಷ್ಟು ಅಧಿಕಾರದವಿರುತ್ತದೆ ಎನ್ನುವ ಬಗ್ಗೆತೀವ್ರ ಗುಮಾನಿ ಹುಟ್ಟಿಸಿದೆ.ಪಾಕಿಸ್ತಾನ ಮುಸ್ಲಿಂ ಲೀಗ್, ಬೆನಜಿರ್ ಭುಟ್ಟೋರ ಪಾಕಿಸ್ತಾನ ಪೀಪಲ್ಸ್ ಪಾರ್ಟಿ, ಮೊಹಜೀರ್ ಪಕ್ಷ ಹಾಗೂ ಕ್ರಿಕೆಟ್‌ನ ಇಮ್ರಾನ್ ಖಾನ್ ಪಕ್ಷ ಚುನಾವಣೆಯಲ್ಲಿ ಭಾಗವಹಿಸುತ್ತಿವೆ. ಇಸ್ಲಾಮಿಕ್ ಮೂಲ ಭೂತವಾದಿ ಜಮಾತೇ ಇಸ್ಲಾಮಿ ಚುನಾವಣೆಯನ್ನು ಬಹಿಷ್ಕರಿಸಲಿದೆ.

ಲೋಕಸಂಚಾರ



ಶರತ್‌ಚಂದ್ರ

ಆಫ್ರಿಕಾದ 'ಖಾಸಗೀಕರಣ'ಕ್ಕೇ ಸಂಚು!

ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ, ಇತರ ಸಂಸ್ಥೆಗಳ ಖಾಸಗೀಕರಣ ದೇಶಗಳ ಎಲ್ಲಾ ಸಮಸ್ಯೆಗಳಿಗೆ ಮದ್ದು. ಈ ಮಂತ್ರ ಏನೂ ಹೊಸದಲ್ಲ. ಆದರೆ ಲಂಡನ್‌ನ ಒಂದು ಸಂಶೋಧನಾ ಸಂಸ್ಥೆಯ ಪತ್ರಿಕೆಯಲ್ಲಿ ಪ್ರಕಟವಾದ ಹೊಸ ಸಲಹೆ ಕೇಳಿದರೆ ಬೆಚ್ಚಿ ಬೀಳುತ್ತೀರಾ. ಆಫ್ರಿಕಾದ ಸಮಸ್ಯೆಗಳ ವಿಶ್ಲೇಷಣೆ ಮಾಡುತ್ತಾ ಇಡೀ ದೇಶವನ್ನೇ ದಕ್ಷತೆಯಿಂದ ನಡೆಸಬಲ್ಲ 'ಬಹುರಾಷ್ಟ್ರೀಯ ಕಂಪೆನಿ'ಗಳಿಗೆ 21 ವರ್ಷಗಳ ಗುತ್ತಿಗೆ ಕೊಡುವುದೇ ಆ ಪರಿಹಾರ. ಈ ಕಂಪನಿಗಳ ಬಜೆಟ್‌ಗಳು, ಕೆಲವು ದೇಶಗಳ ಬಜೆಟ್‌ನ ಎಷ್ಟೋ ಪಾಲು ಇರುವುದಂತೆ ಇದೇನು ಸಮಸ್ಯೆಯಲ್ಲ ಎಂದಿದೆ ಈ ಪತ್ರಿಕೆ. ಇಡೀ ದೇಶಗಳನ್ನೇ ಕಬಳಿಸಿದ್ದ ಈಸ್ಟ್ ಇಂಡಿಯಾ ಕಂಪೆನಿ, ಮುಂತಾದವುಗಳ ಕಾಲಕ್ಕೆ ವಾಪಸ್ ಹೋಗಲು ಸಾಮ್ರಾಜ್ಯಶಾಹಿ ಬಯಕೆಯನ್ನು ಈ ಪತ್ರಿಕೆ ತೋಡಿಕೊಳ್ಳುತ್ತಿದೆ ಅಷ್ಟೆ.

ಈ ಸಲಹೆ ಬಂದಿರುವುದು ಮುಖ್ಯವಾಗಿ ಸಾಮ್ರಾಜ್ಯಶಾಹಿ ದೇಶಗಳ ಬ್ಯಾಂಕು ಮುಂತಾದ ಆರ್ಥಿಕ ಸಂಸ್ಥೆಗಳು ಆಫ್ರಿಕಾಕ್ಕೆ ಕೊಟ್ಟಿರುವ ಸಾಲ ಮರುಪಾವತಿಯಾಗುವುದರಲ್ಲಿ ಉಂಟಾಗಿರುವ ಪರಿಸ್ಥಿತಿಯಿಂದ ಈ ಸಾಲವನ್ನೆಲ್ಲಾ ಈ ದೇಶಗಳ 'ಭ್ರಷ್ಟ' ಸರಕಾರಗಳ, ಸರ್ವಾಧಿಕಾರಿಗಳು ತಿಂದು ಹಾಕಿವೆ. ಆದ್ದರಿಂದ ಸರಕಾರವನ್ನೇ ವಹಿಸಿಕೊಳ್ಳುವುದು ಇದಕ್ಕಿರುವ ಪರಿಹಾರ. ಈ ಎಲ್ಲಾ ಸರಕಾರಗಳು ಹೆಚ್ಚು ಕಡಿಮೆ ಈ ಕಂಪೆನಿಗಳ ಹಿತಾಸಕ್ತಿ ಕಾಪಾಡಲು ಸೈನ್ಯ ಸಾಕಿಕೊಂಡು ಇರುವುದು. 'ಭ್ರಷ್ಟಾಚಾರ'ವನ್ನು ಇದೇ ಕಂಪೆನಿಗಳು ಹುಟ್ಟುಹಾಕಿರುವುದನ್ನು ಈ ಸಂದರ್ಭದಲ್ಲಿ ಮರೆಯಲಾಗುವುದೇ. ಆಫ್ರಿಕಾದಲ್ಲಿ ಮುಖ್ಯವಾಗಿ ಫ್ರೆಂಚ್ ಕಳೆದ ಐದು ವರ್ಷಗಳಲ್ಲಿ 17 ಬಾರಿ ತನ್ನ ಮಾಜಿ ವಸಾಹತುಗಳಲ್ಲಿ ಸೈನಿಕ ಕಾರ್ಯಾಚರಣೆ ನಡೆಸಿತು. ಅದರ ಪರ ಸರಕಾರಗಳ ಪರವಾಗಿ. ಅಮೇರಿಕಾ ಸಹ 10 ಸಾವಿರ ಸೈನಿಕರ ವಿಶೇಷ ಪಡೆ ತಯಾರಿಸುತ್ತಿದೆ. ಇವೆಲ್ಲಾ ಆಫ್ರಿಕಾದ 'ಖಾಸಗೀಕರಣಕ್ಕೆ' ತಯಾರಿ ಅಲ್ಲದೇ ಬೇರೇನಿಲ್ಲ.

ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ 9ನೇ ರಾಷ್ಟ್ರೀಯ ಸಮ್ಮೇಳನ

ಅಖಿಲಭಾರತ ರಾಜ್ಯಸರಕಾರಿ ನೌಕರರ ಒಕ್ಕೂಟದ 9ನೇ ರಾಷ್ಟ್ರೀಯ ಸಮ್ಮೇಳನವು 1996 ನೇ ಡಿಸೆಂಬರ್ 28 ರಿಂದ 31 ರವರೆಗೆ ಕೇರಳದ ತಿರುವನಂತಪುರಂನ ಟಾಗೋರ್ ಥಿಯೇಟರ್‌ನಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಡಿಸೆಂಬರ್ 28 ರಂದು 18 ರಾಜ್ಯಗಳಿಂದ ಬಂದ ಪ್ರತಿನಿಧಿ ಮತ್ತು ವೀಕ್ಷಕರು ಟಾಗೋರ್ ಥಿಯೇಟರ್ ಆವರಣದಲ್ಲಿ ಸಭೆ ಸೇರಿದ್ದರು.

ಸಮ್ಮೇಳನವನ್ನು ಕೇರಳದ ಮುಖ್ಯಮಂತ್ರಿ ಕಾ|| ಇ.ಕೆ.ನಾಯನಾರ್ ರವರು ಉದ್ಘಾಟಿಸಿದರು. ಆರ್.ಜಿ.ಕಾರ್ನಿಕ್ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಸ್ವಾಗತ ಸಮಿತಿ ಅಧ್ಯಕ್ಷರಾದ ರಾಜ್ಯ ಸಿಐಟಿಯು ಪ್ರಧಾನ ಕಾರ್ಯದರ್ಶಿ ಕೆ.ಎಲ್.ರವೀಂದ್ರನ್ ಸ್ವಾಗತಿಸಿದರು. ಎಐಟಿಯುಸಿಯ ಎ.ಚಿತ್ತರಂಜನ್, ಸಿಐಟಿಯುನ ಚೆರಿಯನ್, ಯುಟಿಯುಸಿಯ ಕೆ.ಪಿ.ಶಂಕರದಾಸ್, ಕೇಂದ್ರ ಸರಕಾರಿ ನೌಕರರ ಸಮನ್ವಯ ಸಮಿತಿಯ ರಾಮನ್ ಕುಟ್ಟಿ ಮತ್ತು ಎಐಟಿಯುಸಿಯ ಮಹೇಂದ್ರನ್ ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡಿದರು.

ಟಿಯುಐ ಅಧ್ಯಕ್ಷರು, ಕಬ್ರೆಸ್ ಸರಕಾರಿ ನೌಕರರ ಸಂಘದ ಅಧ್ಯಕ್ಷರು, ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ|| ಎಂ.ಕೆ.ಪಂಧೆ, ಯುಟಿಯುಸಿ, ಎಐಬಿಇಎ ರೈಲ್ವೇ ನೌಕರರ ಸಂಘಗಳು ಸಮ್ಮೇಳನಕ್ಕೆ ಶುಭಕೋರಿ ಸಂದೇಶ ಕಳುಹಿಸಿದ್ದರು. [illegible] ನಂಬೂದರಿ ಪಾಡ್‌ರವರ ಟೇಪ್‌ರೆಕಾರ್ಡ್ [illegible] ಶುಭಸಂದೇಶವನ್ನು ಸಮ್ಮೇಳನದಲ್ಲಿ ಬಿತ್ತರಿಸಲಾಯಿತು. ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸುಕೋಮಲ್ ಸೇನ್‌ರವರು ವರದಿಯನ್ನು ಮಂಡಿಸಿದರು.

ಸಮ್ಮೇಳನದಲ್ಲಿ 18 ರಾಜ್ಯಗಳಿಂದ 44 ಮಹಿಳಾ ಪ್ರತಿನಿಧಿಗಳೂ ಸೇರಿದಂತೆ ಒಟ್ಟು 1,228 ಪ್ರತಿನಿಧಿ ಮತ್ತು ವೀಕ್ಷಕರು ಭಾಗವಹಿಸಿದ್ದರು. ಕರ್ನಾಟಕದ ಆರು ಜಿಲ್ಲೆಗಳಿಂದ ಒಟ್ಟು 30 ಪ್ರತಿನಿಧಿ ಮತ್ತು ವೀಕ್ಷಕರು ಭಾಗವಹಿಸಿದ್ದರು. ಬಾಂಗ್ಲಾದೇಶದಿಂದ ಒಬ್ಬರು, ನೇಪಾಳದಿಂದ ಇಬ್ಬರು ಮತ್ತು ಶ್ರೀಲಂಕಾದಿಂದ ಎಂಟು ಮಂದಿ ಸರಕಾರಿ ನೌಕರರ ಸಂಘಟನೆಗಳ ಸೌಹಾರ್ದ ಪ್ರತಿನಿಧಿಗಳು ಭಾಗವಹಿಸಿದ್ದು, ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು.

ದಿನಾಂಕ 29 ಮತ್ತು 30 ರಂದು ಏಳು ಮಹಿಳಾ ಪ್ರತಿನಿಧಿಗಳೂ ಸೇರಿದಂತೆ 43 ಪ್ರತಿನಿಧಿಗಳು ಪ್ರಧಾನ ಕಾರ್ಯದರ್ಶಿಗಳ ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದರು. ಕರ್ನಾಟಕದಿಂದ ಕೆ.ರಾಮಯ್ಯ ಹೆಗ್ಡೆ, ಜಿ.ಎಲ್ ಮಡಿವಾಳ ಮತ್ತು ಬಿ.ಆರ್.ಶಿವಶಂಕರ ಚರ್ಚೆಯಲ್ಲಿ ಭಾಗವಹಿಸಿದ್ದರು.

ಸಮ್ಮೇಳನದಲ್ಲಿ ಪ್ರಮುಖ ಬೇಡಿಕೆಗಳ ಬಗ್ಗೆ 20 ನಿರ್ಣಯಗಳನ್ನು ಅಂಗೀಕರಿಸಲಾಯಿತು. ಇಬ್ಬರು ಮಹಿಳಾ ಪ್ರತಿನಿಧಿಗಳು ನಿರ್ಣಯಗಳನ್ನು ಮಂಡಿಸಿ ಹಾಗೂ ಇನ್ನಿಬ್ಬರು ಮಹಿಳಾ ಪ್ರತಿನಿಧಿಗಳು ನಿರ್ಣಯಗಳನ್ನು ಬೆಂಬಲಿಸಿ ಮಾತನಾಡಿದರು.

ದಿನಾಂಕ 30 ರಂದು ಮಧ್ಯಾಹ್ನ ಖ್ಯಾತ ಅರ್ಥಶಾಸ್ತ್ರಜ್ಞರಾದ ಡಾ|| ಥಾಮಸ್ ಐಸಕ್‌ರವರು 'ಜನಪರವಾದ ಯೋಜನೆ' ಎಂಬ ವಿಷಯವಾಗಿ ಭೋದಪ್ರದ ಭಾಷಣ ಮಾಡಿದರು.

ದಿನಾಂಕ 31 ರಂದು ಪೂರ್ವಾಹ್ನ ಪ್ರಧಾನ ಕಾರ್ಯದರ್ಶಿಯವರು ಪ್ರತಿನಿಧಿಗಳ ಚರ್ಚೆಗೆ ಎರಡೂವರೆ ಗಂಟೆಗಳ ಕಾಲ ಉತ್ತರಿಸಿದ ನಂತರ ಪ್ರಚಂಡ ಕರತಾಡನದೊಂದಿಗೆ ವರದಿಯನ್ನು ಸರ್ವಾನುಮತದಿಂ ಅಂಗೀಕರಿಸಲಾಯಿತು.

ನಂತರ ಒಕ್ಕೂಟದ ಈ ಕೆಳಕಂಡ 17 ಮಂದಿ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಚುನಾಯಿಸಲಾಯಿತು.

ಸಮ್ಮೇಳನದ ಅಂಗವಾಗಿ ಸಂಗೀತ, ಕವಿಗೋಷ್ಠಿ, ನೃತ್ಯ, ಕಥಕ್ಕಳಿ, ವಿಚಾರ ಸಂಕಿರಣ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ತಿರುವನಂತಪುರಂ ನಗರವು ಸಮ್ಮೇಳನವನ್ನು ಸಾರುವ ಗೋಡೆ ಬರಹಗಳು, ಭಿತ್ತಿ ಪತ್ರಗಳು ಬಾವುಟ ಮತ್ತು ತಳಿರು ತೋರಣಗಳಿಂದ ಕಂಗೊಳಿಸುತ್ತಿತ್ತು. ಹಲವಾರು ಕಾರ್ಮಿಕ ಸಂಘಟನೆಗಳು ಪ್ರತಿನಿಧಿಗಳನ್ನು ಸ್ವಾಗತಿಸುವ ಬ್ಯಾನರುಗಳನ್ನು ಕಟ್ಟಿದ್ದವು.

ದಿನಾಂಕ 31 ರಂದು ಮಧ್ಯಾಹ್ನ ನೌಕರರ ಬೃಹತ್ ವರ್ಣರಂಜಿತ ಮೆರವಣಿಗೆ ನಡೆಯಿತು. ಹಲವಾರು ಕಡೆ ವಿವಿಧ ಕಾರ್ಮಿಕ ಸಂಘಗಳ, ವಿದ್ಯಾರ್ಥಿ, ಯುವಜನ, ಮಹಿಳಾಸಂಘಟನೆಗಳ ಕಾರ್ಯಕರ್ತರು ಘೋಷಣೆಗಳೊಂದಿಗೆ ಮೆರವಣಿಗೆಕಾರರನ್ನು ಸ್ವಾಗತಿಸುತ್ತಿದ್ದುದು ಕಾರ್ಮಿಕ ವರ್ಗದ ಐಕ್ಯ ಹೋರಾಟದ ಸಂಕೇತವಾಗಿತ್ತು.

ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಶ್ರೀ ಆರ್.ಜಿ.ಕಾರ್ನಿಕ್ ವಹಿಸಿದ್ದರು. ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಶ್ರೀ ಇ.ಬಾಲನಂದನ್, ಸಿಪಿಐ, ಆರ್.ಎಸ್.ಪಿ, ಜನತಾದಳ, ಕಾಂಗ್ರೆಸ್(ಎಸ್), ಕಾಂಗ್ರೆಸ್(ಜಿ), ಮುಂದಾಳುಗಳು ಹಾಗೂ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸುಕೋಮಲ್ ಸೇನ್ ಬಹಿರಂಗ ಸಭೆಯಲ್ಲಿ ಭಾಷಣ ಮಾಡಿದರು. ಸ್ವಾಗತ ಸಮಿತಿ

ಪದಾಧಿಕಾರಿಗಳು

ಗೌರವಅಧ್ಯಕ್ಷರು
- ಎಂ.ಆರ್.ಚಪ್ಪನ್(ತಮಿಳುನಾಡು)

ಅಧ್ಯಕ್ಷರು- ಆರ್.ಜಿ.ಕಾರ್ನಿಕ್(ಮಹಾರಾಷ್ಟ್ರ)

ಪ್ರಧಾನ ಕಾರ್ಯದರ್ಶಿ
-ಸುಕೋಮಲ್ ಸೇನ್(ಪಶ್ಚಿಮ ಬಂಗಾಳ)

ಉಪಾಧ್ಯಕ್ಷರುಗಳು
- ಎಸ್.ಎನ್.ತಿವಾರಿ(ಮಧ್ಯಪ್ರದೇಶ)
- ಎಸ್.ಜಿ.ಭೋಗರಾಜ್(ಆಂಧ್ರಪ್ರದೇಶ)
- ಕೆ.ಸಿಪ್ಪೇಗೌಡ(ಕರ್ನಾಟಕ)
- ಅಜೋಯ್ ಮುಖ್ಯೋಪಾಧ್ಯಾಯ (ಪ.ಬಂಗಾಳ)
- ಸುರೀಂದರ್ ಸಿಂಗ್ ಬಾರಿ(ಪಂಜಾಬ್)
- ಉದಯ ಸಿಂಗ್ ರಾಠೋಡ್(ರಾಜಸ್ಥಾನ)

ಖಜಾಂಚಿ - ಪ್ರಬೀರ್ ಸೇನ್ ಗುಪ್ತಾ

ಕಾರ್ಯದರ್ಶಿಗಳು
- ಕೆ.ಬಾಲಕೃಷ್ಣನ್ ನಂಬಿಯಾರ್(ಕೇರಳ)
- ಕೆ.ವಿ.ಬಿ.ರೇ(ಮಹಾರಾಷ್ಟ್ರ)
- ಕೆ.ಗಂಗಾಧರನ್(ತಮಿಳುನಾಡು)
- ಹರಿನಾಥ್(ಅಸ್ಸಾಂ)
- ಯೋಗೇಂದ್ರ ಪ್ರಸಾದ್ ಸಿಂಗ್(ಬಿಹಾರ್)
- ಲಲನ್ ಪಾಂಡೆ(ಉತ್ತರ ಪ್ರದೇಶ)

ಕೇಂದ್ರ ಕಾರ್ಯದರ್ಶಿ - ಮಲಯ್ ರಾಯ್

ಪುಸ್ತಕ ಪರಿಚಯ

ಸಮಾನತೆಯ ಹಾದಿಯಲ್ಲಿ ಮೀಸಲಾತಿ



ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರಿಗೆ ಜೀವನದ ಎಲ್ಲ ಆಗುಹೋಗುಗಳಲ್ಲಿ ಅರ್ಧದಷ್ಟು ಅವಕಾಶ ದೊರೆಯಬೇಕು. ಬದುಕಿನ ಸುಖ-ದುಃಖ, ಗಳಿಕೆ-ನಷ್ಟ ಹೊಣೆಗಾರಿಕೆ, ಸ್ವಾತಂತ್ರ್ಯ, ಎಲ್ಲದರಲ್ಲೂ ಗಂಡಸರು-ಹೆಂಗಸರಿಬ್ಬರೂ ಸರಿಸಮಾನ ಪಾಲು ಪಡೆಯಬೇಕೆಂದು ನಮ್ಮ ಕನಸು. ಆ ಕನಸಿನ ಸಾಕಾರಕ್ಕಾಗಿ ಕೆಲಸ ಮಾಡುವುದು ನಮ್ಮ ಉದ್ದೇಶ.

ಇಂತಹ ಸಮಾನತೆ ಮೂಡಿ ಬರಬೇಕಾದದ್ದು ಮನಸ್ಸುಗಳಿಂದ ಹಾಗೂ ಮನೆಗಳಿಂದ ಸ್ವಯಂ ಪ್ರೇರಿತವಾಗಿ ಬರಬೇಕಿತ್ತು. ಆದರೆ ಹಾಗಾಗಲಿಲ್ಲ, ಆಗುವ ಹಾಗೆಯೂ ಕಾಣುತ್ತಿಲ್ಲ. ಮತ್ತೇನು ಮಾಡುವುದು ಸಮಾನತೆಗಾಗಿ ಹೋರಾಟ ಮಾಡುವುದು ಅನಿವಾರ್ಯವಾಗಿದೆ. ಈ ಹೋರಾಟದ ಹಾದಿಯಲ್ಲಿ ಸಿಕ್ಕಷ್ಟು ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಾ ಸಾಗಬೇಕು. ನಮ್ಮ ಸಾಮರ್ಥ್ಯ ನಮಗೆ ನ್ಯಾಯವಾಗಿ ಸಲ್ಲಬೇಕಾದ್ದನ್ನು ತಂದೊಪ್ಪಿಸುತ್ತದೆ.

ಇಂತಹ ಸಮಾನತೆಯ ಹೋರಾಟ ದಲ್ಲಿ ಸಾಗಿರುವ ಜನವಾದಿ ಮಹಿಳಾ ಸಂಘಟನೆ ರಾಜಕೀಯ ಕ್ಷೇತ್ರದಲ್ಲಿ ಸಮಾನತೆಯ ಸಾಧನೆಗೆ ಒಂದು ಹೆಜ್ಜೆಯಾಗಿ ಮೀಸಲಾತಿಗಾಗಿ ಆಗ್ರಹಪಡಿಸುತ್ತದೆ.

ಮಹಿಳೆಯರ ದುಸ್ಥಿತಿಗೆ ಕಾರಣಗಳು ಹಲವಾರು. ಕೌಟುಂಬಿಕ ಶೈಕ್ಷಣಿಕ, ಸಾಮಾಜಿಕ,ಆರ್ಥಿಕ,ಸಾಂಸ್ಕೃತಿಕ,ಇವೆಲ್ಲವೂ ಒಟ್ಟಾರೆಯಾಗಿ ರಾಜಕೀಯದಿಂದ ಮಹಿ

- ಸತ್ಯಾ.ಎಸ್.

ಳೆಯರನ್ನು ದೂರವಿಟ್ಟಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕಾರಣವು ಬದುಕಿನ ಬಹು ಮುಖ್ಯ ಅಂಶವಾಗಿರುವುದರಿಂದ ಪ್ರತಿಯೊಬ್ಬ ವ್ಯಕ್ತಿಯೂ ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು ಅಗತ್ಯವಾಗಿದೆ. ಈ ಪಾಲ್ಗೊಳ್ಳುವಿಕೆ ಮತದಾನದ ಮೂಲಕ ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡುವುದರಿಂದ ಹಿಡಿದು ನೀತಿ ನಿರೂಪಣಾ ಸ್ಥಾನಗಳಲ್ಲಿ ಸ್ವಯಂ ಪಾಲ್ಗೊಳ್ಳುವವರೆಗೆ ಅನೇಕ ಹಂತಗಳಲ್ಲಿ ಹರಡಿಕೊಂಡಿದೆ. ಮತದಾನದ ಹಂತದಲ್ಲಿ ಪುರುಷರಷ್ಟೇ ಪ್ರಾಮುಖ್ಯತೆ ಪಡೆಯುವ ಮಹಿಳೆಯರು ಮೇಲೆ ಹೋದಂತೆಲ್ಲ ಇತರೆ ಹಂತಗಳಲ್ಲಿ ನೇಪಥ್ಯಕ್ಕೆ ಸರಿದಿರುವುದು ಇಂದಿನ ವಿಪರ್ಯಾಸ. ಈ ಪರಿಸ್ಥಿತಿ ಬದಲಾಗಿ ಎಲ್ಲಾ ಹಂತಗಳಲ್ಲಿಯೂ ಸರಿಸಮಾನ ಸಂಖ್ಯೆಯಲ್ಲಿ ಸ್ತ್ರೀ-ಪುರುಷರು ಪಾಲ್ಗೊಂಡರೆ ಮಾತ್ರ ಮಹಿಳೆಯರಿಗೆ ಸಾಮಾಜಿಕ ನ್ಯಾಯ ದೊರಕುತ್ತದೆ. ಈ ಹಿನ್ನೆಲೆಯಲ್ಲಿ ಹಲವಾರು ದಶಕಗಳಿಂದ ಹಲವು ರೂಪಗಳಲ್ಲಿ ಪ್ರಸ್ತಾಪಕ್ಕೆ ಬರುತ್ತಿದ್ದ "ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ" ಹೆಚ್ಚಿಸುವ ಪ್ರಯತ್ನಗಳು ಇದೀಗ ಶಾಸನಸಭೆಗಳಲ್ಲಿ ಪ್ರತಿಶತ 33ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕೆಂಬ ಮಸೂದೆಯ ಮಂಡನೆಯವರೆಗೆ ಬಂದು ನಿಂತಿದೆ.

ಮಹಿಳಾ ಸಂಘಟನೆಗಳ ಅವಿರತ ಶ್ರಮದಿಂದಾಗಿ 1996ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಎಲ್ಲಾ ರಾಷ್ಟ್ರೀಯ ಪಕ್ಷಗಳು ಚುನಾವಣಾ ಪ್ರಣಾಳಿಕೆಯಲ್ಲಿ ಈ ರೀತಿಯ ಮೀಸಲಾತಿ ಮಸೂದೆಯನ್ನು ಬೆಂಬಲಿಸುವುದಾಗಿಯೂ ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಅದನ್ನು ಜಾರಿಗೆ ತರುವುದಾಗಿಯೂ ಘೋಷಿಸಿದ್ದವು. ಹಲವು ಪ್ರಮುಖ ಪಕ್ಷಗಳು ಬೆಂಬಲದಿಂದ ರಚಿತವಾದ ಸಂಯುಕ್ತರಂಗ ಸರ್ಕಾರ ತನ್ನ "ಕನಿಷ್ಠ ಸಾಮಾನ್ಯ ಕಾರ್ಯಕ್ರಮ"ದ ಪಟ್ಟಿಯಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಸ್ಥಾನ ಕಲ್ಪಿಸಿತು. ಅದರಂತೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಪ್ರತಿಶತ 33ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲು ಇಡುವ ಪ್ರಸ್ತಾಪದೊಂದಿಗೆ ಸರ್ಕಾರ 81ನೇ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಬಜೆಟ್ ಅಧಿವೇಶನದಲ್ಲಿ ಮಂಡಿಸಿತು.

ಬಹುತೇಕ ಎಲ್ಲಾ ಸದಸ್ಯರು ಸರ್ಕಾರದ ಈ ಕ್ರಮವನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು, ಯಾವುದೇ ಚರ್ಚೆ ಇಲ್ಲದೆಯೇ ಈ ಮಸೂದೆಯನ್ನು ಅಂಗೀಕರಿಸಬೇಕೆಂದು ಕೆಲವು ಹಿರಿಯ ಸದಸ್ಯರು ಸಲಹೆ ಮಾಡಿದರು. ಪ್ರಧಾನ ಮಂತ್ರಿಗಳು ಕರೆದಿದ್ದ ಸರ್ವ ಪಕ್ಷ ಸಭೆಯಲ್ಲಿ ಎಲ್ಲ ಪಕ್ಷಗಳ ಧುರೀಣರು ಮಸೂದೆಯನ್ನು ಬೆಂಬಲಿಸುವುದಾಗಿ ಹೇಳಿದರು. ಎಲ್ಲ ಪಕ್ಷಗಳು ಇದರ ಬಗ್ಗೆ ಸಹಮತ ಹೊಂದಿರುವುದರಿಂದ ಚರ್ಚೆಯ ಅಗತ್ಯವಿಲ್ಲವೆಂದು ಹೇಳಿದರು. ಇದು ಸಂವಿಧಾನ ತಿದ್ದುಪಡಿ ಮಸೂದೆಯಾದ್ದರಿಂದ ಇದರ ಅಂಗೀಕಾರಕ್ಕೆ ಸದನದಲ್ಲಿ ಮೂರನೇ ಎರಡು ಭಾಗದಷ್ಟು ಸದಸ್ಯರ ಹಾಜರಾತಿ ಕಡ್ಡಾಯ. ಇಷ್ಟು ಸಂಖ್ಯೆಯ ಸದಸ್ಯರು ಇರುವಂತೆ ನೋಡಿಕೊಳ್ಳುವುದಾಗಿಯೂ ಎಲ್ಲ ಪಕ್ಷಗಳು ಮಾತು ಕೊಟ್ಟವು.

ಆದರೆ ಆದದ್ದೇ ಬೇರೆ. ಎಡಪಕ್ಷಗಳ ಎಲ್ಲ ಸದಸ್ಯರನ್ನು ಹೊರತುಪಡಿಸಿದರೆ ಬೇರ್‍ಯಾವ ಪಕ್ಷದ ಸದಸ್ಯರೂ ಪೂರ್ಣಪ್ರಮಾಣದಲ್ಲಿ ಹಾಜರಿರಲಿಲ್ಲ. ಮಸೂದೆಯ ಅಂಗೀಕಾರಕ್ಕೆ ಬೇಕಾದಷ್ಟು ಸದಸ್ಯರು ಹಾಜರಿರದ ಹಾಗೆ ಕೆಲವು ಪಕ್ಷಗಳು ನೋಡಿಕೊಂಡವು, ಮಸೂದೆಯನ್ನು ಅನಿವಾರ್ಯವಾಗಿ ಚರ್ಚೆಗೆ ತೆರದಿಡಬೇಕಾಯ್ತು. ಈ ಚರ್ಚೆಯ ಸಂದರ್ಭದಲ್ಲಿ ಮುಖವಾಡಗಳ ಹಿಂದಿನ ಚಹರೆಗಳು ಬಯಲಾಗತೊಡಗಿದವು. ಮಸೂದೆ ಜಂಟಿ ಆಯ್ಕೆ ಸಮಿತಿಯ ಮುಂದಕ್ಕೆ ಹೋಯಿತು. ಈಗ ನವಂಬರ್‌ನ ಚಳಿಗಾಲದ ಅಧಿವೇಶನವೂ ಕಳೆದುಹೋಯ್ತು. ಎಲ್ಲರೂ ಅಚ್ಚರಿ ಪಡುವಂತೆ ಗೀತಾ ಮುಖರ್ಜಿ(ಸಿಪಿಐ) ಅವರ ನೇತೃತ್ವದ ಜಂಟಿ ಆಯ್ಕೆ ಸಮಿತಿ ಸರ್ಕಾರದಲ್ಲಿ ತನ್ನ ವರದಿ ಮಂಡಿಸಿತು. ಆದರೂ ಮಸೂದೆ ಕಾಯಿದೆಯಾಗಿ ಪರಿವರ್ತನೆಗೊಳ್ಳಲೇ ಇಲ್ಲ. ಇದನ್ನು ಆಗುಮಾಡಬೇಕಾದ ಜವಾಬ್ದಾರಿ ಈಗ ಸಂಸತ್ ಭವನದಿಂದ ಹೊರಕ್ಕೆಬಂದಿದೆ.ನಮ್ಮನಿಮ್ಮ ಹೆಗಲ ಮೇಲಿದೆ. ಈ ಜವಾಬ್ದಾರಿಯ ನಿರ್ವಹಣೆಯಲ್ಲಿ ಒಂದು ಪುಟ್ಟ ಕೆಲಸ ಈ ಕಿರುಪುಸ್ತಕದ ಪ್ರಕಟಣೆ. ಈ ಮಸೂದೆ ಜಾರಿಗೆ ಬರಬೇಕೆಂದರೆ ಬರಿ ಮಹಿಳೆಯರು ಒಂದಾದರೆ ಸಾಲದು ಸಮಾನತೆಯಲ್ಲಿ ನಂಬಿಕೆ ಇರುವ ಸ್ತ್ರೀ - ಪುರುಷರೆಲ್ಲರೂ ಒಂದಾಗಬೇಕು.

ಸೋಮನಾಥ ಚಟರ್ಜಿಗೆ ಸಂಸತ್ ಪ್ರಶಸ್ತಿ

ಪಾರ್ಲಿಮೆಂಟ್ ಎಂಬುದು ಗದ್ದಲದ ಸಂತೆ, ಕಿತ್ತಾಟಗಳ ಜಾಗ, ಪಕ್ಷಗಳ ನಡುವಿನ ಪ್ರಕೋಪಕ್ಕೆ ಹೋಗುವ ಜಾಗ ಎಂದು ಮಾತ್ರ ಜನರು ಭಾವಿಸುವಂತಹ ಘಟನೆ ಗಳೇ ಮೇಲಿಂದ ಮೇಲೆ ನಡೆಯುತ್ತಿರುವ ಸಂದರ್ಭದಲ್ಲಿ ಅದಕ್ಕೊಂದು ಅರ್ಥಪೂರ್ಣ ಆಯಾಮ ತಂದುಕೊಟ್ಟವರು ಕಾಮ್ರೇಡ್ ಸೋಮನಾಥ ಚಟರ್ಜಿ.

ಪಾರ್ಲಿಮೆಂಟ್ ಜನರ ನೋವುಗಳನ್ನು ಸರ್ಕಾರಕ್ಕೆ ಮುಟ್ಟಿಸುವ ಜನರ ನೋವಿಗೆ ಅರ್ಥಪೂರ್ಣ ಪರಿಹಾರ ಕಂಡುಹಿಡಿಯುವ ಸ್ಥಳ ಎಂದು ಮನಗಂಡು ಅದಕ್ಕಾಗಿ ಸತತವಾಗಿ ಶ್ರಮಿಸಿದ ಕಾರಣಕ್ಕೆ ಕಾಮ್ರೇಡ್ ಸೋಮನಾಥ ಚಟರ್ಜಿ ಅವರಿಗೆ ಭಾರತ ಸರ್ಕಾರ 'ಅತ್ಯುತ್ತಮ ಸಂಸದೀಯಪಟು' ಪ್ರಶಸ್ತಿ ನೀಡಿ ಗೌರವಿಸಿದೆ.

ಲೋಕಸಭೆಯ ಸ್ಪೀಕರ್ ಶಿವರಾಜ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಹಾಗೂ ಪತ್ರಿಕೆಯ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿ ಸೋಮನಾಥ ಚಟರ್ಜಿಯವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಸಿಪಿಐ(ಎಂ)ನ್ನು ಟೀಕಿಸಲು ಸದಾ ತುದಿಗಾಲಲ್ಲಿರುವ ಪಕ್ಷಗಳೂ ಸೋಮನಾಥ ಚಟರ್ಜಿ ಅವರ ವಾದವನ್ನು ಕಂಡು ಬೆರಗಾಗಿ ಮಾತಿಲ್ಲದೆ ಈ ಪ್ರಶಸ್ತಿ ನೀಡಿವೆ.

ಎಲ್ಲರ ಜೊತೆ ಉತ್ತಮ ಸಂಬಂಧ ಹೊಂದಿರುವ ಚಟರ್ಜಿ ಅತ್ಯುತ್ತಮ ಸಂಸದೀಯ ಪಟು ಅವರ ಆಲೋಚನೆ, ವಾದ ಮಾಡುವ ರೀತಿ ವಿಷಯಗಳಲ್ಲಿ ಆಳವಾದ ಅನುಭವ ಆಕರ್ಷಕವಾದದ್ದು ಎಂದು ಶಿವರಾಜಪಾಟೀಲ್ ಪ್ರಶಂಸಿಸಿದ್ದಾರೆ. ಹಲವು ದಶಕಗಳಿಂದ ಸಂಸತ್ ಕಲಾಪವನ್ನು ವರದಿ ಮಾಡುತ್ತಿರುವ ಹಿರಿಯ ಪತ್ರಕರ್ತರೊಬ್ಬರು 'ಇವರು ಸಿಪಿಎಂನ ದೊಡ್ಡ ಸಂಪತ್ತು' ಎಂದು ಬಣ್ಣಿಸಿದ್ದಾರಲ್ಲದೆ. ಕಂಚಿನ ಕಂಠದಲ್ಲಿ ಮಾತನಾಡುವ ಚಟರ್ಜಿ ಅವರ ವಾದವನ್ನು ತಪ್ಪಿಸಿಕೊಳ್ಳಲು ಯಾರೂ ಇಷ್ಟಪಡುವುದಿಲ್ಲ. ಸಂವಿಧಾನವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರುವ ಚಟರ್ಜಿ ಅವರು ಸುಪ್ರೀಂಕೋರ್ಟಿನ ನ್ಯಾಯಾದೀಶ ವಿ.ರಾಮಸ್ವಾಮಿ ಅವರು ಹಗರಣದಲ್ಲಿ ಸಿಕ್ಕಿಹಾಕಿಕೊಂಡಾಗ ಅವರ ವಿರುದ್ಧ ಮಾಡಿದ ವಾದ ಸ್ಮರಣೀಯವಾದುದ್ದು ಎನ್ನುತ್ತಾರೆ.

ಕೆಂಪು ಚಿಕ್ಕಪ್ಪ (ರೆಡ್ ಅಂಕಲ್) ಎಂದೇ ಟೀಕೇಕಾರರಿಂದ ಕರೆಯಲ್ಪಡುವ ಸೋಮನಾಥ ಚಟರ್ಜಿ ವಾಜಪೇಯಿ ಅವರ ನೇತೃತ್ವದ ಬಿಜೆಪಿಯ 13 ದಿನಗಳ ಸರ್ಕಾರದ ವಿರುದ್ಧ ಮಂಡಿಸಿದ ಅವಿಶ್ವಾಸ ಗೊತ್ತುವಳಿಯ ಪರವಾಗಿ ಮಂಡಿಸಿದ 'ಖಡಕ್' ವಾದ ಎಲ್ಲರಿಂದ ಪ್ರಶಂಸೆ ಪಡೆದಿತ್ತು.

67 ವರ್ಷದ ಚಟರ್ಜಿ ಅವರು ಕಲ್ಕತ್ತ ನಂತರ ಬ್ರಿಟನ್‌ನಲ್ಲಿ ವ್ಯಾಸಂಗ ಮಾಡಿದರು. 1968 ರಲ್ಲಿ ಸಿಪಿಎಂ ಸೇರಿದ ಅವರು 1971 ರಿಂದ ಲೋಕಸಭಾ ಸದಸ್ಯರಾಗಿದ್ದಾರೆ. ಪಶ್ಚಿಮಬಂಗಾಳ ಕೈಗಾರಿಕಾ ಅಭಿವೃದ್ಧಿ ನಿಗಮದ ಅದ್ಯಕ್ಷರೂ ಆಗಿರುವ ಚಟರ್ಜಿ ಸುಪ್ರೀಂಕೋರ್ಟಿನ ಅಡ್ವೋಕೇಟ್ ಕೂಡಾ.

ಕೃಪೆ; 'ನಿರಂತರ' ಗೋಡೆಪತ್ರಿಕೆ ಮಂಗಳೂರು.

ಕಾಂ.ಕೆ.ವಿ.ರಾವ್ ನಿಧನ

ಬೆಳ್ತಂಗಡಿ ತಾಲೂಕಿನ ಬಡ ಜನಸಾಮಾನ್ಯರ, ದುಡಿಯುವ ವರ್ಗದ ನೇತಾರರಾಗಿ ತಾಲೂಕಿನ ಕಣ್ಮಣಿಯಾಗಿ ತನ್ನ ಜೀವಮಾನಪರ್ಯಂತ ಅವರ ಏಳಿಗೆಗೆ ಅವರನ್ನು ಸಂಘಟಿತರನ್ನಾಗಿ ಮಾಡಿ ಹೋರಾಡಿದ ಹಿರಿಯ ಮಾರ್ಕ್ಸ್‌ವಾದಿ ಚಿಂತಕ, ಸ್ವಾತಂತ್ರ್ಯಹೋರಾಟಗಾರ ಹಾಗೂ ಬೆಳ್ತಂಗಡಿ ತಾಲೂಕು ರೈತ ಸಂಘದ ಅಧ್ಯಕ್ಷರೂ ಆಗಿದ್ದ ಕಾಮ್ರೇಡ್ ಕೆ.ವಿ.ರಾವ್(ಎಳಚಿತ್ತಾಯರು) ಅವರು ಡಿಸೆಂಬರ್ ೩೧, ೧೯೯೬ರಂದು ತನ್ನ ೭೭ನೇ ವರ್ಷದ ಪ್ರಾಯದಲ್ಲಿ ನಿಧನರಾದರು. "ಮನುಷ್ಯನ ಸ್ವಭಾವವು ಅವನ ಸಾಮಾಜಿಕ ಪರಿಸರದಿಂದ ರೂಪಿತವಾಗುತ್ತದೆ ಎಂದಾದರೆ ಅವನ ಸಾಮಾಜಿಕ ಪರಿಸರವು ಹೆಚ್ಚು ಮಾನವೀಯವಾಗಬೇಕಾಗಿದ್ದು ಅಗತ್ಯ ಎಂದು ಮನಗಂಡ ಕಾಂ.ಕೆ.ವಿ.ರಾವ್ ಸೋಲನ್ನೆಂದೂ ಒಪ್ಪದ ಹೋರಾಟಗಾರ, ಜಯದ ಭರವಸೆಯನ್ನೆಂದಿಗೂ ಬಿಡದ ಛಲಗಾರ. ಧೈರ್ಯ ಸಾಹಸಗಳೇ ಅವರ ಬದುಕಿನ ಜೀವಾಳವಾಗಿತ್ತು ಎಂದು ಸಿಪಿಐ(ಎಂ)ನ ಬೆಳ್ತಂಗಡಿ ತಾಲೂಕು ಸಮಿತಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಹೇಳಿದೆ. ಜನವರಿ ೫ರಂದು ರುಕ್ಮಯ್ಯ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿ ಸಭೆ ನಡೆಯಿತು.

ಬೆಳ್ತಂಗಡಿ ತಾಲೂಕಿನಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಗೆ, ಬೆಳವಣಿಗೆಗೆ ಹಾಗೂ ಸಮಗ್ರ ಭೂಸುಧಾರಣಾ ಕಾನೂನಿಗಾಗಿ ಅವರು ತನ್ನ ಜೀವವನ್ನೇ ಮುಡಿಪಾಗಿಟ್ಟು ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದ್ದರು. ಗೇಣಿದಾರರ ಪರ ಹೋರಾಡುತ್ತಾ, ಭೂಮಾಲಕರಿಂದ ಮಾರಣಾಂತಿಕ ಹಲ್ಲೆಗೊಳಗಾಗಿದ್ದರೂ ತನ್ನ ಮಾರ್ಕ್ಸ್‌ವಾದಿ ಚಿಂತನೆಯಿಂದ ಮುನ್ನಡೆದು ರೈತರ ಬೇಡಿಕೆ ಈಡೇರಿಕೆಗಾಗಿ ಕೆಲವು ಬಾರಿ ಬೆಂಗಳೂರಿಗೆ ಕಾಲ್ನಡಿಗೆ ಜಾಥಾ ನಡೆಸಿ, ಭೂಸುಧಾರಣಾ ಕಾನೂನು ಆದ ಮೇಲೂ ಅದರ ಜ್ಯಾರಿಗಾಗಿ ತನ್ನ ಬಾಳ್ವೆಯನ್ನು ಬಡ ಜನರಿಗಾಗಿ, ಬೀಡಿ ಕಾರ್ಮಿಕರಿಗಾಗಿ ಮುಡಿಪಾಗಿಟ್ಟು ತಾನು ಸದಾ ಬಡವನಾಗಿಯೇ ಜೀವನ ಸಾಗಿಸಿದ್ದ ಇವರು ತೋರಿಸಿಕೊಟ್ಟ ದಾರಿಯಲ್ಲಿ ತಾಲೂಕಿನ ದುಡಿಯುವ ಜನ ಮುನ್ನಡೆದು ಕಮ್ಯುನಿಸ್ಟ್ ಪಕ್ಷವನ್ನು ಬೆಳೆಸುವುದೇ ಅವರಿಗೆ ನೀಡುವ ಪ್ರಮುಖ ಶ್ರದ್ಧಾಂಜಲಿ ಎಂದು ತಿಳಿಸಿದೆ. ಅವರ ಅಗಲುವಿಕೆಯಿಂದ ಆದ ದುಃಖ-ನಷ್ಟವನ್ನು ಸೈರಿಸುವ ಶಕ್ತಿ ಅವರ ಮನೆಯವರಿಗೆ, ತಾಲೂಕಿನ ಜನತೆಗೆ ಬರಲಿ ಎಂದು ಹಾರೈಸಲಾಯಿತು.

ಒಂದು ವಾರದ ಹಿಂದೆಯಷ್ಟೇ ಅಂದರೆ ಡಿಸೆಂಬರ್ ೨೫, ೧೯೯೬ರಂದು ಕರ್ನಾಟಕ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರು ಪುತ್ತೂರಿನಲ್ಲಿ ಕೆ.ವಿ.ರಾವ್ ಅವರ 'ಬಾಡ' ಕಾದಂಬರಿ ಬಿಡುಗಡೆಗೊಳಿಸಿದ್ದರು. ಪುತ್ತೂರಿನ ಬೋಳಂತಕೋಡಿ ಈಶ್ವರ ಭಟ್ ಅವರು ಈ ಪುಸ್ತಕ ಪ್ರಕಟಿಸಲು ಸಹಕರಿಸಿದ್ದರು.

ಮೊದಲಿಗೆ ಬೆಳ್ತಂಗಡಿ ಸಿಪಿಐ(ಎಂ) ಕಾರ್ಯದರ್ಶಿ ಶಿವಕುಮಾರ್ ಸ್ವಾಗತಿಸಿ ನಿರ್ಣಯ ಮಂಡಿಸಿದರು. ನಂತರ ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಜನಾರ್ಧನ ನಾಯಕ್, ತಾಲೂಕು ರೈತ ಸಂಘದ ಕಾರ್ಯದರ್ಶಿ ಹರಿದಾಸ್ ತಾಲೂಕು ಬೀಡಿ ಕೆಲಸಗಾರರ ಸಂಘದ ಅಧ್ಯಕ್ಷ ಬಿ.ಎಂ.ಭಟ್, ಹಿರಿಯ ಕಾರ್ಮಿಕ ಮುಂದಾಳು ವಾಸುದೇವ ಪೆರಾಜೆ ಮೊದಲಾದವರು ಕೆ.ವಿ.ರಾವ್ ಅವರ ಹೋರಾಟದ ಬಾಳನ್ನು ಸ್ಮರಿಸಿ ಮಾತನಾಡಿದರು. ಕೊನೆಗೆ ಎಲ್.ಮಂಜುನಾಥ್ ವಂದಿಸಿದರು.

ರಾಜಕಾರಣಿಗಳನ್ನು, ಉದ್ಯಮಿಗಳನ್ನು ಭ್ರಷ್ಟಾಚಾರದ ಹಗರಣಗಳಲ್ಲಿ ಬಂಧಿಸಬಾರದು, ಇತರ ಕ್ರಮಗಳನ್ನು ಕೈಗೊಳ್ಳಬಾರದು ಎಂಬ ಬೊಬ್ಬೆಯ ಬಗ್ಗೆ ಆರ್.ಕೆ.ಲಕ್ಷ್ಮಣ್ ವ್ಯಂಗ್ಯ-ಕೃಪೆ: ಟೈಮ್ಸ್ ಆಫ್ ಇಂಡಿಯಾ



ಜ್ಯೋತಿಬಸು ಬಗ್ಗೆ ಸಾಕ್ಷ್ಯ ಚಿತ್ರ


ಕಾಮ್ರೇಡ್ ಜ್ಯೋತಿ ಬಸು -ಭಾರತದಲ್ಲಿ ಕೆಂಬಾವುಟ ಪಟಪಟನೆ ಹಾರಲು ಕೊಡಿಗೆ ನೀಡಿದ ಮಹತ್ವದ ಸಂಗಾತಿ ಜ್ಯೋತಿಬಸು ಅವರ ಬಗ್ಗೆ ಈಗ ಚಲನಚಿತ್ರವೊಂದು ಸಿದ್ಧವಾಗುತ್ತಿದೆ.

ಜ್ಯೋತಿಬಸು ಅವರ ಜೀವನ, ಕಮ್ಯುನಿಷ್ಟರಾದದ್ದು, ಮುಖ್ಯಮಂತ್ರಿಯಾಗಿ ಅವರು ಮಾಡಿದ ಸಾಧನೆ, ಕಮ್ಯುನಿಸ್ಟ್ ಸರ್ಕಾರವನ್ನು ದಶಕಗಳ ಕಾಲ ಯಶಸ್ವಿಯಾಗಿ ಮುನ್ನಡೆಸಿದ ರೀತಿಯನ್ನು ಎಲ್ಲರಿಗೆ ತಿಳಿಸಿಕೊಡಲು ಈ ಚಿತ್ರವನ್ನು ಸಿದ್ಧಪಡಿಸಲಾಗಿದೆ.

ಅಂತರಾಷ್ಟ್ರೀಯ ಖ್ಯಾತಿಯ, ಸಾಕ್ಷ್ಯ ಚಿತ್ರಗಳಿಗೆ ಹಲವಾರು ಪ್ರಶಸ್ತಿಗಳನ್ನು ಪಡೆದಿರುವ ಗೌತಮ್ ಘೋಷ್ ಅವರೇ ಈ ಚಿತ್ರ ನಿರ್ಮಿಸಲು ಮುಂದೆ ಬಂದಿದ್ದಾರೆ. ಗೌತಮ್ ಘೋಷ್ ಅವರು ಇತ್ತೀಚೆಗೆ ಬಿಯಾಂಡ್ ದಿ ಹಿಮಾಲಯಾಸ್; ಟೇಲ್ಸ್ ಆಫ್ ಸಿಲ್ಕ್ ರೋಡ್ ಎಂಬ ಸಾಕ್ಷ್ಯ ಚಿತ್ರ ರೇಷ್ಮೆ ಎಲ್ಲೆಲ್ಲಿ ಪ್ರಯಾಣ ಮಾಡಿತೋ ಅಲ್ಲಿಗೆಲ್ಲಾ ಹೋಗಿ ಚಿತ್ರ ತಯಾರಿಸಿದ್ದರು. ಚಲನಚಿತ್ರಕ್ಕಾಗಿ ಶೂಟಿಂಗ್ ನಡೆಸಲು ಚೀನಾ ವಿದೇಶೀಯರಿಗೆ ಪ್ರವೇಶ ನೀಡಿದ್ದಾರೆ

ಚೀನಾದಲ್ಲಿ ಶೂಟಿಂಗ್ ನಡೆಸಲು ಅನುಮತಿ ಪಡೆದ ಮೊದಲ ಭಾರತೀಯ ಎಂಬ ಹೆಮ್ಮೆ ಇವರದ್ದು. ಈ ಚಿತ್ರ ಇತ್ತೀಚೆಗೆ ತಾನೆ "ಡಿಸ್ಕವರಿ ಚಾನಲ್"ನಲ್ಲಿ ಐದು ಕಂತುಗಳಲ್ಲಿ ಪ್ರಸಾರವಾಗುತ್ತೆ.

ಜ್ಯೋತಿಬಸು ಅವರು ಇತ್ತೀಚೆಗೆ ಬಾಂಗ್ಲಾದೇಶಕ್ಕೆ ಭೇಟಿ ನೀಡಿದ್ದಾಗ ಅವರೊಡನೆ ಪ್ರಯಾಣ ಮಾಡಿ ಇದನ್ನು ಗೌತಮ್ ಘೋಷ್ ಚಿತ್ರೀಕರಿಸಿಕೊಂಡರು. ಜ್ಯೋತಿಬಸು ಕಲ್ಕತ್ತದಲ್ಲಿ ತಾವು ಕಳೆದ ಬಾಲ್ಯ, ಈಗ ಬಾಂಗ್ಲಾದೇಶದಲ್ಲಿರುವ ಆದರೆ ಆಗ ಭಾರತದ ಭಾಗವಾಗಿಯೇ ಇದ್ದ ತಮ್ಮ ಊರಿಗೆ ಪದೇ ಪದೇ ಕೊಡುತ್ತಿದ್ದ ಭೇಟಿಯನ್ನು ಜ್ಯೋತಿಬಸು ನೆನಸಿಕೊಂಡದ್ದನ್ನು ಗೌತಮ್ ಘೋಷ್ ಚಿತ್ರೀಕರಿಸಿಕೊಂಡಿದ್ದಾರೆ.



ಕೃಪೆ: 'ನಿರಂತರ' ಗೋಡೆ ಪತ್ರಿಕೆ ಮಂಗಳೂರು.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ.